ತ.ರಾ.ಸು ರವರ

“ಆಕಸ್ಮಿಕ”–”ಅಪರಾಧಿ”–”ಪರಿಣಾಮ” ಕಾದಂಬರಿ ಆಧಾರಿತ

# ಆಕಸ್ಮಿಕ

**ಚಿತ್ರಕಥೆ**

(ನಿರ್ದೇಶಕರ ಟಿಪ್ಪಣಿ ಮತ್ತು ಚಿತ್ರಿಕೆಗಳ ತಾಂತ್ರಿಕ ವಿವರಗಳೊಂದಿಗೆ)

ಚಿತ್ರಕಥೆ–ನಿರ್ದೇಶನ

**ಟಿ.ಎಸ್. ನಾಗಾಭರಣ**

ಸಂಭಾಷಣೆ

**ಚಿ. ಉದಯಶಂಕರ್**

**ಪಾಲ್ ಸುದರ್ಶನ್**

**ಪ್ರಕಾಶಕರು:**

ಟೋಟಲ್ ಕನ್ನಡ

638, 31ನೇ ಅಡ್ಡ ರಸ್ತೆ, 10ನೇ ‘ಬಿ’ ಮುಖ್ಯ ರಸ್ತೆ

ಜಯನಗರ 4ನೇ ವಿಭಾಗ, ಬೆಂಗಳೂರು – 560 011

ದೂರವಾಣಿ: 080–4146 0325 ಸನಿಹವಾಣಿ: 92434 55672

ಮಿಂಚಂಚೆ: support@totalkannada.com

ಅಂತರ್ಜಾಲ: www.totalkannada.com

**ಆಕಸ್ಮಿಕ: ಚಿತ್ರಕಥೆ**
(ನಿರ್ದೇಶಕರ ಟಿಪ್ಪಣಿ ಮತ್ತು ಚಿತ್ರಿಕೆಗಳ ತಾಂತ್ರಿಕ ವಿವರಗಳೊಂದಿಗೆ)

**ಲೇಖಕರು**: ಟಿ.ಎಸ್. ನಾಗಾಭರಣ

**ಪ್ರಕಾಶಕರು**:
ಟೋಟಲ್ ಕನ್ನಡ
638, 31ನೇ ಅಡ್ಡ ರಸ್ತೆ, 10ನೇ 'ಬಿ' ಮುಖ್ಯ ರಸ್ತೆ
ಜಯನಗರ 4ನೇ ವಿಭಾಗ, ಬೆಂಗಳೂರು – 560 011
ದೂರವಾಣಿ: 080–4146 0325 ಸನಿಹವಾಣಿ: 92434 55672
ಮಿಂಚಂಚೆ: support@totalkannada.com
ಅಂತರ್ಜಾಲ: www.totalkannada.com

**ಹಕ್ಕುಗಳು**: ಲೇಖಕರದು

**ISBN**: 978-93-83727-02-5

**ಪುಟಗಳು**: xx+171

**ಪ್ರತಿಗಳು**: 1000

**ಪ್ರಥಮ ಮುದ್ರಣ**: ಜನವರಿ 2014

**ಬೆಲೆ**: ₹ 175/-

**ಸ್ಥಿರ ಚಿತ್ರಗಳು**: ಸ್ಟಿಲ್ಸ್ ರಾಜು

**ಡಿ.ಟಿ.ಪಿ:** ಪ್ರಸನ್ನಕುಮಾರ್. ಎಂ

**ಪುಟವಿನ್ಯಾಸ**: ಮೋಹನ್ ಕಾಮಾಕ್ಷಿ – +91 94487 07758

**ಮುದ್ರಕರು:**
ಬಿ.ಕೆ. ಇಂಪ್ರೆಶ್ಷನ್ಸ್
ಬೆಂಗಳೂರು

# ಮುನ್ನುಡಿ

"ಆಕಸ್ಮಿಕ" ರಂಗಕರ್ಮಿ ನಾಗಾಭರಣರ ನಿರ್ದೇಶನದಲ್ಲಿ ನಿರ್ಮಾಣಗೊಂಡ ಜನಮೆಚ್ಚಿದ ಚಲನಚಿತ್ರ. ಕಾದಂಬರಿಯಲ್ಲಿ ನಿಂತ ಹೊಳೆಯಾಗಿದ್ದ ಕಥೆಯನ್ನು ಹರಿವ ತೊರೆಯನ್ನಾಗಿಸಿದ ಯಶಸ್ಸು ನಾಗಾಭರಣರಿಗೇ ಸಲ್ಲುತ್ತದೆ. ಪ್ರಸ್ತುತ ಚಿತ್ರಕಥೆಯನ್ನು ಅವಲೋಕಿಸಿದಾಗ ಚಿತ್ರದ ಬಹುಬಾಗ ರೈಲು ಪ್ರಯಾಣದ ಸನ್ನಿವೇಷಗಳನ್ನು ಒಳಗೊಂಡಿರುವುದು ತಿಳಿಯುತ್ತದೆ. ಚಿತ್ರಕಥೆ ನಿರಂತರ ಚಲಿಸುವ ರೈಲಿನೊಡನೆ ಸಾಗುತ್ತಾ ಹೋಗುತ್ತದೆ. ಇಲ್ಲಿನ ರೈಲು ಬದುಕಿನ ಸಂಕೇತವಾಗಿಯೂ, ಕಥೆಯೊಳಗಿನ ಪಾತ್ರದಂತೆಯೂ, ಕಥೆಯ ಹಂದರಕ್ಕೆ ಹೊಂದಿಕೊಂಡು ಸಾಂಗತ್ಯಗೊಂಡಿದೆ. ಚಲನಚಿತ್ರದ ಅಂತಿಮ ಚಿತ್ರದ ಪೂರ್ಣವಿರಾಮದಂತೆ ಕಂಡುಬರದೆ ಹೇಳಬೇಕಾದ್ದು ಇನ್ನೂ ಏನೋ ಇದೆ ಎನಿಸುತ್ತ ಮುಗಿದಂತೆ ಭಾಸವಾಗುತ್ತದೆ. ಒಂದು ಯಶಸ್ಸಿನ ನಿರ್ಮಿತಿ ಇಂಥ ಪರಿಣಾಮ ಬೀರುವುದು ಸಹಜ. ಹೊರನೋಟಕ್ಕೆ ಅಸಹಾಯಕ ಹೆಣ್ಣಿನ ಶೋಷಣೆಯಂತೆ ಕಂಡರೂ, ಪುರುಷ ಮತ್ತು ಮಹಿಳಾ ಸಮುದಾಯಗಳ ಪ್ರಾತಿನಿಧಿಕ ಪಾತ್ರಗಳ ಸಾಂಧರ್ಭಿಕ ಸ್ವಭಾವಗಳನ್ನು ಇಲ್ಲಿ ಚರ್ಚಿಸಲಾಗಿದೆ.

ನಾಗಾಭರಣ ಉತ್ತಮ ರಂಗನಟನಾದ್ದರಿಂದ ತನ್ನ ಅಭಿರುಚಿಯ ಒಳತೋಟಿಗಳನ್ನು ಸಮುದಾಯದ ಅಭಿರುಚಿಯಂತೆ ಬಿಂಬಿಸುವ ಕೌಶಲ್ಯ ತೋರಿಸಲು ಸಾಧ್ಯವಾಗಿದೆ. ಡಾ. ರಾಜಕುಮಾರರಂಥ ಮೇರುನಟರನ್ನು ತನ್ನ ಕ್ರಿಯಾಶೀಲ ನಿರ್ಮಿತಿಗೆ ಬಳಸಿಕೊಂಡಿರುವ "ಛಾತಿ" ಆಕಸ್ಮಿಕದಲ್ಲಿ ಕಂಡುಬರುತ್ತದೆ. ಹೀಗೆ ಅನೇಕ ಸಾರ್ಥಕತೆಗಳಿಗೆ ಕಾರಣ ಆಕಸ್ಮಿಕದ ಚಿತ್ರಕಥೆ. ಪ್ರಸ್ತುತ ರಚನೆಯ ಬೆನ್ನಿಗೆ ನಾಗಾಭರಣ ಕೈಗೊಂಡ ಅಧ್ಯಯನ, ರಂಗ ಸಂಗಾತದ ಅನುಭವಾದಿಗಳು ಬರಹದಲ್ಲಿ ತಟಕ್ಕನೆ ಗೋಚರವಾಗುತ್ತದೆ.

ಕಥಾವಸ್ತುವಿನ ಅಗತ್ಯಕ್ಕೆ ತಕ್ಕಂತೆ ನಡೆಸುವ ದೃಶ್ಯಯಾತ್ರೆಯಲ್ಲಿ ನಾಗಾಭರಣ ಪ್ರಯೋಗಶೀಲ ಪ್ರತಿಭೆಯಾಗಿ ಕಾಣಿಸುತ್ತಾರೆ. ತನ್ನ ನಿರ್ದೇಶನದ ಸಾಲು ಸಾಲು ಚಿತ್ರಗಳಲ್ಲಿ ಒಂದರಂತೆ ಇನ್ನೊಂದಿಲ್ಲದ ಪಾತ್ರಗಳನ್ನು ಸೃಷ್ಟಿಸುವ ಕಲೆ ಇವರಿಗೆ ವರವಾಗಿ ಪರಿಣಮಿಸಿದೆ. ನಾಗಾಭರಣ ಇನ್ನೊಬ್ಬರ ಚಿತ್ರಕಥೆಯನ್ನು ಒಪ್ಪುವಂತೆ ಕಾಣುವುದಿಲ್ಲ. ತನ್ನ ನಿರ್ದೇಶನದ ಚಿತ್ರಕ್ಕೆ ತಾನೇ ಚಿತ್ರಕಥೆ ಬರೆಯುತ್ತಾರೆ. ವರ್ತಮಾನದ ಪ್ರೇಕ್ಷಕರ ಅಭಿರುಚಿಯನ್ನು ತಪ್ಪಾಗಿ ಗ್ರಹಿಸದೆ ಹಣಗಳಿಕೆಯೇ ಚಿತ್ರನಿರ್ಮಾಣದ ಪರಮಗುರಿಯೆಂದು ಹಂಬಲಿಸಿದೆ. ಕಲೆಗೆ ಬೆಲೆಯ ಲೇಬಲ್ ಅಂಟಿಸದೆ ಸದಭಿರುಚಿಯ ಅನೇಕ ಚಿತ್ರಗಳನ್ನು

ನಿರ್ಮಿಸಿಕೊಟ್ಟಿದ್ದಾರೆ. ಈ ಕಾರಣಕ್ಕೆ ಯಶಸ್ಸು ಮತ್ತು ಸೋಲುಗಳ ಸಿಹಿ–ಕಹಿಗಳನ್ನು ಕಂಡಿದ್ದಾರೆ. ಒಳ್ಳೆಯದಿದ್ದರೆ ಎಲ್ಲಿಯೂ ಸಲ್ಲುತ್ತದೆ ಎಂಬ ಧೈಯಾದರ್ಶದಲ್ಲಿ ನಾಗಾಭರಣ ನುರಿತ ನಿರ್ದೇಶಕರೆನಿಸಿದ್ದಾರೆ. ಪ್ರೇಕ್ಷಕರ ಅಭಿರುಚಿಗೆ ತಕ್ಕಂತೆ ಚಿತ್ರಮಾಡುತ್ತೇವೆ ಎಂಬ ಸವಕಲು ಮಾತಿಗೆ 'ನಾಗಾಭರಣ' ಕಿವಿಗೊಡದೆ ಬೆಳೆದಿದ್ದಾರೆ. ನಡೆಯುವವರೆಡಹುವರಲ್ಲದೆ ಕುಳಿತವರೆಡಹುವರೆ?

ವರ್ತಮಾನದ ಚಿತ್ರರಂಗ ಉದ್ಯಾನದಂತೆ ಮೋಹಕವಾಗಿ ಕಾಣಿಸುತ್ತದೆ. ಹಸಿರು ವನರಾಶಿಯ ನಡುವೆ ರಾತ್ರಿ ಬೆಳಗುವ ತೀಕ್ಷ್ಣ ಪ್ರಕಾಶದ ಆಕರ್ಷಣೆಗೊಳಗಾಗಿ ಎರಗುವ ಬಣ್ಣದ ಚಿಟ್ಟೆಗಳು ಲೆಕ್ಕ ಮಾಡುತ್ತಿವೆ. ಬಹುತೇಕ ಪತಂಗಗಳು ಸುಂದರವಾದ ರೆಕ್ಕೆಗಳನ್ನು ಸುಟ್ಟುಕೊಳ್ಳುವುದು ಹೆಚ್ಚೆನಿಸಿದೆ. ಕಲೆ ಎಲ್ಲರನ್ನು ಆಕರ್ಷಿಸುತ್ತದೆ ಆದರೆ ಕೆಲವರನ್ನು ಮಾತ್ರ ಉಳಿಸಿಕೊಳ್ಳುತ್ತದೆ ಎಂಬ ರೂಢಿನುಡಿ ಚಿತ್ರರಂಗಕ್ಕೂ ಅನ್ವಯವಾಗುತ್ತದೆ. ಈಚೀಚೆಗೆ ಚಿತ್ರರಂಗದ ಗಂಧಗಾಳಿಯ ಅನುಭವವೇ ಇಲ್ಲದ ಯುವ ನಿರ್ಮಾಪಕರು ಚಿತ್ರತಯಾರಿಕೆಗೆ ಮುಂದಾಗಿ ಚಿತ್ರರಂಗದ ಪಳಗಿದ ಆಕ್ಟೋಪಸ್‌ಗಳಿಗೆ ಬಲಿಯಾಗುತ್ತಿದ್ದಾರೆ. ಈಜು ಕಲಿಯದೆ ಕಾಣದ ಹೊಂಡಕ್ಕೆ ದುಮುಕಬಾರದೆಂಬ ಅರಿವು ಇವರಿಗಿರಬೇಕು. ಆಸಕ್ತಿಯ ಉಮೇದುಳ್ಳವರು ಅನುಭವಿ ನಿರ್ದೇಶಕರ ಸಲಹೆ ಮತ್ತು ಮಾರ್ಗದರ್ಶನಗಳನ್ನು ಪಡೆಯುವುದು ಒಳ್ಳೆಯದು. ಅನುಭವಿಗಳು ತಯಾರಿಸಿಕೊಂಡು ಚಿತ್ರಮಾಡಿರುವ ಚಿತ್ರಕಥೆಗಳನ್ನು ಮಾದರಿಯಾಗಿಟ್ಟುಕೊಂಡು ನಿರಂತರ ಅಧ್ಯಯನ ಹಾಗೂ ಸಮಾಲೋಚನೆಗಳಿಂದ ಪಕ್ವತೆ ಪಡೆದನಂತರ ಚಿತ್ರಬ್ರಹ್ಮರಾಗಬೇಕು. ಹಾಗೆ ಮಾಡದೆ ಗರ್ಭಧರಿಸಿದ ಒಂದೆರೆಡೇ ತಿಂಗಳಲ್ಲಿ ಹಡೆಯಬೇಕೆಂದು ತವಕಪಟ್ಟರೆ ಗರ್ಭಪಾತವಾಗುವುದೇ ಹೆಚ್ಚು.

ಚಿತ್ರತಯಾರಿಕೆಗೆ ಅಗತ್ಯವಾದ 'ತಾಳ್ಮೆ' ಬಂಡವಾಳವಾಗಬೇಕು. 'ನಾಗಾಭರಣ' ಕಥೆಯೊಂದನ್ನೇ ಚಿತ್ರಮಾಡಲು ವರ್ಷಗಟ್ಟಲೆ ಸಿದ್ಧತೆ ನಡೆಸುತ್ತಾರೆ. ಒಳ್ಳೆಯದನ್ನು ತಿಳಿಯಲು ಎಲ್ಲ ದಿಕ್ಕಿನ ಕಿಟಕಿಗಳನ್ನು ತೆರೆಯುತ್ತಾರೆ. "ಕೆಲವಂ ಬಲ್ಲವರಿಂದ ಕಲ್ತು" ಎಂಬ ಕವಿವಾಣಿಯನ್ನು ಪಾಲಿಸುತ್ತಾರೆ. ಇಂಥಹ ಅನೇಕ ಕಾರಣಗಳಿಂದ ಬಹುಕಾಲ ಚಿತ್ರಪ್ರಪಂಚದಲ್ಲಿ ಬದುಕುಳಿದಿದ್ದಾರೆ. ನಾಗಾಭರಣ ಹೊಸ ಪೀಳಿಗೆಯ ನಿರ್ದೇಶಕರಿಗಾಗಿ ತಾವು ತಯಾರಿಸಿಕೊಂಡಿದ್ದ ಚಿತ್ರಕಥೆಗಳನ್ನು ಪ್ರಕಟಿಸುವ ನಿರ್ಧಾರ ಮಾಡಿದ್ದಾರೆ. ಈ ಪ್ರಯತ್ನ ಕನ್ನಡ ಚಲನಚಿತ್ರಗಳ ಇತಿಹಾಸವಾಗಿ ಉಳಿಯುವ ಸಾಧ್ಯತೆ ಉಂಟಾಗುತ್ತದೆ.

"ಸತ್ಯಜಿತ್ ರೇ" ಅವರ "ಪತೇರ್ ಪಾಂಚಾಲಿ" ಚಿತ್ರಕಥೆಯುಳ್ಳ ಪುಸ್ತಕವನ್ನು ಓದುವ ಅವಕಾಶ ಲಭಿಸಿತ್ತು. 'ರೇ' ಅವರು ಚಿತ್ರಕಥೆಯ ನಡುನಡುವೆ ತಾವೇ ರಚಿಸಿದ ರೇಖಾಚಿತ್ರಗಳನ್ನು ಸೇರಿಸಿದ್ದರು. ಹೆಗ್ಗೋಡಿನ ರಸಗ್ರಹಣ ಶಿಬಿರವೊಂದರಲ್ಲಿ "ಬೈಸಿಕಲ್ ಥೀಫ್" ಚಲನಚಿತ್ರದ ಚಿತ್ರಕಥೆಯನ್ನು ಓದಿದಾಗ ಚಿತ್ರಕಥೆಯ ವಿರಾಟ ದರ್ಶನವಾಗಿತ್ತು. ಮೂಲಕಥೆ ಯಾವುದೇ ಆಗಿರಲಿ, ಯಾರದೇ ಆಗಿರಲಿ ಅದನ್ನು ಸಿನಿಮೀಯ ಹಂದರಕ್ಕೆ ಹೊಂದಿಸಲು ಚಿತ್ರಕಥೆಯು ಸೃಷ್ಟಿಯಾಗಬೇಕು. ನಿರ್ದೇಶಕ ಎಷ್ಟರಮಟ್ಟಿಗೆ 'ಹೋಮ್ ವರ್ಕ್' ನಡೆಸುತ್ತಾನೆಯೋ ಅಷ್ಟರಮಟ್ಟಿಗೆ ಚಲನಚಿತ್ರ ತಾಳಿಕೆ ಕಳೆದುಕೊಂಡ

ಬಂಗಾರವಾಗುತ್ತದೆ. 'ನಾಗಾಭರಣ' ರಚಿಸಿದ್ದ "ಆಕಸ್ಮಿಕ" ಚಿತ್ರಕಥೆಯನ್ನು ಎಷ್ಟೋ ವರ್ಷಗಳ ತರುವಾಯ ಪ್ರಕಟಿಸುತ್ತಿದ್ದಾರೆ. "ಹಳೇ ಬೇರು ಹೊಸ ಚಿಗುರು ಕೂಡಿರಲು ಮರ ಸೊಗಸು" ನಡುನಡುವೆ ಕೆಲವು ಅನುಭವಗಳನ್ನು ನಿರ್ದೇಶಕರ ಟಿಪ್ಪಣಿಯೆಂಬ ಶೀರ್ಷಿಕೆಯಡಿ ಹೇಳಿಕೊಳ್ಳುತ್ತಾ ಹೋಗಿದ್ದಾರೆ.

ನಿರ್ದೇಶಕರ ಟಿಪ್ಪಣಿ: ಪುಟ–130

ಈ ದೃಶ್ಯದ ಚಿತ್ರೀಕರಣವನ್ನು ಕಾದಂಬರಿಯಲ್ಲಿದ್ದಂತೆ 'ಬರ್ಕಣ' ಎಂಬಲ್ಲಿ ಚಿತ್ರೀಕರಿಸಲಾಯಿತು.. ಆದರೆ ಸ್ಥಳಕ್ಕೆ ಹೋಗಲು ರಸ್ತೆಯಿಲ್ಲದ ಕಾರಣ ಏನು ಮಾಡುವುದು ಎಂದು ಚಿಂತಿಸುತ್ತಿದ್ದಾಗ ಈ ಚಲನಚಿತ್ರದ ನಿರ್ಮಾಣವನ್ನು ನೋಡಿಕೊಳ್ಳುತ್ತಿದ್ದ ವಿಕ್ರಂ ಶ್ರೀನಿವಾಸ್ ಅವರು ಎರೆಡು ದಿನ ಅವಕಾಶಕೊಟ್ಟರೆ ರಸ್ತೆ ಸಿದ್ಧಗೊಳಿಸುವುದಾಗಿ ತಿಳಿಸಿ ನಮ್ಮ ಚಿಂತೆಯನ್ನು ದೂರಮಾಡಿದರು. ಈ ಎರೆಡೂ ದಿನಗಳು ನಾವು ಬೇರೆ ದೃಶ್ಯಗಳನ್ನು ಚಿತ್ರೀಕರಿಸಿ 'ಬರ್ಕಣ'ದ ಆ ಅಟ್ಟನಿಗೆ ಬಂದಾಗ ನಮ್ಮ ಇಡೀ ತಂಡಕ್ಕೆ ಆ ಶ್ರಮದಪ್ರತಿಫಲ ದೊರೆಯಿತು. ಅದ್ಭುತವಾದ ರುದ್ರರಮಣೀಯ ತಾಣವೊಂದನ್ನು ನಾವು ಚಿತ್ರೀಕರಿಸಿದೆವು. 'ಅಣ್ಣ' ಆ ಜಾಗವನ್ನು ನೋಡಿ ಮೂಕವಿಸ್ಮಿತರಾಗಿದ್ದರು. ಅಟ್ಟಣಿಗೆ ಮುರಿದುಬೀಳುವ ಹಾಗೂ ಮುರಿದ ನಂತರದ ಚಿತ್ರಿಕೆಗಳನ್ನು(ಶಾಟ್‌ಗಳು) ಹೊಂದಿಕೆ(ಮ್ಯಾಚ್)ಮಾಡಿ ಚಿತ್ರೀಕರಿಸಲಾಯಿತು.

ಸಾಹಸ ನಿರ್ದೇಶಕ ಸ್ವಾಮಿ–ಛಾಯಾಗ್ರಾಹಕ ಶ್ರೀಕಾಂತ್ ಮತ್ತು ಸಂಕಲನಕಾರ ಪಿ.ಭಕ್ತವತ್ಸಲಮ್ ಅವರ ಕುಸುರಿಕೆಲಸ ಹಾಗೂ ಸಂಗೀತ ನಿರ್ದೇಶಕ ಹಂಸಲೇಖರವರ ಹಿನ್ನಲೆ ಸಂಗೀತ ಈ ದೃಶ್ಯವು ಅದ್ಭುತವಾಗಿ ಮೂಡಿಬರುವಂತೆ ಕಳೆಗಟ್ಟಿಸಿದೆ.– ಹೀಗೆ ನಾಗಾಭರಣ ಚಿತ್ರೀಕರಣದ ಸಂದರ್ಭಗಳಲ್ಲಿ ನಡೆದ ವಿಚಾರಗಳನ್ನು ಆತ್ಮಕಥನದ ಶೈಲಿಯಲ್ಲಿ ಬರೆದುಕೊಳ್ಳುತ್ತಾ ಹೋಗಿದ್ದಾರೆ. ಇಂತಹ ಬರವಣಿಗೆ ಚಲನಚಿತ್ರ ಇತಿಹಾಸಕ್ಕೆ ಬಹುಪ್ರಮುಖ ದಾಖಲೆಗಳಾಗಿ ಸೇರಿಕೊಳ್ಳುತ್ತದೆ. ಮಧ್ಯಂತರ ವಿವರಗಳನ್ನು ಬರೆದ ಚಿತ್ರಕಥೆ, ಇದು ತನಕ ರಚನೆಯಾಗಿ ಪ್ರಕಟವಾದಂತೆ ಕಾಣುವುದಿಲ್ಲ. ಇದೇ ಪ್ರಥಮವೆಂಬಂತೆ ಈ ಹೊತ್ತಗೆ ಹೊರಬರುತ್ತದೆ. ಚಿತ್ರಕಥೆಯಲ್ಲಿರುವ ಎಲ್ಲ ದೃಶ್ಯಗಳೂ ಚಿತ್ರ ಸಂಪುಟಕ್ಕೆ ಸೇರಿಸದೆ ಕೆಲವನ್ನು ತಗೆದುಹಾಕಲಾಗಿದೆ. ಚಲನಚಿತ್ರವನ್ನು ಸಂಕಲನದ ಮೂಸೆಗೆ ಹಾಕಿದಾಗ ಇಂತಹ ನಿರಾಕರಣೆ ಕ್ರಿಯೆ ನಡೆಯುವುದು ಸಾಮಾನ್ಯ. ತಗೆದುಹಾಕಿದ ದೃಶ್ಯಗಳು ನಿಜಕ್ಕೂ ಒಳ್ಳೆಯ ದೃಶ್ಯಗಳಾಗಿವೆ.

ನಟ–ನಟಿಯರಿಗೆ, ತಂತ್ರಜ್ಞರಿಗೆ ರಂಗಭೂಮಿ ಹೂವಿನ ಹಾಸಿಗೆಯಿದ್ದಂತೆ, ಚಲನಚಿತ್ರ ತಯಾರಿಕೆಯ ಪ್ರತಿ ಹಂತವೂ ಮುಳ್ಳುಚೆಲ್ಲಿದ ಹಾದಿಯಿದ್ದಂತೆ ಎಂಬ ಅನುಭವ ನಾಗಾಭರಣರಿಗೆ ಆಗಿರುವ ಸಾಧ್ಯತೆಯಿದೆ. ಪ್ರತಿಯೊಂದು ನಡೆಯಲ್ಲೂ ಮುಗ್ಗರಿಸುವ ಸಂದರ್ಭಗಳು ಚಿತ್ರೀಕರಣ ಸಂದರ್ಭದಲ್ಲಿರುವಂತೆ ರಂಗತಾಲೀಮಿನಲ್ಲಾಗಲೀ, ಪ್ರಯೋಗದಲ್ಲಾಗಲೀ ಇದ್ದಿರಲಾರದು.

ಈ ಪರಿಯಲ್ಲಿ ನಿರ್ದೇಶಕನ ಟಿಪ್ಪಣಿಯೊಡನೆ ಪ್ರತಿ ದೃಶ್ಯವನ್ನು ಆಪಿ ರೂಪದಲ್ಲಿ ಕಟ್ಟಿಕೊಟ್ಟಿರುವ "ಆಕಸ್ಮಿಕ" ಚಿತ್ರಕಥೆಯನ್ನು ನಾನು ತುಂಬು ಮನಸ್ಸಿನಿಂದ ಸ್ವಾಗತಿಸುತ್ತೇನೆ. ಅರ್ಥ ಭರಿತವೂ ಸಂಯಮಗಂಧಿಯೂ ಆದ ಚಿತ್ರಕಥಾ ಸಾಹಿತ್ಯವನ್ನು ಕಲಿಕೆಗೆ ನೆರವಾಗುವಂತೆ ಬರೆದಿರುವ ನಾಗಾಭರಣರನ್ನು ಅಭಿನಂದಿಸುತ್ತೇನೆ

***ಡಾ. ಸಿದ್ಧಗಂಗಯ್ಯ ಕಂಬಾಳು***
*ಬೆಂಗಳೂರು 06-01-2014*

## ಆಕಸ್ಮಿಕ ಚಿತ್ರಕಥೆ: ನನ್ನ ಅನಿಸಿಕೆ

ಕರ್ನಾಟಕ ಚಲನಚಿತ್ರ ಅಕಾಡೆಮಿಯ ಪ್ರಥಮ ಅಧ್ಯಕ್ಷನಾಗಿ ಅಕಾಡೆಮಿಯ ರೂಪುರೇಷೆಗಳನ್ನು ನಿರ್ಧರಿಸುತ್ತಿದ್ದಾಗ ಸಿನಿಮಾ ಶೈಕ್ಷಣಿಕವಾಗಿ ಬೆಳೆಯಲು ಬೆಳೆಸಲು ಬೇಕಾದ ಆಕರಗಳನ್ನು ಗಮನಿಸಿ ಅವುಗಳನ್ನು ನೀಗಿಸುವ ನಿಟ್ಟಿನಲ್ಲಿ ಹಲವು ಯೋಚನೆಗಳನ್ನು ಯೋಜನೆಗಳನ್ನು ಕೈಗೆತ್ತಿಕೊಂಡೆ. ಅವುಗಳಲ್ಲಿ ಒಂದು 'ಚಿತ್ರಕಥಾ ಪಠ್ಯಗಳ ಮುದ್ರಣ.' "ಚಲನಚಿತ್ರದಲ್ಲಿ ಶಿಕ್ಷಣ, ಶಿಕ್ಷಣದಲ್ಲಿ ಚಲನಚಿತ್ರ" ಎಂಬ ಘೋಷವಾಕ್ಯದೊಂದಿಗೆ ಪ್ರಾರಂಭವಾದ ಅಕಾಡೆಮಿಯ ಆಶಯ ಹಾಗೆಯೇ ಮುಂದುವರೆಯಲಿ ಎಂದು ಆಶಿಸುತ್ತ ನನ್ನ ಚಲನಚಿತ್ರಯಾನದಲ್ಲಿ ನಾನು ಮತ್ತು ನನ್ನ ಪ್ರೇಕ್ಷಕರು ಗುರುತಿಸಿದ ಕೆಲವು ಪ್ರಯೋಗಗಳ ಚಿತ್ರಕಥೆಯನ್ನು ಓದುಗರ ಹಾಗೂ ಸಿನಿಮಾಸಕ್ತರ ಉಪಯೋಗಕ್ಕಾಗಿ ಪ್ರಕಟಿಸಲು ಹರ್ಷಿಸುತ್ತೇನೆ.

ಸಿನಿಮಾ ಮತ್ತು ಇನ್ನುಳಿದ ಸಾಹಿತ್ಯ ಪ್ರಕಾರಗಳಿಗೂ ಇರುವ ವ್ಯತ್ಯಾಸವನ್ನು ಗಮನಿಸಿಯೇ ಚಿತ್ರಕಥೆಗಳ ಓದಿನ ಒಳಗೆ ವಿಹರಿಸಬೇಕಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯ. ಸಾಹಿತ್ಯ ಕೃತಿಗಳ ಅಮೂರ್ತ ಅನುಭವವನ್ನು ಚಲನಚಿತ್ರಗಳು ಮೂರ್ತ ಅನುಭವಗಳಾಗಿ ಪರಿವರ್ತಿಸುವುದರಿಂದ ಮತ್ತು ಓದುವವನ ಕಲ್ಪನಾ ಲೋಕದ ಚಿತ್ರಿಕೆಗಳಿಗೆ ಏಕಸ್ವಾಮ್ಯ ಸ್ಥಾಪಿಸುವುದರಿಂದ ಕೆಲವೊಮ್ಮೆ ಪ್ರೇಕ್ಷಕ ಮತ್ತು ಓದುಗರ ಮುಖಾಮುಖಿಯಾಗುವ ಸಾಧ್ಯತೆಯಿರುತ್ತದೆ. ಈ ಕಾರಣದಿಂದಾಗಿಯೇ ಚಿತ್ರಕಥಾ ಸಾಹಿತ್ಯವು ತನ್ನದೇ ಆದ ಸಾಹಿತ್ಯಿಕ ಆಯಾಮವೊಂದನ್ನು ಸೃಷ್ಟಿಸಿಕೊಳ್ಳಬೇಕಾದ ಅವಶ್ಯಕತೆ ಇದೆ. ಕನ್ನಡದ ಮಟ್ಟಿಗೆ ಕೆಲವೇ ಚಿತ್ರಕಥಾ ಸಾಹಿತ್ಯ ಕೃತಿಗಳು ಪ್ರಕಟವಾಗಿರುವುದರಿಂದ ಅವುಗಳ ಶೈಲಿ, ವ್ಯಾಕರಣ, ಬಂಧ, ಓಘ ಇವುಗಳ ನಿರ್ದಿಷ್ಟ ಸ್ವರೂಪ ಪಕ್ವವಾಗಿಲ್ಲ. ಈ ದಿಸೆಯಲ್ಲಿಟ್ಟ ಹೆಜ್ಜೆಗಳಲ್ಲಿ ನನ್ನದೂ ಒಂದು ಪ್ರಾಯೋಗಿಕ ಹೆಜ್ಜೆ ಎಂಬುದರ ಅರಿವಿನೊಡನೆ ಈ ಚಿತ್ರಕಥೆಯನ್ನು ನಿಮ್ಮ ಕೈಯಲ್ಲಿ ಇರಿಸುತ್ತಿದ್ದೇನೆ.

ಚಲನಚಿತ್ರ, ರಂಗನಾಟಕದ ಪರಿಷ್ಕೃತ ರೂಪವೇ ಎಂಬುದು ಒಂದು ಪ್ರಶ್ನೆ. ಒಂದು ರೀತಿಯಲ್ಲಿ ಹೌದು ಎಂದಾದರೆ ಇನ್ನೊಂದು ರೀತಿಯಲ್ಲಿ ಅದರ ವಿಸ್ತೃತ ರೂಪ ಎಂದೇ ಹೇಳಬಹುದು. ಚಲನಚಿತ್ರ ಪ್ರಾರಂಭವಾದದ್ದೇ ರಂಗರೂಪಗಳನ್ನು ದೃಶ್ಯ ರೂಪಗಳನ್ನಾಗಿ ಮಾರ್ಪಡಿಸುತ್ತ. ಹೀಗಾಗಿ ಅದರ ಛಾಪು ಈಗಲೂ ಇದೆ. ನಾಟಕಗಳನ್ನು ಓದುವ ಮತ್ತು ಅವುಗಳನ್ನು ನಂತರ ರಂಗರೂಪಕ್ಕೆ ತರುವ ವಿಧಾನಗಳನ್ನು ನಾವು ಗಮನಿಸಿದಾಗ ಅದೇ ಶೈಲಿಯಲ್ಲಿ ಚಲನಚಿತ್ರದ ಚಿತ್ರಕಥೆ ಹಾಗೂ ಸಿನಿಮಾ ದೃಶ್ಯ ರೂಪ ನಮ್ಮ ಕಣ್ಣಮುಂದೆ ಬರುತ್ತದೆ. ಚಲನಚಿತ್ರಕ್ಕೆ ಪೂರಕವಾದ ಶ್ರವ್ಯ ಮತ್ತು ದೃಶ್ಯ ಸಂವಹನ ಇವೆರಡನ್ನೂ ಬೇರೆ ಬೇರೆಯಾಗಿ ವಿಭಜಿಸಲೂಬಹುದು. ಒಟ್ಟಾರೆಯಾಗಿ ಹೇಳುತ್ತಲೂ ಹೋಗಬಹುದು. ಚಿತ್ರಕಥೆ ಸಂಭಾಷಣೆ ಹಾಗೂ ಅಲ್ಲಿ ನಡೆಯುವ ಕ್ರಿಯೆಗಳ ಸಮೀಕರಣವನ್ನು ನಾವು ಕಾಣಬಹುದು ಆದರೆ ಚಿತ್ರಿಕೆಗಳು ಕಣ್ಣಮುಂದೆ ಮೂಡುವುದಿಲ್ಲ ಹೀಗಾಗಿ ಚಿತ್ರಕಥಾ ಸೃಷ್ಟಿಯೊಂದನ್ನು ಓದುವ ಕ್ರಮವನ್ನು ಅಥವಾ ಓದುವ ಇತಿಮಿತಿಗಳನ್ನು ಅರ್ಥಮಾಡಿಕೊಂಡೆ ಚಲನಚಿತ್ರ ಕಥಾ-ಸಾಹಿತ್ಯವನ್ನು ನಾವು ಸ್ವೀಕರಿಸಬೇಕಾಗುತ್ತದೆ. ಪಾತ್ರಗಳಲ್ಲಿರುವ ಪಾತ್ರಪೋಷಣೆಗಳನ್ನು ನವಿರಾದ ಭಾವಗಳನ್ನು, ತೀವ್ರ

ಸಂವೇದನೆಗಳನ್ನು ಚಿತ್ರಕಥೆ ಓದುವವನ ಭಾವಪ್ರಜ್ಞೆಗೆ ಮತ್ತು ಆತನ ಕಲ್ಪನೆಗೆ ಬಿಡುತ್ತ ಹೋಗುತ್ತದೆ. ಅದಕ್ಕೆ ಬೇಕಾದ ಸೂಕ್ಷ್ಮಗಳನ್ನು ಸದೃಢೀಕರಿಸುತ್ತ ಹೋಗುತ್ತದೆ. ಆದರೆ ನಿಜವಾಗಿಯೂ ಬಿಂಬ-ಭಾವದಲ್ಲಿ ಮೂಡುವುದು ಏನು ಎಂಬುದು ತಕ್ಷಣವೇ ಹೊಳೆಯದಿರಬಹುದು ಆದರೆ ಅದು ಹೀಗಿರಬಹುದು ಎಂಬ ವ್ಯಾಖ್ಯೆಯನ್ನು ಅದು ಕೊಡುತ್ತದೆ. ಚಿತ್ರಕಥಾ ಲೇಖನ ಒಂದು ಕ್ರಿಯಾಶೀಲ ನಿರ್ಮಿತಿಯಾಗಿರುವುದರಿಂದ ಕಥಾಹಂದರ ಹೇಗಿತ್ತು ಅದರ ನಂತರ ಹೇಗಾಯಿತು ಎಂಬುದರ ಬಗ್ಗೆ ಕೂಡ ಚರ್ಚೆಯನ್ನು ಏರ್ಪಡಿಸಬಲ್ಲದು. ಕಥೆಯ ಹಂತದಲ್ಲಿದ್ದಂತಹ ಹಲವು ಸೂಕ್ಷ್ಮಗಳು ಚಿತ್ರಕಥೆಯಲ್ಲಿ ಇಲ್ಲದಿರಬಹುದು ಹಾಗೆಯೇ ಕಥೆಯಲ್ಲಿ ಇಲ್ಲದಂತಹ ಹಲವು ಸೂಕ್ಷ್ಮಗಳು ಚಿತ್ರಕಥೆಯಲ್ಲಿ ಸೇರಬಹುದು ಈ ದೃಷ್ಟಿಯಲ್ಲಿಯೂ ಕೂಡ ಸೃಜನಶೀಲ, ಕ್ರಿಯಾಶೀಲ ನಿರ್ಮಿತಿಗಿರುವಂತಹ ಎಲ್ಲ ಸಾಧ್ಯತೆಗಳನ್ನು ಚಿತ್ರಕಥಾ ಸಾಹಿತ್ಯ ತನ್ನದಾಗಿಸಿಕೊಳ್ಳುತ್ತದೆ.

ಕೆಲವೊಮ್ಮೆ ಚಿತ್ರಕಥೆಯೇ ಇಲ್ಲದೆ ಚಿತ್ರೀಕರಣ ಮಾಡುವುದು ಕೆಲವರಿಗೆ ಸಾಧ್ಯವಾಗಬಹುದೋ ಏನೋ. ಆದರೆ ಅದು ಒಂದು ರೀತಿ ಹಬ್ಬದ ಊಟವನ್ನು ನೆಲದ ಮೇಲೆ ಹಾಕಿಕೊಂಡು ತಿಂದಂತೆಯೇ. ಚಿತ್ರಕಥೆ ಎಷ್ಟು ಸಮರ್ಥವಾಗಿ ಇಡೀ ತಂಡವನ್ನು ಆವರಿಸಿಕೊಳ್ಳುತ್ತದೆಯೋ ಅಷ್ಟೇ ಸಮರ್ಥವಾಗಿ ಚಿತ್ರಿಕೆಗಳು ಮೂಡುತ್ತವೆ, ಚಲನಚಿತ್ರ ತನ್ನ ಗುರಿಯನ್ನು ಮುಟ್ಟುತ್ತದೆ. ಹೀಗಾಗಿ ನಿರ್ದೇಶಕ, ಸಂಕಲನಕಾರ, ಛಾಯಾಗ್ರಾಹಕ ಈ ಮೂವರು ಮುಖ್ಯರ ಜೊತೆಜೊತೆಯಲ್ಲಿಯೇ ನಟ-ನಟಿಯರ ಒಂದು ಸಾಂಘಿಕ ಕ್ರಿಯೆ ಚಿತ್ರಕಥಾ ಸಾಹಿತ್ಯವನ್ನು ಚಲನಚಿತ್ರವನ್ನಾಗಿ ಮಾರ್ಪಡಿಸುತ್ತದೆ. ಆದ್ದರಿಂದ ಚಿತ್ರಕಥೆಯ ಹಂತದಲ್ಲಿಯೇ ಎಲ್ಲರಿಗು ಅದರ ದರ್ಶನಭಾಗ್ಯ ಸಾಧ್ಯವಾಗುವುದು ಬಹಳ ಮುಖ್ಯವೆನಿಸುತ್ತದೆ. ಆ ದೂರದರ್ಶನದ ಜೊತೆಜೊತೆಯಲ್ಲಿಯೇ ಎಲ್ಲರು ಒಮ್ಮುಖವಾಗಿ ಕೆಲಸಮಾಡುವುದು ಬಹಳ ಮುಖ್ಯಕೂಡ. ಚಲನಚಿತ್ರಕ್ಕೆ ಕಥೆ ಬೀಜವಾದರೆ ಚಿತ್ರಕಥೆ ಅಂಕುರ. ಇನ್ನುಳಿದ ಸಾಧನ ಸಲಕರಣೆಗಳು ಕಲಾವಿದರೊಟ್ಟಿಗೆ ಬಳಕೆಯೊಂದಿಗೆ ಒಂದು ವೃಕ್ಷವಾಗುತ್ತದೆ. ಇಂತಹ ಮಾದರಿ ಚಿತ್ರಕಥೆಗಳು ಚಲನಚಿತ್ರ ನಿರ್ಮಾಣದ ಪರಂಪರೆಯನ್ನು ನಮಗೆ ಐತಿಹಾಸಿಕವಾಗಿ ಮುಟ್ಟಿಸುತ್ತದೆ. ಹಾಗೂ ಹುಟ್ಟುಹಾಕುತ್ತದೆ. ಅದೊಂದು ಪಾರದರ್ಶಕ ಯೋಜನೆಯಾಗುತ್ತದೆ. ಅದರ ಉನ್ನತೀಕರಣ ಚಿತ್ರಕಥೆಯಿದ್ದಾಗ ಮಾತ್ರ ಸಾಧ್ಯವಾಗುತ್ತದೆ.

ಸಾಹಿತಿಯ ಆತ್ಮಸಂಗಾತದಿಂದ ಹುಟ್ಟುವ ಕಥಾಗತಿತ ಸಾಂಗತ್ಯವನ್ನು ಪ್ರವೇಶಿಸಲು ಪ್ರಥಮ ಪೂರಕ ನಿರ್ಮಿತಿ ಈ ಚಿತ್ರಕಥೆ. ಇಲ್ಲಿ ಸಾಹಿತಿ ನಿರ್ದೇಶಕನೂ ಆಗುತ್ತಾನೆ. ಚಲನಚಿತ್ರ ಒಟ್ಟಾರೆಯಾಗಿ ಬಯಸುವ ದೃಶ್ಯಾವಳಿಗಳಲ್ಲಿ ಆಹಾರ್ಯಾದಿ ಸಾಧನ ಸಲಕರಣೆಗಳು ಕಲಾವಂತಿಕೆಯ ಸ್ಪರ್ಶ ಇತ್ಯಾದಿಗಳೆಲ್ಲವೂ ಚಿತ್ರಕಥೆಯಿದ್ದಾಗ ದಟ್ಟವಾಗುತ್ತ ಸೃಜನಶೀಲವಾಗುತ್ತ ಅದ್ಭುತವಾದ ನಿರ್ಮಿತಿಯೊಂದಕ್ಕೆ ಸಾಕ್ಷಿಯಾಗುತ್ತದೆ. ದೃಶ್ಯ ಹಾಗೂ ಶ್ರವ್ಯ ಮಾಧ್ಯಮಗಳ ಒಗ್ಗೂಡುವಿಕೆ ಇಲ್ಲಿನ ಕ್ರಿಯಾಶೀಲ ನಿರ್ಮಿತಿ. ಅಲ್ಲಿ ಭಾಷೆ, ಸಂಗೀತ, ಪರಿಸರ ಧ್ವನಿಗಳು ಪೂರಕ ಅಂಶಗಳಾಗಿ ಕೆಲಸಮಾಡುತ್ತವೆ. ಚಲನಚಿತ್ರದಲ್ಲಿ ಬಳಸಿದ ಭಾಷೆ ಚಿತ್ರಕಥಾ ಹಂದರದಲ್ಲಿಯೇ ಸ್ಪಷ್ಟವಾಗಿ ಗೋಚರಿಸಿದಾಗ ಅದು ಆ ನಟ-ನಟಿಯರ ಮುಖಾಂತರ ಇನ್ನೊಂದು ಆಯಾಮವನ್ನು ಕಟ್ಟಿಕೊಡುತ್ತದೆ. ಹೀಗೆ ಭಾಷೆಯ ಒಟ್ಟಾರೆ ಬೆಳವಣಿಗೆ ಅದ್ಭುತವಾಗಿ ರೂಪುಗೊಳ್ಳುತ್ತದೆ. ಇಂದಿನ


ನಮ್ಮ ಕನ್ನಡ ಭಾಷೆಯ ಸ್ವರೂಪವನ್ನು ನಿರ್ಧರಿಸುವಲ್ಲಿ ಚಲನಚಿತ್ರಗಳು ಬಹಳಷ್ಟು ಮುಂಚೂಣಿಯಲ್ಲಿ ಕೆಲಸ ಮಾಡಿವೆ.

ಇನ್ನು ಚಿತ್ರಬ್ರಹ್ಮನೆಂದು ಕರೆಯಲ್ಪಡುವ ನಿರ್ದೇಶಕ, ಚಲನಚಿತ್ರದ ಮೊದಲ ಹಂತದಲ್ಲಿ ಅಂದರೆ ಚಿತ್ರಕಥಾ ಹಂತದಲ್ಲಿಯೇ ತನ್ನೆಲ್ಲ ಇತಿಮಿತಿಗಳನ್ನು ನಿರ್ಧರಿಸಿಕೊಳ್ಳುತ್ತಾನೆ. ಅದು ವ್ಯಾವಹಾರಿಕವಾಗಿರಬಹುದು, ರಾಜಕೀಯವಾಗಿರಬಹುದು, ಸಾಮಾಜಿಕವಾಗಿರಬಹುದು ಹಾಗೆಯೇ ಸೃಜನಶೀಲವೂ ಆಗಿರಬಹುದು. ತನ್ನ ಸಿನಿಮಾದ "ತಿರುವು ಬಿಂದು"ಗಳನ್ನು ಆತ ನಿರ್ಧರಿಸಿದಾಗ ಮಾತ್ರ ಉತ್ತಮ ಚಲನಚಿತ್ರದತ್ತ ಆ ಚಿತ್ರಕಥೆ ಹೆಜ್ಜೆಹಾಕುತ್ತದೆ. ಚಲನಚಿತ್ರ ಕಥೆಯ ಚಿತ್ರಕಥೆಯನ್ನು ಓದುವ ಕ್ರಮವೊಂದನ್ನು ನಾವು ಅಂದುಕೊಳ್ಳಬೇಕು ಎಂದು ನನಗನಿಸುತ್ತದೆ. "ಆಕಸ್ಮಿಕ" ಚಿತ್ರಕಥೆಯ ಸ್ವರೂಪವನ್ನು ನೀವು ಗಮನಿಸಿದಾಗ ಕೆಲವೆಡೆ ಹಸ್ತಪ್ರತಿಯಲ್ಲಿ ಇದೆ ಆದರೆ ಚಲನಚಿತ್ರದಲ್ಲಿ ಇಲ್ಲ ಎಂಬ ಅಂಶವು ಗಮನಕ್ಕೆ ಬರುತ್ತದೆ ಆದರೂ ಅದನ್ನು ಮುದ್ರಿಸಿದ್ದೇವೆ. ಕಾರಣ ಹೇಗೆ ಚಿತ್ರಕಥೆಯಲ್ಲಿದ್ದ ಹಲವು ಅಂಶಗಳು ನಂತರ ಚಲನಚಿತ್ರದಲ್ಲಿ ಇರಲಿಲ್ಲ ಅದಕ್ಕೆ ಕಾರಣವೇನು ಎಂಬುದನ್ನು ನಿರ್ದೇಶಕರ ಟಿಪ್ಪಣಿಯೊಡನೆ ನಿಮ್ಮ ಓದಿಗೆ ಸಹಾಯವಾಗುವಂತೆ ಮುದ್ರಿಸಿದ್ದೇವೆ. ಇದರ ಮುಖಾಂತರ ಎಷ್ಟೋ ಸಲ ಕೆಲವು ಒಳ್ಳೆಯ ಮತ್ತು ಕೆಲವು ಅನಿರೀಕ್ಷಿತ ಅಂಶಗಳು ನಮ್ಮ ಸಿನಿಮಾ ನೋಡಿದ ನಂತರ ಅನುಭವಕ್ಕೆ ಬರುತ್ತದೆ. ಈ ದೃಷ್ಟಿಯಿಂದ ಚಿತ್ರಕಥೆಯನ್ನು ಓದುವಾಗ ಸ್ವಲ್ಪ ಅಡೆತಡೆಯಾದರೂ ಕೂಡ ಈ ಸಾಧ್ಯತೆಗಳನ್ನು ಬಳಸಿಕೊಳ್ಳುವ ಮತ್ತು ಅದರ ಮುಖಾಂತರ ಓದುವ ಕ್ರಿಯೆಯಲ್ಲಿ ನಿಮ್ಮದೇ ಆದಂತಹ ಶೈಲಿಯನ್ನು ರೂಪಿಸಿಕೊಳ್ಳುವ ಚಿತ್ರಕಥಾ ಸಾಹಿತ್ಯದ ಮೆರುಗನ್ನು ಸವಿಯುವ ನಿಟ್ಟಿನಲ್ಲಿ ಇದೊಂದು ಪ್ರಥಮ ಹೆಜ್ಜೆಯಾಗಲಿ ಎಂದು ನಾನು ಆಶಿಸುತ್ತೇನೆ. ಒಟ್ಟಾರೆ ಇಂದಿನ ಚಲನಚಿತ್ರದ ಶೈಕ್ಷಣಿಕ ಬೇಕು–ಬೇಡಗಳನ್ನು ಗಮನಿಸಿದಾಗ ಇಂತಹ ಚಿತ್ರಕಥೆಗಳ ಅವಶ್ಯಕತೆ ಬಹಳ ಇದೆ ಎಂಬ ಅರಿವಿನೊಡನೆ ಈ ಪ್ರಯೋಗವನ್ನು ಕನ್ನಡ ಸಾಹಿತ್ಯ ಹಾಗೂ ಕನ್ನಡ ಸಿನಿಮಾ ವಿದ್ಯಾರ್ಥಿಗಳು ಸ್ವೀಕರಿಸುತ್ತಾರೆ ಎಂಬ ನಂಬಿಕೆಯೊಡನೆ ನಿಮ್ಮೊಂದಿಗೆ ನನ್ನ ಅನಿಸಿಕೆಗಳನ್ನು ಹಂಚಿಕೊಳ್ಳುತ್ತಿದ್ದೇನೆ. ಈ ಪ್ರಕ್ರಿಯೆಯಲ್ಲಿ ಪಾಲ್ಗೊಂಡ ನನ್ನ ಎಲ್ಲಾ ಮಿತ್ರರಿಗೂ, ನನ್ನ ಕುಟುಂಬದವರಿಗೂ ನನ್ನ ಆತ್ಮೀಯ ನಮನಗಳು. ಶುಭವಿರಲಿ...

***ಟಿ.ಎಸ್. ನಾಗಾಭರಣ***


ಎಸ್. ಎ. ಗೋವಿಂದರಾಜ್
ಟಿ. ಎಸ್. ನಾಗಾಭರಣ
ಪದ್ಮಭೂಷಣ ಕರ್ನಾಟಕ ರತ್ನ
ರಾಜ್‌ಕುಮಾರ್
ಶ್ರೀ ನಿರುಪಮ ಕಂಬೈನ್ಸ್
ಆಕಸ್ಮಿಕ

ಬಿಡುಗಡೆ ದಿನಾಂಕ: 23-09-1993



# ಸಾರಾಂಶ

ಪ್ರತಿಯೊಬ್ಬರ ಹುಟ್ಟು ಸಾವಿನ ನಡುವಿನ ಆಕಸ್ಮಿಕಗಳೇ ಅವರವರ ಜೀವನ ಎನ್ನಬಹುದಾದರೆ, ಈ ಚಲನಚಿತ್ರ ಅಂಥ 'ಒಂದು' ಜೀವನದ ಪ್ರತಿಫಲನ. ನಮ್ಮ ಸುತ್ತಮುತ್ತ ನಡೆಯುವ ಘಟನೆಗಳು ಆಕಸ್ಮಿಕವಾಗಿದ್ದರೂ ಯಾವುದು ತಪ್ಪು ಯಾವುದು ಸರಿ ಎನ್ನುವ ವಿವೇಚನೆಯಿರುವ ವ್ಯಕ್ತಿ ತನ್ನ ನಿರ್ಧಾರಗಳ ಮೂಲಕ ತನ್ನ ಹಣೆಬರಹವನ್ನ ತಾನೇ ಬರೆಯುತ್ತಾನೆ. ಚಿತ್ರದ ನಾಯಕ ಮೂರ್ತಿ ಅಂತಹ ಆಕಸ್ಮಿಕಗಳನ್ನೇ ಅವಕಾಶಗಳನ್ನಾಗಿ ಮಾಡಿಕೊಳ್ಳುತ್ತಾ ತನ್ನ ಜೀವನದ ಗುರಿಯನ್ನು ಮುಟ್ಟುತ್ತಾನೆ. ಇತರರ ಕಷ್ಟಗಳನ್ನು ತನ್ನ ಕಷ್ಟವೆಂದು ಭಾವಿಸುತ್ತ, ಜನರ ಸೇವೆಗೆಂದೆ ಆರಕ್ಷಕ ಪಡೆಗೆ ಸೇರಬೇಕೆನ್ನುವ ಪ್ರಯತ್ನದಲ್ಲಿರುವ ಮೂರ್ತಿ ತನ್ನ ಅಮ್ಮನೊಂದಿಗೆ ವಾಸವಾಗಿರುತ್ತಾನೆ. ಅಮ್ಮನಾದರೋ ಮನುಷ್ಯರಲ್ಲಿರುವ ಜಾತಿ ಎರಡೇ– ಒಂದು ಗಂಡು ಒಂದು ಹೆಣ್ಣು ಎನ್ನುವ, ತನ್ನ ಮಗನ ಗೆಳೆಯರನ್ನೂ ತನ್ನ ಮಕ್ಕಳಂತೆ ನೋಡುವ ಮಮತಾಮಯಿ.

ಹೀಗೆ ಪ್ರಶಾಂತವಾಗಿದ್ದ ಮೂರ್ತಿಯ ಜೀವನದಲ್ಲಿ ಬಿರುಗಾಳಿಯೆಬ್ಬಿಸುವ ಘಟನೆಯೊಂದು ನಡೆಯುತ್ತದೆ. ತನ್ನ ಗೆಳೆಯನ ಮದುವೆ ಮುಗಿಸಿ ರೈಲಿನಲ್ಲಿ ಬರುತ್ತಿರುವಾಗ ಆತನಿಗೆ ಇಂದಿರಾ ಎಂಬ ಮುಗ್ಧ ಯುವತಿಯ ಹಾಗೂ ವ್ಯಾಸರಾಯ ಎಂಬ ನಡುವಯಸ್ಸಿನ ವ್ಯಕ್ತಿಯ ಪರಿಚಯವಾಗುತ್ತದೆ. ಈ ಭೇಟಿ ಆಕಸ್ಮಿಕವಾಗಿದ್ದರೂ ಮೂರ್ತಿಯ ಜೀವನಗತಿಯನ್ನೇ ಬದಲಿಸುವ ಕೆಲವು ವಿಷಯಗಳು ಅಲ್ಲಿ ಸುಳಿಸುಳಿಯಾಗಿ ಬಿಚ್ಚಿಕೊಳ್ಳುತ್ತವೆ. ಪಯಣ ಮುಂದುವರಿಯುತ್ತಿದ್ದಂತೆ ಒರ್ವ ಪೋಲೀಸ್ ನ ಮೂಲಕ ವ್ಯಾಸರಾಯ ಒಬ್ಬ ತಲೆಹಿಡುಕನೆಂದು ತಿಳಿಯುತ್ತದೆ. ಇಂದಿರಳನ್ನು ಅವನ ಕೈಯ್ಯಿಂದ ಬಿಡಿಸಿಕೊಳ್ಳಬೇಕೆಂದು ಮೂರ್ತಿ ನಿರ್ಧಾರ ಮಾಡುತ್ತಾನೆ. ಆಕೆಯ ಮೇಲಿನ ಅನುಕಂಪ ಪ್ರೀತಿಯಾಗಿ ಮಾರ್ಪಡುವ ಮುಂಚೆಯೇ ವ್ಯಾಸರಾಯ ಮೂರ್ತಿಯನ್ನ ಹೊಡೆದು ಹಾಕಿ ಆಕೆಯನ್ನು ಬಲವಂತವಾಗಿ ಸೆಳೆದೊಯ್ಯುತ್ತಾನೆ. ತನ್ನೆಲ್ಲ ಪ್ರಯತ್ನಗಳ ನಂತರವೂ ಓರ್ವ ಮುಗ್ಧ ಹೆಣ್ಣು ಮಗಳ ಬಾಳು ತನ್ನ ಕಣ್ಣ ಮುಂದೆಯೇ ನಾಶವಾದ ಆ ಘಟನೆ ಮೂರ್ತಿಯ ಮನದಲ್ಲಿ ಒಂದು ದೊಡ್ಡ ಗಾಯವನ್ನೇ ಉಂಟುಮಾಡುತ್ತದೆ.

ಜೀವನ ನಿಂತ ನೀರಲ್ಲ ಎನ್ನುವಂತೆ ಸ್ವಲ್ಪ ಸಮಯದ ನಂತರ ನಡೆಯುವ ಆಕಸ್ಮಿಕವೊಂದು ಮೂರ್ತಿಯ ಜೀವನದಲ್ಲಿ ಕ್ಲಾರಾ ಎನ್ನುವ ಹುಡುಗಿಯ ಪ್ರವೇಶ ಮಾಡಿಸುತ್ತದೆ. ತಾನು ಮದುವೆಯಾಗಬೇಕಾಗಿರುವ ಹುಡುಗನನ್ನು ತನ್ನ ಗೆಳತಿಯೊಡನೆ ಏಕಾಂತದಲ್ಲಿ ನೋಡಿ, ಗಂಡುಜಾತಿಯ ಬಗ್ಗೆಯೇ ಅಸಹ್ಯಗೊಂಡು ಕುಡಿತಕ್ಕೆ ಶರಣಾಗಿರುವ ಆಕೆಯ ಕಥೆಯನ್ನು ಕೇಳಿ ಮೂರ್ತಿಗೆ ಆಕೆಯ ಬಗ್ಗೆ ಅನುಕಂಪ ಮೂಡುತ್ತದೆ. ಅವನು ಆಕೆಯನ್ನು ಸರಿದಾರಿಗೆ ತರುವ ಪ್ರಯತ್ನವನ್ನು ಮಾಡುತ್ತಾನೆ. ಇಂದಿರಾಳನ್ನು ಕಾಪಾಡಲಾಗದ ದುಃಖವನ್ನು ಕ್ಲಾರಾಳಲ್ಲಿ ಹಂಚಿಕೊಳ್ಳುತ್ತಾ ಅವಳೊಂದಿಗೆ ತನ್ನ ಮನದ ಗಾಯವನ್ನೂ ಮರೆಯುತ್ತಾನೆ. ಹೀಗೆ ಸಂತಸದತ್ತ ಮುಖಮಾಡುವ

ಮೂರ್ತಿಯನ್ನು ವಿಧಿ ಮತ್ತೊಮ್ಮೆ ಅಣಕಿಸುತ್ತದೆ. ಕ್ಲಾರಾಳನ್ನು ಮದುವೆಯಾಗಿ ಮಧುಚಂದ್ರಕ್ಕೆ ತೆರಳುವ ಮೂರ್ತಿಯ ಕಣ್ಮುಂದೆ ನಡೆಯುವ ದುರ್ಘಟನೆಯೊಂದರಲ್ಲಿ ಕ್ಲಾರಾ ಆಕಸ್ಮಿಕವಾಗಿ ತನ್ನ ಜೀವ ಕಳೆದುಕೊಳ್ಳುತ್ತಾಳೆ.

ಈ ಎರಡೂ ದುರ್ಘಟನೆಗಳೂ ತನ್ನ ಕಣ್ಣ ಮುಂದೆ ನಡೆದರೂ ತನ್ನಿಂದೇನೂ ಮಾಡಲಾಗದ ಅಸಹಾಯಕ ಸಿಟ್ಟು ಮೂರ್ತಿಯನ್ನು ಸಿಡಿದೇಳಿಸುತ್ತದೆ. ಪೋಲೀಸ್ ನಿರೀಕ್ಷಕನಾಗಿ ನೇಮಿಸಲ್ಪಡುವ ಮೂರ್ತಿ ವೈಶ್ಯಾವಾಟಿಕೆ ಹಾಗೂ ತಲೆಹಿಡುಕರ ಜಾಲವನ್ನು ನಿರ್ನಾಮ ಮಾಡುವ ಪಣತೊಡುತ್ತಾನೆ. ಅದರಂತೆ ವ್ಯಾಸರಾಯನನ್ನು ಹುಡುಕುತ್ತಾ ಹೊರಡುವ ಮೂರ್ತಿಗೆ ಹಲವಾರು ಅಡೆತಡೆಗಳು ಎದುರಾಗುತ್ತವೆ. ಶುರುವಾದಲ್ಲೇ ಕೊನೆಯಾಗುವ ಜೀವನದ ಚಕ್ರ ದಂತೆ ಮೂರ್ತಿ ಮತ್ತೆ ವ್ಯಾಸರಾಯ ಮತ್ತೆ ಒಂದು ರೈಲು ನಿಲ್ದಾಣದಲ್ಲೇ ಭೇಟಿಯಾಗುತ್ತಾರೆ. ಮೂರ್ತಿ ವ್ಯಾಸರಾಯನ ಕಬಂಧ ಬಾಹುಗಳಿಂದ ಇಂದಿರಾಳನ್ನು ಬಿಡಿಸುತ್ತಾನೆ. ರೈಲಿನ ಅಡಿಗೆ ಬಿದ್ದು ವ್ಯಾಸರಾಯನ ಅವಸಾನವಾಗುತ್ತದೆ. ಮೂರ್ತಿ ಹಾಗೂ ಇಂದಿರಾ ಒಂದಾಗುವಲ್ಲಿಗೆ ಆಕಸ್ಮಿಕಗಳ ಸರಪಳಿಗೆ ಒಂದು ಅರೆತಡೆ ಬೀಳುತ್ತದೆ!!

ಜೀವನವನ್ನು ರೈಲಿನ ಸಮನಾಗಿ ಹೋಲಿಸುತ್ತಾ ಸಾಗುವ ಈ ಕಥೆ ನಮ್ಮೆಲ್ಲರ ಜೀವನದಲ್ಲಿ ಬಂದು ಹೋಗುವ ಆಕಸ್ಮಿಕ ಗಳಿಗೆ ಕನ್ನಡಿ ಹಿಡಿಯುತ್ತದೆ. ರೈಲಿನೊಂದಿಗೆ ಶುರುವಾಗುವ ಈ ಕಥೆ ರೈಲಿನೊಂದಿಗೆ ಮುಕ್ತಾಯವಾಗಿ ಜೀವನದ ಅಪೂರ್ಣತೆಯ ಪಾಠ ಹೇಳಿಕೊಡುತ್ತಾ ಮನದಲ್ಲುಳಿಯುತ್ತದೆ.

# SUMMARY

If it is true that the life we lead is nothing but accidents that occur between two absolute truths called life and death, then this movie stands as a reflection to that very stereotypical life. Even though a lot of events happen around us accidentally, those who are sensible enough to comprehend them and distinguish between right and wrong, shall write their own destiny with the choices they make. The Protagonist of the film Murthy is one of those few people who turn accidents in to opportunities to meet the purpose their life. Murthy is a golden hearted man who treats other's sorrows as his own. In order to serve the people and to give them the justice they deserve. He prepares himself to join the police force. He lives with his mother, a dearly soul who believes that there are only two religions in the world namely men and women and treats Murthy's friends as her own kin.

Murthy's peaceful and easy going life goes turbulent because of an incident. En route to his house from a friend's marriage, Murthy meets a mid aged man named Vyasaraya and an innocent looking girl named Indira on the train. Even though the meeting was accidental what unfolds in the journey, changes the course of Murthy's life. As the journey continues Murthy gets to know that Vyasaaraya is a pimp. He decides to save Indira from the cruel hands of Vyasaraya. Before his pity for Indira could turn in to affection, Vyasaraya attacks Murthy, knocks him off and abducts Indira. Watching an innocent girl's life getting crushed and not being able to save her, leaves major scars on Murthy's heart.

Life is never stagnant. It has a different way of healing wounds and that happens to Murthy when he accidently meets Clara, a beautiful but heartbroken girl. She tries to find her solace in drinking as she has a history that needs to be forgotten, the dark history of catching her fiancé cheating on her with her own friend. The incident that lead to her anti men rage. When Murthy listens to this story he feels pity on her. He decides to help her and bring her back to life. He also confesses his melancholy and tries to heal along with Clara. Murthy becomes happier everyday along with Clara not knowing what fate has planned for him. He marries Clara and leaves for honeymoon. In a dreadful mishap Clara loses her life right in front of Murthy's eyes.

Murthy gets outraged as both of these accidents had happened in front of his naked eyes and he could not do anything about it. The very

sense of helplessness he felt during those times, makes him resolute. He joins police force as an Inspector. He swears to destroy the evil of prostitution and human trafficking. He sets off to search Vyasaraya. Irony of life is it has to end where it began. As a proof to that Murthy finds Vyasaaraya in a train station. He fights his heart out and he finally gets his prize "Indira"! Vyasaraya falls under a train and loses his life. Movie ends with the union of Murthy and Indira.

Whole story travels comparing our life to the journey of a train and also reflects the accidents that occur in our life that change our destiny. The story starts with the train and ends with it, symbolizing the circle of life and with that notion the story ends but remains in our hearts.

## ತಾರಾಗಣ:

ಡಾ. ರಾಜ್‌ಕುಮಾರ್
ಮಾಧವಿ
ಗೀತಾ
ವಜ್ರಮುನಿ
ತೂಗುದೀಪ ಶ್ರೀನಿವಾಸ್
ಉಮೇಶ್
ಸುಂದರ್ ರಾಜ್
ಸತೀಶ್
ಅವಿನಾಶ್
ಮನ್‌ದೀಪ್ ರಾಯ್
ಕೃಷ್ಣೇಗೌಡ
ಹೊನ್ನವಳ್ಳಿ ಕೃಷ್ಣ
ಶನಿಮಹದೇವಪ್ಪ
ಆಂಜನಪ್ಪ
ಪ್ರವೀಣ್ ನಾಯಕ್
ವೆಂಕಿ
ನವೀನ್
ವಡ್ಡಾ ನಾಗರಾಜ್
ಶಿವಕುಮಾರ್
ಬಿ.ರಘುನಂದನ್
ಆಗ್ರೋ ಚಿಕ್ಕಣ್ಣ
ರಾಮಣ್ಣ
ಎ ಎಸ್ ಎ ಖಾನ್
ವೆಂಕಟಾಚಲ
ನಾಗಪ್ಪ ಮಾರಡಗಿ
ಗೋಪಿ
ಪಂಡರಿಬಾಯಿ
ಶಾಂತಮ್ಮ
ಜಾರ್ಜ್ ಇಂದಿರಾ
ಶ್ಯಾಮಲ
ಶ್ರೀರಕ್ಷಾ
ಲತಾ
ವೀಣಾ
ವಾಣಿ
ಶಾಂತಮ್ಮ
ಶಾಂತ

# ತಾಂತ್ರಿಕ ವರ್ಗ

**ವರ್ಣಾಲಂಕಾರ**
ವಿಶ್ವನಾಥ್

*ಸಹಾಯ*
ರಾಮು
ರವಿ

**ಕೇಶ ವಿನ್ಯಾಸ**
ನಾಗೇಶ್ವರ ರಾವ್

**ವಸ್ತ್ರಾಲಂಕಾರ**
ಆಂಜನೇಯ ರಾವ್

*ಸಹಾಯ*
ರಮಣ
ಗಣೇಶ

**ವಸ್ತ್ರವಿನ್ಯಾಸ** (ಡಾ. ರಾಜ್)
ಪುನೀತ್ ರಾಜ್‌ಕುಮಾರ್

**ಪತ್ರಿಕಾ ಸಂಪರ್ಕ**
ಹರೀಶ್
(ಮಂಜುನಾಥ ಸಿನಿ ವಾರ್ತೆ)

**ಪತ್ರಿಕಾ ಪ್ರಚಾರ**
ವೆಂಕೋಬ ರಾವ್

**ಪ್ರಚಾರ ಕಲೆ**
ಗಂಗಾಧರ್

**ಸ್ಥಿರ ಚಿತ್ರಣ**
ರಾಜ್ ವೆಂಕಟೇಶ್
ಪ್ರವೀಣ್ ನಾಯಕ್

**ಟೈಟಲ್ಸ್**
ಸೂರ್ಯ (ವೈ.ಎಸ್.ಎ.ಆರ್ಟ್ಸ್)

**ನಿರ್ಮಾಣ ಸಹಾಯಕರು**
ಗಣಪತಿ
ದೇವರಾಜು
ಮೈಸೂರು ಚಂದ್ರು
ಸುರೇಂದ್ರ
ಪ್ಯಾಲೇಸ್ ಚಂದ್ರು
ವಿ.ಶ್ರೀನಿವಾಸ್

**ವಾಹನ ಚಾಲಕರು**
ತಿಮ್ಮಣ್ಣ
ಮರಿಯಪ್ಪ
ಶಿವ
ಎಸ್.ಎನ್. ರಾಜಣ್ಣ
ಅನಂತು
ಜಮೀರ್
ಶ್ರೀನಿವಾಸ್
ಗೋಪಿ
ರವಿ
ಹನುಮಂತು

**ಸಹ–ಕಲಾವಿದರ ಸರಬರಾಜು**
ಹೆಚ್.ಎನ್. ಚಂದ್ರ

**ಕ್ಯಾಮೆರಾ ಸಹಾಯಕರು**
ಟಿ.ಕೆ. ಪ್ರಕಾಶ್
ಬದರಿ ನಾರಾಯಣ್

**ಶಬ್ಧಗ್ರಹಣ**
ಶ್ರೀಧರ್

*ಸಹಾಯ*
ವೆಂಕಟೇಶ ಬಾಬು

**ವಿದ್ಯುತ್ ನಿರ್ವಹಣೆ**
ಭೋಜರಾಜ್
ಸಭಾಪತಿ

**ಬೆಳಕು**
ಎ.ಬಿ. ನಾಗರಾಜ್
ರಾಜ, ರಾಜೇಶ್
ಎಂ. ರಾಜೇಶ್
ಎಂ.ಆರ್. ಶ್ರೀನಿವಾಸ್
ಪುಟ್ಟ

**ಹೊರಾಂಗಣ ಚಿತ್ರೀಕರಣ ಘಟಕ**
ಪೂರ್ಣಿಮಾ ಎಂಟರ್‌ಪ್ರೈಸಸ್
ಬೆಂಗಳೂರು

**ಸಂಸ್ಕರಣ**
ಪ್ರಸಾದ್ ಫಿಲಂ ಲ್ಯಾಬೋರೇಟರೀಸ್
ಬೆಂಗಳೂರು

**ಹಾಡುಗಳು ಮತ್ತು**
**ಹಿನ್ನೆಲೆ ಸಂಗೀತದ ಧ್ವನಿಮುದ್ರಣ**
ವಿ.ಬಿ.ಸಿ ಮೆನನ್

*ಸಹಾಯ*
ಜಾನಕೀರಾಮ್
ಮಹೇಂದ್ರನ್
ಸೌಂದರ್ ರಾಜನ್
ಬಾಬುರಾವ್

**ಮಾತುಗಳ ಜೋಡಣೆ**
ಕೋದಂಡಪಾಣಿ

*ಸಹಾಯ*
ಶ್ರವಣ್
ವಿಜಯರಾಜ್

**ಕಂಠದಾನ**
ಸರ್ವಮಂಗಳ
ವೀಣಾ
ಶ್ಯಾಮಲ
ನಾಯ್ಡು
ಮುರಳಿ
ರಾಜೇಂದ್ರ

**ಹಿನ್ನಲೆ ಗಾಯಕರು**
ಡಾ. ರಾಜ್‌ಕುಮಾರ್
ಮಂಜುಳಾ ಗುರುರಾಜ್

**ನೃತ್ಯ**
ಉಡುಪಿ ಜಯರಾಮ್
ತಾರಾ

*ಸಹಾಯ*
ದೇವಿ
ಪ್ರಸಾದ್

**ಸಾಹಸ**
ಸ್ವಾಮಿ

*ಸಹಾಯ*
ನಿತ್ಯ

**ನಿರ್ಮಾಣ ಸಂಪೂರ್ಣ ಮೇಲ್ವಿಚಾರಣೆ**
ವಿಕ್ರಮ್ ಶ್ರೀನಿವಾಸ್

*ಸಹಾಯ*
ಆರ್.ಕೆ.ಮಲ್ಲಿಕಾರ್ಜುನ

**ಕಥೆ:**
ತ.ರಾ.ಸು
*(ಆಕಸ್ಮಿಕ–ಅಪರಾಧಿ–ಪರಿಣಾಮ ಆಧಾರಿತ)*

**ಸಂಭಾಷಣೆ**
ಸಾಹಿತ್ಯರತ್ನ ಚಿ. ಉದಯಶಂಕರ್
ಪಾಲ್ ಸುದರ್ಶನ್

**ಸಹ–ನಿರ್ದೇಶನ**
ಪಿ.ಶೇಷಾದ್ರಿ
ಬಿ.ರಘುನಂದನ್

*ಸಹಾಯ*
ಸತೀಶ್ ಚಂದ್ರ
ಎಸ್ ನಾಗಪ್ಪ

**ಸಂಕಲನ**
ಪಿ.ಭಕ್ತವತ್ಸಲಂ

*ಸಹಾಯ*
ಶಶಿ
ರಮೇಶ್
ಶ್ರೀನಿವಾಸ್
ಜೋಸೆಫ್

**ಛಾಯಾಗ್ರಹಣ**
ಎಸ್.ವಿ.ಶ್ರೀಕಾಂತ್

*ಸಹಾಯ*
ವಿ.ಕುಮಾರ್
ಎ.ಮೀನಾಕ್ಷಿ ಸುಂದರಂ
ಸಿ.ಕೆ.ರಾಜನ್

**ಸಂಗೀತ–ಹಾಡುಗಳು**
ಹಂಸಲೇಖ

**ಸಂಗೀತ ನಿರ್ವಾಹಕ**
ಸ್ಯಾಕ್ಸ್ ರಾಜ

*ಸಹಾಯ*
ಚಿನ್ನ
ವೆಂಕಟೇಶ್

**ನಿರ್ಮಾಪಕರು**
ಎಸ್.ಎ. ಗೋವಿಂದರಾಜು
(ಸಾಲಿಗ್ರಾಮ)

**ಚಿತ್ರಕಥೆ–ನಿರ್ದೇಶನ**
ಟಿ.ಎಸ್. ನಾಗಾಭರಣ

# ದೃಶ್ಯ 1

*ಹಗಲು – ಕ್ರೈಸ್ತ ಸ್ಮಶಾನ*

(ಒಂದು ವಿಶಾಲವಾದ ಕ್ರೈಸ್ತ ಸ್ಮಶಾನ, ಅದರ ಒಂದು ಮೂಲೆಯಿಂದ ಜೀಪೊಂದು ಬಂದು ಸ್ಮಶಾನದ ಮಧ್ಯಭಾಗದಲ್ಲಿ ನಿಲ್ಲುತ್ತದೆ.)



**[ಸ್ಮಶಾನ, ಅಲ್ಲಿನ ಗೋರಿಗಳು ಹಾಗೂ ಅಲ್ಲಿಗೆ ಬರುವ ನಾಯಕನ ಜೀಪು ಮುಂತಾದ ವಿವರಗಳನ್ನು ಒಂದೇ ಶಾಟ್‌ನಲ್ಲಿ ತೋರಿಸುವ ಸಲುವಾಗಿ ಕ್ರೇನ್ ಮತ್ತು ವೈಡ್ ಆ್ಯಂಗಲ್ ಶಾಟ್ ಬಳಸಲಾಗಿದೆ]**

(ಜೀಪಿನಿಂದ ಒಬ್ಬ ಪೋಲೀಸ್ ಅಧಿಕಾರಿ ಹೊರಗೆ ಬಂದು ತನ್ನ ಕೈಯಲ್ಲಿ ಒಂದು ಹೂ ಗುಚ್ಛವನ್ನು ಹಿಡಿದು ನೇರವಾಗಿ ಒಂದು ಸಮಾಧಿಯ ಬಳಿಗೆ ಬರುತ್ತಾನೆ. ಬಂದು ಅದರ ಮುಂದೆ ಕುಳಿತು ಹೂ ಗುಚ್ಛವನ್ನು ಸಮಾಧಿಯ ಮೇಲಿಟ್ಟು ತನ್ನ ಪೋಲೀಸ್ ಟೋಪಿಯನ್ನು ತೆಗೆಯುತ್ತಾನೆ. ಸಮಾಧಿಯ ಮೇಲೆ..

**ಶ್ರೀಮತಿ ಕ್ಲಾರಾ ಮೂರ್ತಿ**
**ಜನನ–22–11–1970**
**ಮರಣ–25–12–1992**

ಎಂದು ಬರೆದಿರುತ್ತದೆ. ಸಮಾಧಿಯನ್ನೇ ದಿಟ್ಟಿಸಿ ನೋಡುತ್ತಾ ಅತ್ಯಂತ ಪ್ರೀತಿ ಪಾತ್ರರನ್ನು ಕಳೆದುಕೊಂಡು ಅತೀವವಾಗಿ ದುಃಖಿಸುತ್ತಾನೆ. ಇನ್ನೇನು ಹೊರಡಬೇಕೆನ್ನು–ವಷ್ಟರಲ್ಲಿ ಆತನಿಗೆ, ಪಕ್ಕದಲ್ಲೇ ಹಾದುಹೋಗುವ ರೈಲಿನ ಶಬ್ದ ಕೇಳಿಸುತ್ತದೆ. ಆತ ಅದನ್ನೇ ದಿಟ್ಟಿಸಿ ನೋಡುತ್ತ ಏನನ್ನೋ ಜ್ಞಾಪಿಸಿಕೊಳ್ಳುತ್ತಾನೆ. ಹಿಂದಣ ಕಥೆ ಬಿಚ್ಚಿಕೊಳ್ಳುತ್ತದೆ)



# ದೃಶ್ಯ 2

***ಹಗಲು – ತಾಳಗುಪ್ಪ ರೈಲು ನಿಲ್ದಾಣ***

(ರೈಲು ತಾಳಗುಪ್ಪ ನಿಲ್ದಾಣದಿಂದ ಚಲಿಸುತ್ತಿರುತ್ತದೆ, ಕಥಾನಾಯಕ ಯುವಕ ಮೂರ್ತಿ ಓಡಿ ಬಂದು ಚಲಿಸುತ್ತಿರುವ ರೈಲನ್ನು ಹತ್ತುತ್ತಾನೆ.)

# ದೃಶ್ಯ 2ಅ

*ಹಗಲು – ರೈಲು ಬೋಗಿಯ ಒಳಗೆ (ಚಲಿಸುತ್ತಿರುವ ರೈಲು)*

ಮೂರ್ತಿ ರೈಲನ್ನು ಹತ್ತಿ ಒಂದು ಆಸನದಲ್ಲಿ ಕುಳಿತು, ಎದುರಿಗೆ ಕುಳಿತಿರುವ ಒಂಟಿ ಹೆಣ್ಣು ಇಂದಿರಾಳನ್ನು ನೋಡಿ ಬೇರೆಡೆ ಕುಳಿತುಕೊಳ್ಳೋಣವೆಂದು ಹೊರಟು ಬೇಡವೆಂದು ಅಲ್ಲೇ ಕುಳಿತು ಪುಸ್ತಕ ಓದಲು ಪ್ರಾರಂಭಿಸುತ್ತಾನೆ. ರೈಲಿನ ಶೌಚಾಲಯದಿಂದ ಹೊರಬರುವ ವ್ಯಾಸರಾಯ, ಮೂರ್ತಿಯನ್ನು ಗಮನಿಸಿ ನೇರಬಂದು ಇಂದಿರಾಳ ಪಕ್ಕದಲ್ಲಿ ಕೂರುತ್ತಾನೆ. ಆಗ ಮೂರ್ತಿಗೆ ಅವರಿಬ್ಬರು ಪರಿಚಿತರಿರಬೇಕು ಎನಿಸುತ್ತದೆ. ನಂತರ ತನ್ನಷ್ಟಕ್ಕೆ ತಾನು ಪುಸ್ತಕದಲ್ಲಿ ತಲ್ಲೀನನಾಗುತ್ತಾನೆ. ಬೀಡಿ ಸೇದಲು ಪ್ರಾರಂಭಿಸುವ ವ್ಯಾಸರಾಯನಿಂದಾಗಿ ಅವರಲ್ಲಿ ಸಂಭಾಷಣೆ ಆರಂಭವಾಗುತ್ತದೆ.).

*ಹಸ್ತಪ್ರತಿಯಲ್ಲಿ:*

*ವ್ಯಾಸರಾಯ : ಓ ನೀವು ಬೀಡಿ ಸಿಗರೇಟು ಸೇದೋಲ್ಲಾಂತ ಕಾಣುತ್ತೆ*

*ಮೂರ್ತಿ : ಹಾಗೇನಿಲ್ಲ, ಹೊಗೆ ಸಹಿಸಿಕೊಳ್ಳೋದು ಸ್ವಲ್ಪ ಕಷ್ಟ.*

*ವ್ಯಾಸರಾಯ : ಹೌದಾ..*

ವ್ಯಾಸರಾಯ : (ನಗುತ್ತ) ಏನೂ, ರಾಯರಿಗೆ ಬೀಡಿ ಸಿಗರೇಟು ಆಗಲ್ಲ ಅಂತ ಕಾಣ್ಸುತ್ತೆ.?

ಮೂರ್ತಿ : ಹಾಗೇನಿಲ್ಲ, ಆ ಹೊಗೆ ವಾಸನೆ ತಡೆದು ಕೊಳ್ಳೋಕಾಗೋದಿಲ್ಲ.

(ಮತ್ತೊಬ್ಬರಿಗೆ ತೊಂದರೆ ಕೊಡಬಾರದೆಂಬ ಉದ್ದೇಶದಿಂದ ಬೀಡಿಯನ್ನು ಕಿಟಕಿಯಿಂದ ಹೊರಗೆ ಎಸೆಯುತ್ತಾನೆ. ಇದನ್ನು ನೋಡಿದ ಮೂರ್ತಿ ಸಂತೋಷದಿಂದ..)

ಮೂರ್ತಿ : ಥ್ಯಾಂಕ್ಸ್, ಹೇಳೋಕಿಂತ ಮುಂಚೆನೆ ಅರ್ಥ ಮಾಡ್ಕೊಂಡ್‌ಬಿಟ್ರಲ್ಲ.!

*ಹಸ್ತಪ್ರತಿಯಲ್ಲಿ:*

*ವ್ಯಾಸರಾಯ : ಇನ್ನೊಬ್ರಿಗೆ ತೊಂದ್ರೆ ಕೊಡೋದ್ನ ನನ್ ಮನಸ್ಸು ಒಪ್ಪಲ್ಲ. ಮನಸ್ಸು ಮುಟ್ಟಿದ್ರೆ ಆ ಭಗವಂತ ಕೂಡ ಮೆಚ್ಚುತಾನೆ.*

*ಮೂರ್ತಿ : ತುಂಬಾ ಚೆನ್ನಾಗ್ ತಿಳ್ಕೊಂಡಿದೀರಿ.*

*ವ್ಯಾಸರಾಯ : ಆದ್ರೆ ನಾನು ಹೆಬ್ಬೆಟ್ಟಿನ ರಾಜ ಸ್ವಾಮಿ*

*ಮೂರ್ತಿ : ನಂಗೊತಾಗ್ಲಿಲ್ಲ.*

*ವ್ಯಾಸರಾಯ : ಅಂದ್ರೆ ಇದು (ಹೆಬ್ಬೆಟ್ಟನ್ನು ತೋರಿಸುತ್ತಾನೆ)*

*ಮೂರ್ತಿ : ವಿದ್ಯಾಭ್ಯಾಸ ಇಲ್ಲಾ ಅಂತೀರಾ?*

*ವ್ಯಾಸರಾಯ : ಅಂದಹಾಗೆ ತಮ್ ಹೆಸ್ರು?*

ವ್ಯಾಸರಾಯ : ಆ.. ಇನ್ನೊಬ್ರಿಗೆ ತೊಂದ್ರೆ ಕೊಡೋದನ್ನ ನನ್ನ ಮನಸ್ಸು ಒಪ್ಪಲ್ಲ. ಅಂದ ಹಾಗೆ ತಮ್ಮ ಹೆಸರು?

ಮೂರ್ತಿ : ಮೂರ್ತಿ ಅಂತ. ತಮ್ಮ ಹೆಸರು?

ವ್ಯಾಸರಾಯ : ವ್ಯಾಸರಾಯ ಅಂತ. ಆ.. ಎಲ್ಲಿಗ್ ಹೋಗಿತ್ತೋ ತಮ್ಮ್ ಪ್ರಯಾಣ?

ಮೂರ್ತಿ : ಇಲ್ಲೇ ಪಕ್ಕದಳ್ಳಿ ಹಿರೇಮಡ್ಲಲ್ಲಿ ನನ್ನ ಸ್ನೇಹಿತನ ಮದುವೆಗೆ ಹೋಗಿದ್ದೆ, ಈಗ ವಾಪಾಸ್ ಬೆಂಗಳೂರಿಗೋಗ್ತಿದಿನಿ.

ವ್ಯಾಸರಾಯ : ಒಬ್ಬರೇ ಹೋಗ್ತಿದಿರಿ?
(ಪ್ರಶ್ನಾರ್ಥಕವಾಗಿ) ಸಂಸಾರ, ಮಕ್ಳು, ಮರಿ?

ಮೂರ್ತಿ : ಮದುವೇನೆ ಆಗ್ದೆ ಮಕ್ಳು ಮರಿ ಹೇಗ್ ಸಾಧ್ಯ.

ವ್ಯಾಸರಾಯ : (ಆಶ್ಚರ್ಯದಿಂದ) ಓ ಮದುವೇನೆ ಆಗಿಲ್ವೊ? ಒಳ್ಳೇದಾಯ್ತು ಒಳ್ಳೇದಾಯ್ತು. ಯಾವ್ದಕ್ಕು ಋಣಾನು ಬಂಧ ಬೇಕು ಸ್ವಾಮಿ. ಋಣಾನುಬಂಧ ರೂಪೇಣಾ ಪಶು ಪತ್ನಿ ಸುತಾಲಯ ಅಂತ.
(ಎಂದು ಹೇಳಿ ಹಾಡನ್ನು ಹಾಡಲು ಪ್ರಾರಂಭಿಸುತ್ತಾನೆ)
ಮಲ್ಲೆ ಮಲ್ಲಿಗೆ, ಜಾಜಿ ಬಳ್ಳಿಗಳೆಲ್ಲವೂ..
ಮಲ್ಲೆ ಮಲ್ಲಿಗೆ, ಜಾಜಿ ಬಳ್ಳಿಗಳೆಲ್ಲವೂ..
(ಮುಂದಿನ ಸಾಲು ಜ್ಞಾಪಕಬರದೆ ತೊದಲಿಸಿ ಏನನ್ನೋ ಗೊಣಗುತ್ತಾನೆ. ಇದನ್ನು ಗಮನಿಸುವ ಮೂರ್ತಿ ನಗುತ್ತ ಅದರ ಮುಂದಿನ ಭಾಗವನ್ನು ಹಾಡುತ್ತಾನೆ)

ಮೂರ್ತಿ : ಫಲಾ ಪುಷ್ಪವ ಚೆಲ್ಲಿರೇ..
(ಹಾಡನ್ನು ಚೆನ್ನಾಗಿ ಹಾಡುತ್ತಿರುವ ಮೂರ್ತಿಯನ್ನು ನೋಡಿ ವ್ಯಾಸರಾಯನಿಗೆ ಅತ್ಯಾನಂದವಾಗುತ್ತದೆ)

ಅಲ್ಲಲ್ಲಿ ಎಲ್ಲಿ ನೋಡಲು ಶೋಭಿಕುಂ..
ಅಲ್ಲಲ್ಲೀ.. ಎಲ್ಲಿ ನೋಡಲು..
(ಎಂದು ಹಾಡಿ ಹೇಳಿ ಮೂರ್ತಿ ನಗುತ್ತಾನೆ)

ವ್ಯಾಸರಾಯ : ಅದೇನ್ ಸಂಗ್ತಿ ಹೊಡ್ಡ್‌ಬಿಟ್ರಿ ಸ್ವಾಮಿ ಅದೇನ್ ಸಂಗ್ತಿ ಹೊಡ್ಡ್‌ಬಿಟ್ರಿ. ಇದು ಆ ಕಾಲದಲ್ಲಿ ಕೇಳ್ದ್ದಾಗಿದೆ, ವಾ ಅದೇನ್ ರಾಗ, ಅದೇನ್ ಮಟ್ಟು, ಅದೇನ್ ಸಂಗ್ತಿ.. ವೋ... ಈ ಕಾಲ್‌ದಲ್ಲಿ ಅವೆಲ್ಲ ಇಲ್ಲ ಬಿಡಿ. ಅಂದ್ಹಾಗೆ ನಿಮ್ಗೆ ಈ ನಾಟಕದ ಮಟ್ಟು ಹೇಗ್ ಪರಿಚಯ?

ಮೂರ್ತಿ : ಹಿಂದೆ ನಮ್ ತಂದೆ ನಾಟಕದಲ್ಲಿ ಪಾರ್ಟ್ ಮಾಡ್ತಾ ಇದ್ರು.
(ವ್ಯಾಸರಾಯ ವಾಹ್ ಎಂದು ಚಪ್ಪಾಳೆ ತಟ್ಟುತ್ತಾನೆ)
ಬಹಳ ಚೆನಾಗ್ ಹಾಡ್ತಾ ಇದ್ರು, ಅದ್ರ ನೆನಪು..

ವ್ಯಾಸರಾಯ : (ಸಂತೋಷಗೊಂಡು) ಆಹ್.. ಹಾಗನ್ನಿ ಮತ್ತೆ. ಎಲ್ಲ ಜನ್ಮಾಂತರದ್ದು ಸ್ವಾಮಿ ಜನ್ಮಾಂತರದ್ದು. ಸಂಸಾರದಲ್ಲಿ ಮೊಮ್ಮಗ ತಾತನ ಇನ್ನೊಂದ್ ಜನ್ಮ ಅಂತ ಹೇಳ್ತಾರೆ. ಹಾಗೆ ನಿಮ್ ಸಂಸಾರದಲ್ಲೂ ಆ ಸಂಸ್ಕಾರ ಇರ್ಲೇ ಬೇಕು.

ಮೂರ್ತಿ : ಇಲ್ಲ ಬಿಡಿ, ನಂಗ್ ಈ ಚಟ ಎಲ್ಲ ಹತ್ತಿಲ್ಲ.

ವ್ಯಾಸರಾಯ : ಇರ್ಬೇಕು ಸ್ವಾಮಿ, ಮನುಷ್ಯನಿಗೆ ಚಟ ಅನ್ನೋದು ಇರ್ಬೇಕು.
(ಮೂರ್ತಿ ಸರಿ ಎನ್ನುವಂತೆ ತಲೆ ಅಲ್ಲಾಡಿಸುತ್ತಾ ತಲೆ ಬಾಗಿಸುತ್ತಾನೆ)
ಈಗ ನನ್ನೇ ನೋಡಿ, ನಾನು ನಾಟಕದ ಕಂಪೆನಿಯಲ್ಲಿ ಎಷ್ಟು ವರ್ಷಗಳಿಂದ ಸೇವೆಮಾಡ್ತಾ ಇದಿನಿ.

ಮೂರ್ತಿ : (ಕುತೂಹಲದಿಂದ) ಹಾಗಾದ್ರೆ ನೀವು ನಾಟಕದಲ್ಲಿ ಪಾರ್ಟ್ ಮಾಡ್ತಿರಾ?

***ಹಸ್ತಪ್ರತಿಯಲ್ಲಿ:***

***ವ್ಯಾಸರಾಯ : ಇಲ್ಲ ಇಲ್ಲ, ಪಾರ್ಟ್ ಮಾಡೋರ್ನ ನಾಟಕದ ಕಂಪೆನಿಗೆ ಕರ್ಕೊಂಡೋಗಿ ಸೇರಿಸ್ತೀನಿ. ಈಕೆ ಇಂದ್ರಾಂತ ಒಳ್ಳೆ ಶಾರೀರ, ಸೊಗಸಾಗಿ ಹಾಡ್ತಾಳೆ. ಆದ್ರೆ ಮನೆ ಕಡೆಗೆ ದುಡಿಯೋ ದುಡಿಮೆ ದವಡೆಗೂ ಸಾಲಲ್ಲ. ತಂದೇನ ಕಳ್ಕೊಂಡ ತಬ್ಬಲಿ, ಇನ್ನೂ ಇಬ್ರು ಹೆಣ್ಣ್ ಮಕ್ಳ***

*ಮದುವೆಯಾಗ್ಬೇಕು. ಏನೋ ನನ್ ಕೈಲಾದ ಕಲಾ ಸೇವೆ. ಈ ಮಗೂಗೆ ಒಂದು ಸಾವಿರ ಅಡ್ವಾನ್ಸ್ ಕೊಟ್ಟು ನಾಟಕದ ಕಂಪೆನಿಗೆ ಸೇರ್ಸ್ಲೋಣ ಅಂತ ಕರ್ಕೊಂಡೋಗ್ತಿದಿನಿ. ಅದ್ರ ಮೇಲೆ ಅವನಿಚ್ಛೆ.*

ವ್ಯಾಸರಾಯ : ಛೇ ಛೇ ಛೇ.. ಇಲ್ಲ ಇಲ್ಲ, ಪಾರ್ಟ್ ಮಾಡೋರ್ನ ನಾಟಕದ ಕಂಪೆನಿಗೆ ಕರ್ಕೊಂಡ್ಹೋಗಿ ಸೇರ್ಸ್ತಿನಿ. ಈಕೆ ಇಂದಿರಾ ಅಂತ, ಓಳ್ಳೆ ಶಾರೀರ, ಸೊಗಸಾಗ್ ಹಾಡ್ತಾಳೆ.

ವ್ಯಾಸರಾಯ : ತಂದೆ ಇಲ್ಲದ ತಬ್ಬಲಿ. ಅದಿಕ್ಕೆ ಒಂದು ಸಾವಿರ ರೂಪಾಯಿ ಅಡ್ವಾನ್ಸ್ ಕೊಟ್ಟು ನಾಟಕದ ಕಂಪೆನಿ ಸೇರ್ಸಣ ಅಂತ ಕರ್ಕೊಂಡ್ ಹೊಗ್ತಾ ಇದಿನಿ.

ಮೂರ್ತಿ : ಒಳ್ಳೆ ಕೆಲ್ಸ ಮಾಡ್ತಿದಿರಿ ಪಾಪ.

ವ್ಯಾಸರಾಯ : (ಸಂಕೋಚದಿಂದ ನಗುತ್ತ)
ನೀವೇನೆ ಹೇಳಿ ಸ್ವಾಮಿ ಆಗಿನ ಕಾಲದ ನಾಟಕಗಳೇ ನಾಟಕಗಳು. ಎಂಥೆಂಥ ಕಲಾವಿದರಿದ್ರು. ನಾಗೇಶ ರಾಯರು, ಸುಬ್ಬರಾಯರು, ಓಹ್ ಹಹ್.. ಅದೇನ್ ಮಟ್ಟುಗಳನ್ನ ಹಾಡ್ತಾ ಇದ್ರು ಸ್ವಾಮಿ. ಅಂದಹಾಗೆ ಈ ಎಚ್ಚಮ್ಮನಾಯ್ಕ ನಾಟಕದಲ್ಲಿ ಪುಟ್ಟಸ್ವಾಮಯ್ಯನವರು ಬಾದ್‌ಷಾನ ಪಾತ್ರಮಾಡ್ತಾ, ಕುದ್ರೋರ್ ಹಂಗೆ ಬಂದು ಹಾಡ್ತಾ ಇದ್ರು ಓಹ್ ಅದೇನು ಹಾಡುಗಾರಿಕೆ ಸ್ವಾಮಿ, ಅದೇನು ತುಂಬಿದ ಕಂಠ. ಅವ್ರು ಅದೇನೋ ಹಾಡ್ತಾ ಇದ್ರು ಆ ಹಾಡು ಹಾಳಾದ್ದು ಬಾಯಲ್ಲೇ ಇದೆ ನೆನಪಿಗ್ ಬರ್ತಾ ಇಲ್ವಲ್ಲ.

ಮೂರ್ತಿ : ಅನುರಾಗವಾಂತನಾ?

ವ್ಯಾಸರಾಯ : ಹ್ಞಾ... ಅದೇ ಅದೇ ನನ್ ತಂದೆ. ಅರ್ದೇ. ಏನ್ ಹಾಡು. ದೇವಲೋಕದ ಗಾಯನ ಸ್ವಾಮಿ. ಎಲ್ಲಿ ಒಂದ್ಸ್ವಲ್ಪ ಹಂಗನ್ನಿ ಶಿವ.

ಮೂರ್ತಿ : ನಾನಾ?

ವ್ಯಾಸರಾಯ : ಹ್ಞೂ ಹಂಗನ್ನಿ.

**ನಿರ್ದೇಶಕರ ಟಿಪ್ಪಣಿ:**

**ಮೇಲ್ಭಾಗದಲ್ಲಿ ಕಾಣಿಸಿದಂತೆ ಚಿತ್ರೀಕರಣದ ಸಮಯದಲ್ಲಿ ನಟರ ಜೊತೆ ದೃಶ್ಯವನ್ನು ಕಟ್ಟುವಾಗ ಕೆಲವು ಸಂಭಾಷಣೆಗಳು ಅನಾವಶ್ಯಕ ಎನಿಸದ್ದನ್ನು ತೆಗೆದುಹಾಕಿ ಅವರ ನಟನೆಗೆ ಅನುಕೂಲವಾಗುವಂತೆ ಸಂಭಾಷಣೆಗಳನ್ನು ಬಳಸಿಕೊಳ್ಳಲಾಯಿತು**

# ದೃಶ್ಯ 3

*ಹಗಲು – ರೈಲು ಬೋಗಿಯ ಒಳಗೆ (ಹಾಡು)*

ಮೂರ್ತಿ : (ಮೂರ್ತಿ ಹಾಡಲು ಪ್ರಾರಂಭಿಸುತ್ತಾನೆ.)
ಅನುರಾಗವಾ..
(ವ್ಯಾಸರಾಯ ಹಾಡನ್ನು ಕೇಳುತ್ತ ಸಂತೋಷ ಮತ್ತು ಸಂತೃಪ್ತಿ ಹೊಂದುತ್ತಿದ್ದಾನೆ.)
ಭೋಗಾ.. ಸುಖದಾ.. ಅನುರಾಗವಾ ಭೋಗಾ ಸುಖದಾ..
ಅನುಭವವಾ ಮುದವಾ ಪಡೆವಾ..
(ಇಂದಿರಾ ಮೂರ್ತಿಯನ್ನು ನೋಡುತ್ತಿರುತ್ತಾಳೆ)
ನಲಿವಾ ಅನುರಾಗವಾ ಬೋಗಾ ಸುಖದಾ..



(ವ್ಯಾಸರಾಯ ಹಾಡನ್ನು ಕೇಳುತ್ತ ಸಂತೋಷ ಹೊಂದುತ್ತಿದ್ದಾನೆ)
ಅನುಭವವಾ ಮುದವಾ ಪಡೆವಾ ನಲಿವಾ ಅನುರಾಗವಾ..
(ಹಾಡನ್ನು ಕೇಳುತ್ತ ಇಂದಿರಾ ಕಲ್ಪನೆಗೆ ಹೋಗುತ್ತಾಳೆ.)

**[ಇಂದಿರಾ ಮೂರ್ತಿಯ ಗಾಯನ ಕಲೆಯನ್ನು ಮೆಚ್ಚಿ ಹಾಗು ಆಕೆಗೂ ಗಾಯನ, ನೃತ್ಯ ಮತ್ತು ನಾಟಕದಲ್ಲಿರುವ**

**ಆಸಕ್ತಿಯಿಂದ ಆಕೆ ಕನಸಿನ ಲೋಕಕ್ಕೆ ಜಾರುವ ಮುಖಭಾವ ಸಿನಿಮ್ಯಾಟಿಕ್ ಆಗಿ ತೋರಿಸುವ ಸಲುವಾಗಿ ಮಿಡ್ ಶಾಟ್‌ನಿಂದ ಆಕೆಯ ಮುಖಕ್ಕೆ ಝೂಮ್ ಮಾಡಲಾಗಿದೆ]**

# ದೃಶ್ಯ ೩ಅ

*ಹಗಲು – ರಂಗಭೂಮಿಯ ರಂಗವೇದಿಕೆ (ಹಾಡು)*

(ರಂಗಭೂಮಿಯ ರಂಗವೇದಿಕೆ, ಅಲ್ಲಿ ಮೂರ್ತಿ ಮತ್ತು ಇಂದಿರಾ ಹಾಡಿನ ಪಾತ್ರಕ್ಕೆ ತಕ್ಕಂತೆ ವೇಷಧಾರಿಗಳಾಗಿ ಅಭಿನಯಿಸುತ್ತಿರುವಂತೆ, ನಾಟಕದ ಗುರುಗಳು ಹಾರ್ಮೋನಿಯಂನ್ನು ನುಡಿಸುತ್ತಿರುವಂತೆ ಕಲ್ಪಿಸಿಕೊಳ್ಳುತ್ತಾಳೆ.)

ಮನಮೋಹನಾಂಗಿ ಮುಖತೋರೆಲೇ
ನೀರೇ ಮನಮೋಹನಾಂಗಿ..
ಮನಮೋಹನಾಂಗಿ ಮುಖತೋರೆಲೇ
ನೀರೇ ಮನಮೋಹನ..
ಮನಮೋಹನಾಂಗಿ ಮುಖತೋರೆಲೇ ನೀರೇ..
ಧ್ಯಾನ ನಿನ್ನೋಳಾಗೇ ಎನ್ನ ಸಾಮ್ರಾಜ್ಯ ನೀನೇ..
ಅನುರಾಗವಾ ಭೋಗಾ ಸುಖದಾ..
ಅನುಭವವಾ ಮುದವಾ ಪಡೆವಾ..
ನಲಿವಾ ಅನುರಾಗವಾ ಅನುರಾಗವಾ..
ಅನುರಾಗವಾ ಅನುರಾಗವಾ ಬೋಗಾ ಸುಖದಾ.
ಅನುಭವವಾ ಮುದವಾ ಪಡೆವಾ..
ನಲಿವಾ ಅನುರಾಗವಾ ಅನುರಾಗವಾ..
ಅನುರಾಗವಾ ಅನುರಾಗವಾ..

(ಹಾಡು ಮುಕ್ತಾಯವಾಗುತ್ತಿದ್ದಂತೆ ಕಲ್ಪನೆಯಲ್ಲಿ ಮುಳುಗಿದ್ದ ಇಂದಿರಾಳಿಗೆ ವ್ಯಾಸರಾಯನ ಧ್ವನಿಯಿಂದ ಎಚ್ಚರವಾಗುತ್ತದೆ.)

**[ಇಂದಿರಾ ಕನಸಿನ ಲೋಕದಿಂದ ವಾಸ್ತವಕ್ಕೆ ಮರಳುವುದನ್ನು ತೋರಿಸಲು ಆಕೆಯ ಮುಖದಿಂದ ಮಿಡ್ ಶಾಟ್‌ಗೆ ಝೂಮ್ ಬ್ಯಾಕ್ ಮಾಡಲಾಗಿದೆ. ಮತ್ತು ಇಷ್ಟೂ ಹೊತ್ತು ಮೂರ್ತಿ ಆಕೆಗೆ ಅಪರಿಚಿತನಾಗಿದ್ದರಿಂದ ಆಕೆ ಯಾವಾಗಲೂ ತನ್ನ ಸೆರಗಿಂದ ಮುಖ ಮುಚ್ಚಿಕೊಂಡಿರುತ್ತಿದ್ದು ಈಗ ಹಾಡಿನ ಮೂಲಕ ಹಾಗು ಆತನ ನಡವಳಿಕೆಯ ಮೂಲಕ ಸ್ವಲ್ಪ**

ಪರಿಚಿತನಾದನೆಂದು ಆಕೆ ದೃಷ್ಟಿಯಿಂದ ತೋರಿಸಲು ಆಕೆಯ ಮುಖದಿಂದ ಸೆರಗನ್ನು ಕೆಳಗಿಳಸಲಾಗಿದೆ]



ನಿರ್ದೇಶಕರ ಟಿಪ್ಪಣಿ:

ಈ ಹಾಡನ್ನು ಡಾ.ರಾಜ್‌ಕುಮಾರ್‌ರವರ ತಂದೆಯವರಾದ ಪುಟ್ಟಸ್ವಾಯ್ಯನವರು ನಾಟಕಗಳಲ್ಲಿ ಹಾಡುತ್ತಿದ್ದರಿಂದ ಅಣ್ಣಾವ್ರಿಗೆ ಈ ಹಾಡು ವಿಶೇಷವಾಗಿತ್ತು. ಹೀಗಾಗಿ ಅಣ್ಣಾವ್ರು ಈ ಹಾಡನ್ನು ಪದೇ ಪದೇ ಗುನುಗುತ್ತಿದ್ದರು. ಹಾಡನ್ನು ಈ ದೃಶ್ಯಕ್ಕೆ ಅಳವಡಿಸಿಕೊಂಡಿದ್ದರಿಂದ ದೃಶ್ಯಕ್ಕೂ, ಹಾಡಿಗೂ ವಿಶೇಷವಾದ ಐತಿಹಾಸಿಕ ಮತ್ತು ಭಾವನಾತ್ಮಕ ಸಂಬಂಧವಿದೆ.

## ದೃಶ್ಯ 4

*ಹಗಲು – ರೈಲುಬೋಗಿಯ ಒಳಗೆ (ಚಲಿಸುತ್ತಿರುವ ರೈಲು)*

*ವ್ಯಾಸರಾಯ : ವಾಹ್. ಬಹಳ ಚೆನ್ನಾಗ್ ಹಾಡಿದ್ರಿ, ಬಹಳ ಚೆನಾಗ್ ಹಾಡಿದ್ರಿ. ಗಂಧರ್ವ ಗಾಯನ, ಸೊಗಸಾಗ್ ಹಾಡಿದ್ರಿ.*

***ಹಸ್ತಪ್ರತಿಯಲ್ಲಿ:***

***ವ್ಯಾಸರಾಯ : ನಲ್ವತ್ತು ಕಿಲೋ ಮೀಟರ್‌ನ ನಾಲ್ಕ್ ನಿಮಿಷದಲ್ಲಿ ಬಂದ್ಹಂಗಾಯ್ತು ನೋಡಿ. ಸೊಗಸಾಗ್ ಹಾಡಿದ್ರಿ ಸ್ವಾಮಿ. ರಾಜರ ಕಾಲದಲ್ಲಿ ಆಗಿದ್ರೆ ಇಂಥಾ ಮಧುರ ಕಂಠಕ್ಕೆ ಕತ್ತಿನಲ್ಲಿರೋ ಮುತ್ತಿನ್ಹಾರ ಕೊಟ್ಟಿರೋರು. ಇದು ರಾಜರ ಕಾಲಾನು ಅಲ್ಲ ನಾನು ರಾಜಾನು ಅಲ್ಲ. ಹಾಡಿ ಹಾಡಿ "ಆಹಾ" ಅಂತಿರೋ ಗಂಟಲಿಗೆ ಒಂಚೂರು ಬೆಚ್ಚನೆ ಕಾಫಿ ಅಥವಾ ಟೀ.?***

ವ್ಯಾಸರಾಯ : ನಲ್ವತ್ತು ಕಿಲೋ ಮೀಟರ್ ದೂರಾನ ನಾಲ್ಕ್ ನಿಮಿಷದಲ್ ಬಂದ್ಹಾಗಾಯ್ತು. ಹಾಡಿ ಹಾಡಿ ಆಯಾಸ ಆಗಿರೋ ನಿಮ್ ಗಂಟ್ಲಿಗೆ ಸ್ವಲ್ಪ ಕಾಫಿ, ಟೀ?

ಮೂರ್ತಿ : ಬೇಡಿ..

ವ್ಯಾಸರಾಯ : ಹೋಗ್ಲಿ ಬಿಸಿ ಬಿಸಿ ಹಾಲು?

ಮೂರ್ತಿ : ಖಂಡಿತ ಬೇಡಿ, ಗೆಳೆಯನ ಮದುವೆ ಊಟ, ಒಂದ್ ಗ್ಲಾಸ್ ನೀರ್ ಕೂಡ ಒಳಗಡೆ ಹೋಗೋ ಹಾಗಿಲ್ಲ.

ವ್ಯಾಸರಾಯ : ಸರಿ ಇನ್ನ್ ನಾನ್ ನಿಮ್ಮನ್ನ ಬಲವಂತ ಮಾಡಲ್ಲ. (ಎಂದು ಏಳುತ್ತಾನೆ, ರೈಲು ನಿಧಾನವಾಗಿ ನಿಲ್ಲುತ್ತದೆ)

**[ರೈಲು ನಿಲ್ದಾಣದಲ್ಲಿ ಬಂದು ನಿಂತದ್ದನ್ನು ತೋರಿಸಲು ರೈಲಿನ ಚಕ್ರಗಳನ್ನು ಕ್ಲೋಸ್ ಶಾಟ್ ಮೂಲಕ ಚಿತ್ರಿಸಲಾಗಿದೆ]**

(ಬೋಗಿಯ ಒಳಗೆ ಮೂರ್ತಿ ಮತ್ತು ಇಂದಿರಾ ಕುಳಿತಿರುತ್ತಾರೆ ವ್ಯಾಸರಾಯ ಕಿಟಕಿಯ ಬಳಿ ಬಂದು)

ವ್ಯಾಸರಾಯ : ಇಂದಿರಾ ಏನಾದ್ರು ತಗೋತೀಯಾ ಮಾ? (ಇಂದಿರಾ ಬೇಡ ಎಂದು ಸೂಚಿಸುತ್ತಾಳೆ)



ಬೇಡ್ವ? ಹೋಗ್ಲಿ ಬಿಡು.
(ಮೂರ್ತಿಯನ್ನು ನೋಡಿ)
ಹಾಳಾದ್ ಚಟ ನೋಡಿ, ಒಂದ್ಸ್ವಲ್ಪ ಹಾಕೊಂಡ್ ಬರ್‍ತಿನಿ.

ಮೂರ್ತಿ : ಏನ್ ಹಾಕೊಂಡ್ ಬರ್‍ತೀರಿ? (ಆಶ್ಚರ್ಯದಿಂದ)

ವ್ಯಾಸರಾಯ : ಕಾಫಿ ಸ್ವಾಮಿ, ಕಾಫಿ.

ಮೂರ್ತಿ : ಓ ಅರ್ಥವಾಯ್ತು.

ವ್ಯಾಸರಾಯ : ಓಹ್ ಎಲ್ಲಿಗೋ ಹೋಗ್ಬಿಟ್ರಲ್ಲ ಹ್ಹ.. ಹ್ಹ..
(ಮೂರ್ತಿ ನಗುತ್ತಿರುತ್ತಾನೆ)

# ದೃಶ್ಯ 4ಅ

*ಹಗಲು – ರೈಲು ನಿಲ್ದಾಣ*

(ದಣಿವಾರಿಸಿಕೊಳ್ಳಲು ವ್ಯಾಸರಾಯ ರೈಲು ನಿಲ್ದಾಣದಲ್ಲಿರುವ ಟೀ ಅಂಗಡಿಗೆ ಬರುತ್ತಾನೆ)

ವ್ಯಾಸರಾಯ : ಎಲ್ಲಿ ಒಂದ್ ಕಾಫಿ ಕೊಡಪ್ಪ.



**[ರೈಲ್ವೆ ಸ್ಟೇಷನ್ನಿನ ವಾತಾವರಣ ಹಾಗು ಅಲ್ಲಿರುವ ಸಣ್ಣ ಟೀ ಅಂಗಡಿಯನ್ನು ತೋರಿಸುವ ಸಲುವಾಗಿ ವೈಡ್ ಶಾಟ್ ಮೂಲಕ ಚಿತ್ರಿಸಲಾಗಿದೆ]**

# ದೃಶ್ಯ 4ಆ

***ಹಗಲು– ರೈಲು ಬೋಗಿಯ ಒಳಗೆ***

| | | |
|---|---|---|
| ಇಂದಿರಾ | : | ಬಹಳ ಚೆನ್ನಾಗಿತ್ತು.<br>(ಮೂರ್ತಿ ತಿರುಗಿ ಏನು ಎಂದು ಕೇಳುತ್ತಾನೆ)<br>(ಸಂಕೋಚದಿಂದ) ಬಹಳ ಚೆನಾಗಿತ್ತು ಹಾಡು. |
| ಮೂರ್ತಿ | : | ನಿಮಗೆ ಹಿಡಿಸ್ತಾ? |
| ಇಂದಿರಾ | : | ಹ್ಞೂಂ.. |
| ಮೂರ್ತಿ | : | ಥ್ಯಾಂಕ್ಸ್..<br>(ಇಂದಿರಾ ನಗುತ್ತಾಳೆ) |

# ದೃಶ್ಯ 4ಇ

*ಹಗಲು – ರೈಲು ನಿಲ್ದಾಣ*

(ವ್ಯಾಸರಾಯ ಕಾಫಿ ಕುಡಿಯುತ್ತಿರುವ ಸಂಧರ್ಭದಲ್ಲಿ ಯಾರೋ ಒಬ್ಬನನ್ನು ನೋಡಿ ಭಯಭೀತನಾಗುತ್ತಾನೆ. ಸೂಟುಬೂಟುಧಾರಿಯಾಗಿ, ತಲೆಗೊಂದು ಟೋಪಿ ಧರಿಸಿ ದಪ್ಪನೆಯ ಮೀಸೆ ಬಿಟ್ಟು ರೈಲು ಬೋಗಿಗಳನ್ನೆಲ್ಲ ಪರಿಶೀಲಿಸುತ್ತ ಬರುತ್ತಿದ್ದ ಆತನನ್ನು ನೋಡಿ ವ್ಯಾಸರಾಯ ಹೆದರಿ ಗ್ಲಾಸನ್ನು ಅಲ್ಲೇ ಬಿಸಾಕಿ ಓಡಿಹೋಗುತ್ತಾನೆ)



**[ಪೋಲೀಸ್ ಅಧಿಕಾರಿ ರಾಜ್‌ಗೋಪಾಲನನ್ನು ಕಂಡು ನಡುಗುವ ವ್ಯಾಸರಾಯನ ಭಯವನ್ನು ಟೀ ಲೋಟ ಹಿಡಿದಿರುವ ಆತನ ನಡುಗುವ ಕೈ ಮೂಲಕ ತೋರಿಸುವ ಸಲುವಾಗಿ ಆತನ ಕೈ ಮತ್ತು ಲೋಟವನ್ನು ಕ್ಲೋಸ್ ಶಾಟ್ ಮೂಲಕ ಚಿತ್ರಿಸಲಾಗಿದೆ]**

(ಆ ವ್ಯಕ್ತಿ ಇಂದಿರಾ ಮತ್ತು ಮೂರ್ತಿ ಇರುವ ಬೋಗಿಯ ಬಳಿ ಬಂದು ಇಂದಿರಾಳನ್ನು ಸೂಕ್ಷ್ಮವಾಗಿ ಗಮನಿಸುತ್ತಾನೆ ಮತ್ತು ಮೂರ್ತಿಯನ್ನು ಅನುಮಾನಾಸ್ಪದವಾಗಿ ನೋಡುತ್ತಾನೆ. ಏನನ್ನೋ ಯೋಚಿಸುವಂತೆ ಮಾಡಿ ಮತ್ತೆ ಅವರಿಬ್ಬರನ್ನು

ಗಂಭೀರವಾಗಿ ಅನುಮಾನಿಸಿ ನೋಡಿ ಹೋಗುತ್ತಾನೆ. ಇಂದಿರಾ ಮತ್ತು ಮೂರ್ತಿ ಅವನ ಹೋಗುವಿಕೆಯನ್ನೇ ನೋಡುತ್ತಾರೆ. ಆ ವ್ಯಕ್ತಿ ಮತ್ತೊಂದು ಬೋಗಿಯ ಬಳಿಗೆ ಬಂದಾಗ ರೈಲು ಹೊರಡಲು ಪ್ರಾರಂಭಿಸುವುದನ್ನು ಗಮನಿಸಿ ಹತ್ತಿಕೊಳ್ಳುತ್ತಾನೆ)



**[ರಾಜ್‌ಗೋಪಾಲ್ ವ್ಯಾಸರಾಯನಿಗಾಗಿ ಹುಡುಕುತ್ತಿ–ರುವುದನ್ನು ಮತ್ತು ರೈಲ್ವೆ ಸಿಬ್ಬಂದಿ ಘಂಟೆ ಬಾರಿಸುವುದನ್ನು ಒಂದೇ ಶಾಟ್‌ನಲ್ಲಿ ತೋರಿಸಲು ಟ್ರಾಲಿ ಮತ್ತು ವೈಡ್ ಶಾಟ್ ಬಳಸಲಾಗಿದೆ]**

# ದೃಶ್ಯ 5

***ಹಗಲು – ರೈಲು ಬೋಗಿಯ ಒಳಗೆ (ಚಲಿಸುತ್ತಿರುವ ರೈಲು)***

| | | |
|---|---|---|
| | | (ರೈಲು ಬೋಗಿಯ ಒಳಗೆ ಇಂದಿರಾ ಮತ್ತು ಮೂರ್ತಿ, ವ್ಯಾಸರಾಯ ಬರದಿರುವುದಕ್ಕೆ ಕಳವಳಗೊಂಡು) |
| ಇಂದಿರಾ | : | ಅಯ್ಯಯ್ಯೋ ಟ್ರೈನ್ ಹೊರ್ಡ್ತಾ ಇದೆ ಅವ್ರಿನ್ನು ಬರ್ಲೇ ಇಲ್ಲ. (ಎಂದು ಆತಂಕ ವ್ಯಕ್ತಪಡಿಸುತ್ತಾಳೆ) |
| ಮೂರ್ತಿ | : | ಎಲ್ ಹೋಗ್ಬಿಟ್ರು ಆತ? (ಮೂರ್ತಿಯೂ ಆತಂಕಗೊಂಡು ಸುತ್ತಮುತ್ತ ನೋಡುತ್ತಾನೆ.) |
| ಮೂರ್ತಿ | : | ಏನಪ್ಪ ರೀ, ರೀ ಇವ್ರೆ. ಹೆಸ್ರು ಬೇರೆ ಮರ್ತ್ಬಿಟ್ನಲ್ಲಪ್ಪ ನಾನು. ಏನ್ರಿ, ರೀ.. (ವ್ಯಾಸರಾಯ ಹಳಿಯ ಆ ಕಡೆಯಿಂದ ರೈಲನ್ನು ಹತ್ತಲು ಓಡಿ ಬರುತ್ತಾನೆ. ಓಡಿ ಬರುತ್ತ ಮೂರ್ತಿಯನ್ನು ಕೂಗಿ ಕರೆಯುತ್ತಾನೆ) |



**[ರೈಲಿನ ಒಂದು ಬದಿಯಲ್ಲಿ ವ್ಯಾಸರಾಯನಿಗಾಗಿ ಹುಡುಕುತ್ತಿರುವ ಮೂರ್ತಿ ಮತ್ತು ರೈಲಿನ ಮತ್ತೊಂದು ಬದಿಯಲ್ಲಿ ರೈಲನ್ನು ಹತ್ತಲು ಯತ್ನಿಸುತ್ತಿರುವ ವ್ಯಾಸರಾಯ. ರೈಲಿನ ಎರಡೂ ಬದಿಯನ್ನು ಒಂದೇ ಶಾಟ್‌ನಲ್ಲಿ ತೋರಿಸಲು ಟಾಪ್ ಆ್ಯಂಗಲ್ ಬಳಸಿ ಚಿತ್ರಿಸಲಾಗಿದೆ.]**

ವ್ಯಾಸರಾಯ : ರಾಯರೇ, ರೀ ಸ್ವಾಮಿ ಹೇ ಬಾಗಿಲ್ ತೆಗಿರೀ, ಬಾಗಿಲ್ ತೆಗಿರೀ.



**[ಯಾವುದೇ ವಾಹನವನ್ನು ಹತ್ತುವ ಹಾಗು ಇಳಿಯುವ ಕ್ರಿಯೆಯು ಕ್ಲೋಸ್ ಹಾಗು ಮಿಡ್ ಶಾಟ್‌ಗಿಂತ ವೈಡ್ ಶಾಟ್‌ನಲ್ಲಿ ಹೆಚ್ಚು ಪರಿಣಾಮಕಾರಿಯಾಗಿರು ವುದರಿಂದ ವ್ಯಾಸರಾಯ ರೈಲನ್ನು ಹತ್ತುವುದನ್ನು ರೈಲಿನ ಹೊರಗಿಂದ ವೈಡ್ ಶಾಟ್ ಮೂಲಕ ಚಿತ್ರಿಸಲಾಗಿದೆ]**

(ಮೂರ್ತಿ ಧ್ವನಿ ಕೇಳಿ ಹಿಂದೆ ತಿರುಗಿ ಆಶ್ಚರ್ಯಗೊಂಡು)

ಮೂರ್ತಿ : ಇದೇನ್ರಿ ಇಲ್ಲಿ?!
(ಬಾಗಿಲನ್ನು ತೆರೆದು ರೈಲಿಗೆ ಹತ್ತಿಸಿಕೊಳ್ಳುತ್ತಾನೆ)

ಮೂರ್ತಿ : ಅಲ್ಲ ಫ್ಲಾಟ್‌ಪಾರ್ಮ್ ಇರೋದಲ್ಲಿ, ನೀವ್ ಬರ್ತಾ ಇರೋದ್ ಇಲ್ಲಿ. ಏನ್ ಸಮಾಚಾರ?
(ಓಡಿ ಸುಸ್ತಾಗಿದ್ದ ವ್ಯಾಸರಾಯ ಉತ್ತರ ಹೇಳಲಾಗದೆ ಸ್ವಲ್ಪ ತಡೆಯುವಂತೆ ಹೇಳಿ)

ವ್ಯಾಸರಾಯ : ಹೇಳ್ತನಿ ಹೇಳ್ತನಿ (ತಾವು ಕುಳಿತ ಜಾಗಕ್ಕೆ ಬರುತ್ತಾರೆ)

ಇಂದಿರಾ : (ಗಾಬರಿಯಿಂದ) ಏನಾಯ್ತು?

ವ್ಯಾಸರಾಯ : ಅಯ್ಯೋ ಸ್ವಲ್ಪ ತಾಳಮ್ಮ ತಾಳು, ಒಂದ್ ನಿಮ್ಷ ಉಸಿರಾಡೋಕ್ ಅವಕಾಶ ಕೊಡಮ್ಮ, ಅವಕಾಶ ಕೊಡು. (ಎಂದು ಹೇಳಿ ಏದುಸಿರು ಬಿಡುತ್ತಿರುತ್ತಾನೆ) ಇವತ್ತು ರಾಹು, ಬುಧ, ಶನಿ, ಕೇತು ಎಲ್ಲ ಒಂದೆ

| | | |
|---|---|---|
| | | ಮನೇಲಿ ಸೇರ್ಬಿಟ್ಟಿದ್ದಾ ಅನ್ಸುತ್ತೆ. |
| ಮೂರ್ತಿ | : | ಏನ್ ನಡಿತು ಅಂತ ಸ್ವಲ್ಪ ಬಿಡಿಸಿ ಹೇಳಿ. |
| ವ್ಯಾಸರಾಯ | : | ದುಷ್ಟ ದರ್ಶನವಾಯ್ತು ಸ್ವಾಮಿ, ದುಷ್ಟದರ್ಶನವಾಯ್ತು. ಈ ಜನ್ಮದಲ್ಲಿ ಯಾರನ್ನ ನೋಡ್ಬಾರ್ದು ಅಂತಿದ್ನೊ ಅವನ್ನ ನೋಡ್ಬಿಟ್ಟೆ ಸ್ವಾಮಿ. ನೋಡ್ಬಿಟ್ಟೆ. |
| ಮೂರ್ತಿ | : | ಅಲ್ಲಾ ನೀವ್ ಭಯ ಪಡೋಂತಹ ಭಯಂಕರವಾದ ಮನುಷ್ಯ ಅವ್ನ್ ಯಾರು ಅಂತ? |
| ವ್ಯಾಸರಾಯ | : | ಅವ್ನಾ. ಅವ್ನು ಮನುಷ್ಯನಾ? ಮನುಷ್ಯರ ರೂಪದಲ್ಲಿರೊ ರಾವಣ. ಈ ಜಿಲ್ಲೆಗೆ ದೊಡ್ಡ ರೌಡಿ ಸ್ವಾಮಿ. ಮದ್ವೆ ಆಗ್ದೆ ಇರೊ ಹೆಣ್ಣು ಮಕ್ಳು ಕಣ್ಣಿಗೆ ಕಂಡ್ರೆ ಸಾಕು ತಾನು ಅನುಭವಿಸಿ ಯಾರಿಗೂ ಕಾಣದೆ ಇರೋಹಾಗೆ ಎಲ್ಲಿಗಾದ್ರು ಪಾರ್ಸೆಲ್ ಮಾಡ್ಬಿಡ್ತಾನೆ. |
| ಮೂರ್ತಿ | : | ನಂಬೋಕೆ ಆಗ್ತಾ ಇಲ್ವಲ್ರೀ. ಅಲ್ಲಾ ಇಂಥಾ ಅಪಾಯ–<br>–ಕಾರಿಯಾದ ಮನುಷ್ಯನ್ನ ಹ್ಯಾಗ್ ಬಿಟ್ಕೊಂಡಿದಾರೆ ಜನ? |

***ಹಸ್ತಪ್ರತಿಯಲ್ಲಿ:***

| | | |
|---|---|---|
| *ವ್ಯಾಸರಾಯ* | *:* | ***ಪೋಲಿಸ್ನೋರೆ ಏನು ಮಾಡೋಕ್ಕೆ ಆಗಿಲ್ಲ ಅಂದ್ರೆ ಇನ್ನಾ ಜನ ಏನು ಮಾಡ್ತಾರೆ. ನನ್ನಂಥವರು ಏನು ಮಾಡೋಕ್ಕೆ ಆಗುತ್ತೇಳಿ. ಈ ಘಟಿಂಗನ ಕೈ ಪೋಲೀಸರಿಗಿಂತ ಉದ್ದವಾಗಿದೆ. ಹುಡುಗಿ ಅಂದ್ರೆ ಮೊಸರಿನ ಗಡಿಗೆ ಅಂದ್ಕೊಂಡಿದಾನೆ.*** |
| ***ಮೂರ್ತಿ*** | *:* | ***ಅಲ್ಲ ವ್ಯಾಸರಾಯರೇ..*** |
| ***ವ್ಯಾಸರಾಯ*** | *:* | ***ಈಗ ಹರಿಕಥೆ ಮಾಡ್ತಾ ಕೂರೋದಕ್ಕೆ ಸಮಯ ಇಲ್ಲ ಮೂರ್ತಿಯವ್ರೇ. ಅನಾಥ ಹೆಣ್ಣು ಮಕ್ಳು ಅಂದ್ರೆ ಬೇಲಿ ಇಲ್ದೇ ಇರೋ ಹೊಲ ಇದ್ದ್ಹಂಗೆ ಇಂಥಾ ಕೇಡಿಗಳಿಗೆ. ಈ ಹೆಣ್ಣ್ ಮಗೂನ ನಿಮ್ಮ ಕೈನಲ್ಲಿ ಇಟ್ಟು ಹೋಗ್ತಾ ಇದೀನಿ ಸ್ವಾಮಿ.*** |
| ವ್ಯಾಸರಾಯ | : | ಹೇ. ಪೋಲೀಸ್ನೋರೆ ಏನು ಮಾಡಕಾಗ್ಲಿಲ್ಲ ಅಂದ್ಮೇಲೆ, ಇನ್ನು ಜನ ಏನ್ ಮಾಡೋಕಾಗುತ್ತೆ. ಅದ್ರಲ್ಲೂ ನಮ್ಮಂಥ ಜನ ಏನ್ ಮಾಡೋಕಾಗುತ್ತೆ. |
| ವ್ಯಾಸರಾಯ | : | ಈ ಹೆಣ್ ಮಗೂನ ನಿಮ್ ಕೈಲಿ ಬಿಟ್ಹೋಗ್ತಾ ಇದಿನಿ. |
| ಮೂರ್ತಿ | : | (ಗಾಬರಿಯಿಂದ) ನನ್ ಕೈಯಲ್ಲಿ!? |

***ಹಸ್ತಪ್ರತಿಯಲ್ಲಿ:***

| | | |
|---|---|---|
| ***ವ್ಯಾಸರಾಯ*** | *:* | ***ಎ.. ಶಿವಮೊಗ್ಗದ ವರೆಗೂ ಅಷ್ಟೇ.. ಇವತ್ತೋ ನಾಳೆನೋ*** |

*ಗಾಳಿಗೆ ಬಿದ್ದ್ಹೋಗೋ ಮರ ನಾನು, ಆ ಬಿರುಗಾಳಿನಾ ಎದುರಿಸೋಕೆ ಆಗುತ್ತಾ. ನೀವು ಅಂದ್ರೆ ಹಿಮಾಲಯ ಪರ್ವತ ಇದ್ದ್ಹಂಗೆ. ಅದೂ ಅಲ್ದೆ ಈ ಹುಡ್ಗಿ ಜೊತೆ ನಾನಿರೋದು ಭಾರೀ ತೊಂದ್ರೆ ಆಗುತ್ತೆ.*

*ಮೂರ್ತಿ* : *ತೊಂದ್ರೆ.. ಯಾಕ್ ತೊಂದ್ರೆ?*

*ವ್ಯಾಸರಾಯ* : *ಅದೆಲ್ಲ ದೊಡ್ಡ ಕಥೆ, ಶಿವಮೊಗ್ಗದಲ್ ಹೇಳ್ತಿನಿ. ದಯವಿಟ್ಟು ಇದೊಂದ್ ಉಪ್ಕಾರ ಮಾಡಿ (ಕೈ ಹಿಡಿದು) ಇದು ನಿಮ್ ಕೈ ಅಲ್ಲ ಕಾಲು ಅಂತ್ಲೆ ಅಂದ್ಕೊಂಡಿದಿನಿ. ಒಂದು ಹುಡುಗಿ ಶೀಲ ಕಾಪಾಡಿದ ಪುಣ್ಯ ನಿಮಗೆ ಬರುತ್ತೆ. ಅವಳ ಭವಿಷ್ಯ ಈಗ ನಿಮ್ ಕೈಲಿದೆ. ಖಂಡಿತಾ ಆಗೋಲ್ಲ ಅನ್ಬೇಡಿ.*

ವ್ಯಾಸರಾಯ : ಅಯ್ಯೋ ಶಿವಮೊಗ್ಗದವರೆಗೆ ಅಷ್ಟೇ.
(ಮೂರ್ತಿ ಆಶ್ಚರ್ಯದಲ್ಲಿ ಕುಳಿತುಕೊಳ್ಳುತ್ತಾನೆ, ಇಂದಿರಾ ಮೂರ್ತಿ ಮತ್ತು ವ್ಯಾಸರಾಯನನ್ನೇ ನೋಡುತ್ತಿರುತ್ತಾಳೆ)
..ನೋಡಿ ರಾಯರೆ ಒಂದು ಸಣ್ಣ ಉಪಕಾರ ಮಾಡ್ಬೇಕು.
(ಮೂರ್ತಿಯ ಕೈ ಹಿಡಿದುಕೊಂಡು)
..ಇದು ನಿಮ್ ಕೈಯಲ್ಲ ನಿಮ್ಮ ಕಾಲು ಅಂತ ತಿಳ್ಕೊಳಿ. ಈ ಹೆಣ್ಣುಮಗು ಶೀಲ ಕಾಪಾಡಿದ ಪುಣ್ಯ ನಿಮಗೆ ಬರುತ್ತೆ. ಅವಳ ಭವಿಷ್ಯ ನಿಮ್ ಕೈಲಿದೆ. ಆಗಲ್ಲ ಅಂತ ಹೇಳ್ಬೇಡಿ ರಾಯರೆ ಹೇಳ್ಬೇಡಿ.

ಮೂರ್ತಿ : (ಮೂರ್ತಿ ಏನು ಹೇಳಬೇಕೆಂದು ತೋಚದೆ ಒದ್ದಾಡುತ್ತಿರುತ್ತಾನೆ)
ಏನ್ ನನಿಗ್ ಅರ್ಥ ಆಗ್ತಾಯಿಲ್ಲ.

ವ್ಯಾಸರಾಯ : ಇಂದಿರಾ, ದೇವ್ರು ಯಾವ್ ಯಾವ್ ರೂಪದಲ್ ಬರ್ತಾನೊ, ಹ್ಯಾಗ್ ಸಹಾಯ ಮಾಡ್ತಾನೊ ನಮಗ್ ಗೊತ್ತಿಲ್ಲ. ಆದ್ರೆ ನಿನ್ ಭಾಗಕ್ಕೀಗ ಇವರೇ ದೇವ್ರು. ಈ ದೇವ್ರು ನಿನ್ನ ರಕ್ಷಣೆ ಮಾಡೇ ಮಾಡ್ತಾರೆ.
(ಎಂದು ಹೇಳಿ ಸುತ್ತ ಮುತ್ತ ನೋಡುತ್ತಿರುತ್ತಾನೆ)

ಮೂರ್ತಿ : ಅಲ್ಲ ರೀ ರೀ.. ರೀ ರೀ ಇದೇನಿದು ನೀವ್ ಮಾಡ್ತಾ ಇರೋದು ಅಂತ.
(ವ್ಯಾಸರಾಯ ಹೊರಡಲನುವಾದಾಗ)
.. ರೀ ಇಲ್ಬನ್ರಿ ಇಲ್ಲಿ, ಸ್ವಲ್ಪ ನಿಂತ್ಕೊಳ್ರಿ ಇಲ್ಲಿ ರೀ, ಇಲ್ಬನ್ರಿ ಇಲ್ಲಿ, ರೀ.. ರೀ.. ಅವನ್ಯಾವನೋ ಬಂದ್ರೆ ನಾನೇನ್ರಿ ಹೇಳ್ಲಿ..?

(ಎಂದು ಕೂಗುತ್ತಿರುವಂತೆಯೇ ವ್ಯಾಸರಾಯ ರೈಲನ್ನು ಇಳಿದು ಕೈ ಮುಗಿದು ಓಡಿ ಹೋಗುತ್ತಾನೆ)

***ಹಸ್ತಪ್ರತಿಯಲ್ಲಿ:***

***ಮೂರ್ತಿ*** : ***ಇವರ ಮನೆ ಕಾಯೋಗ ಒಳ್ಳೆ ಪೀಕಲಾಟಕ್ಕೆ ಬಂತಲ್ಲ ಆ ರಾವಣ ಬಂದ್ರೆ ಏನಪ್ಪ ಮಾಡೋದು. ಇವಳು ಯಾರು ಅಂದ್ರೆ ಏನು ಹೇಳೋದು.***
***(ಇಂದಿರಾಗೆ) ನೀವೇನ್ ಹೇಳ್ತೀರಿ ಇವ್ರೇ.?***
***(ಇಂದಿರಾ ಮೂರ್ತಿ ಕಡೆಗೆ ಶೂನ್ಯವಾಗಿ ನೋಡುತ್ತಾಳೆ.)***
***..ಅಲ್ಲ ನಾನೊಂದು ಹೇಳೋದು, ನೀವೊಂದು ಹೇಳೋದು, ಗೊಂದಲ ಬೇಡಾಂತ.***

ಮೂರ್ತಿ : ಒಳ್ಳೆ ಪೀಕಲಾಟಕ್ ಬಂತಲ್ಲಪ್ಪ ನನಗೇ.
..ಏನ್ಮಾಡೋದು ಇವಾಗ?

# ದೃಶ್ಯ 6

***ಹಗಲು – ರೈಲು ಬೋಗಿಯ ಒಳಗೆ (ನಿಂತಿರುವ ರೈಲು)***

(ತತ್‌ಕ್ಷಣದಲ್ಲಿ ನಡೆದ ಈ ಬೆಳವಣಿಗೆಯಿಂದಾಗಿ ಇಂದಿರಾ ದುಃಖಿಸುತ್ತಿರುತ್ತಾಳೆ. ಏನು ಮಾಡುವುದೆಂದು ತೋಚದೇ ಮೂರ್ತಿ ಯೋಚಿಸುತ್ತ ಕುಳಿತಿರುವ ಸಂದರ್ಭದಲ್ಲಿ ರಾಜ್‌ಗೋಪಾಲ್ ಮತ್ತೆ ಬಂದು ಮೂರ್ತಿ ಮತ್ತು ಇಂದಿರಾಳನ್ನು ಅನುಮಾನಿಸಿ ನೋಡಿ ಇಂದಿರಾಳನ್ನು ವಿಚಾರಣೆ ಮಾಡುತ್ತಾನೆ)

ರಾಜ್‌ಗೋಪಾಲ್ : ನೀನ್ ಯಾರು?
(ಮೂರ್ತಿ ಮತ್ತು ಇಂದಿರಾ ಇಬ್ಬರೂ ಗಾಬರಿಗೊಳ್ಳುತ್ತಾರೆ)
..ಏ ಹುಡುಗಿ ಮಾತಾಡೋಕ್ ಬರೋದಿಲ್ಲ ನಿನಗೆ? ನೀನ್ ಯಾರು ಅಂದೆ.
(ಇಂದಿರಾ ಮೂರ್ತಿ ಪಕ್ಕಕ್ಕೆ ಬಂದು ಕುಳಿತುಕೊಳ್ಳುತ್ತಾಳೆ)

ಮೂರ್ತಿ : ಏನ್ರಿ? ನಿಮ್ ಕಣ್ಣಿಗೇನ್ ಬರೀ ಹೆಣ್ಣು ಮಕ್ಳೇನಾ ಕಾಣ್ಸೋದು? ನಾನೊಬ್ಬ ಗಂಡ್ಸು ಇಲ್ಲಿ ಕೂತ್ಕೊಂಡಿದಿನಿ, ನೀನ್ ಯಾರು ಅಂತ ಒಂದ್ ಹೆಣ್ಣನ್ನ ಕೇಳ್ತಾ ಇದೀರಲ್ಲ ನೀವ್ ಯಾರು ಅಂತ ನಾನ್ ಕೇಳ್ತಾ ಇದಿನಿ ನಿಮ್ಮನ್ನ.

ರಾಜ್‌ಗೋಪಾಲ್ : ಓಹ್‌ಹ್‌ಹ್.. ನೀವ್ಯಾರ್ರೀ?

ಮೂರ್ತಿ : ನೀವ್ಯಾರ್ರೀ? ನೀವ್ಯಾರೂಂತ?
(ಇಂದಿರ್ರಾಳಿಗೆ) ಕೂತ್ಕೊ.
.. ಮರ್ಯಾದೆ ಇದಿಯೇನ್ರಿ ನಿಮ್ಗೆ. ಒಬ್ಬ ಹೆಣ್ಣು ಮಗಳನ್ನ ಹಾಗಾ ಮಾತಾಡ್ಸೋದು?

ರಾಜ್‌ಗೋಪಾಲ್ : ಸಾರಿ, ಸರ್ಕಾರಿ ಸೇವೆ ಮಾಡ್ವಾಗೊಂದೊಂದ್ಸಲ ಹಿಂಗ್ ಎಡ್ವಟ್ಟಾಗ್ಬಿಡುತ್ತೆ. ಏನು ಅನ್ಕೋಬೇಡಿ ತಾಯಿ. ನಿಮ್ ಯಜಮಾನ್ರಿಗೆ ಭಾರೀ ಕೋಪ.
(ಮೂರ್ತಿ ಮತ್ತು ಇಂದಿರಾ ಸಂಕೋಚಗೊಳ್ಳುತ್ತಾರೆ)
.. ಒಂದ್ ಹಳೇ ಕೇಸ್ ಕಣ್ ತಪ್ಪಿಸಿ ಓಡಾಡ್ತಾ ಇದೆ. ಆ ಕೊರ್ಮನ್ನ ಇಲ್ಲೆ ಎಲ್ಲೋ ನೋಡ್ದ್ವಾಗ್ ಆಯ್ತು. ಕಣ್ಣು ಮಿಟುಕ್ಸೊ ಅಷ್ಟರಲ್ಲಿ ಮಿಂಚಿನ್ ಥರ ಮಾಯ ಆಗ್ಬಿಟ್ಟ. ತೊಂದ್ರೆ ಕೊಟ್ಟೆ, ಕ್ಷಮ್ಸಿ ಮಿಸ್ಟರ್....?

ಮೂರ್ತಿ : ಮೂರ್ತಿ ಅಂತ ನನ್ ಹೆಸರು.

*ಹಸ್ತಪ್ರತಿಯಲ್ಲಿ:*

*ರಾಜ್‌ಗೋಪಾಲ್ : ಹಾ ಮೂರ್ತಿ ನನ್ಹೆಸ್ರು ರಾಜ್ ಗೋಪಾಲ್ ಅಂತ. ಒಂದೊಂದ್ಸಲ ನಮ್ಮ ಕಣ್ಣೇ ನಮ್ಗೆ ಮೋಸ ಮಾಡ್ಬಿಡುತ್ತೆ. ಒಳ್ಳೇವ್ರ್ಯಾರು? ಕೆಟ್ಟೋರ್ಯಾರು? ಅಂತಾನೆ ಗೊತಾಗಲ್ಲ. ನೋಡಿ ಈ ವ್ಯಕ್ತಿನೆ ನಾನ್ ಹುಡುಕ್ತಾ ಇರೋದು. ಪ್ರಾಣೇಶ, ತಿಪ್ಪೇಶ, ತಿಮ್ಮೇಶ, ವ್ಯಾಸರಾಯ ಅಂತ ಹತ್ತಾರು ಹೆಸ್ರುಗಳವೆ. ನಾಟಕದ ಕಂಪೆನೀಲಿ ಕೆಲ್ಸ ಮಾಡ್ತೀನಿ ಅಂತಾನೆ ಅದೇ ವೇಷಕ್ ತಕ್ಕ ಭಾಷೆ, ಭಾಷೆಗ್ ತಕ್ಕ ವೇಷ ಹಾಕೋದ್ರಲ್ಲಿ ನಿಸ್ಸೀಮ. ಇವನು ಏನೂ ತಿಳಿದಿರೋ ಹೆಣ್ಣುಮಕ್ಕಳಿಗೆ ಅದೂ ಇದೂ ಹೇಳಿ ನಾಟಕಕ್ಕೆ ಸೇರಿಸ್ತಿನಿ, ಕೆಲ್ಸಕ್ ಸೇರಿಸ್ತಿನಿ ಅಂತ್ಹೇಳಿ ಕರ್ಕೊಂಡ್ಬಂದು ಸೂಳೆಗಿರೀಗ್ ಮಾರ್‍ತಾನೆ. ಅವ್ನೇನಾದ್ರು ನನ್ಕೈಗೆ ಸಿಕ್ರೆ ಮೂಳೆ ಪುಡಿ ಪುಡಿ ಮಾಡ್ತೀನಿ. ಕಣ್ಣಿಗೆ ಬಿದ್ರೆ ತಿಳಸೋದು ಮರೀಬೇಡಿ.*

ರಾಜ್‌ಗೋಪಾಲ್ : ನನ್ ಹೆಸರು ರಾಜ್‌ಗೋಪಾಲ್. ನಾನೊಬ್ಬ ತಲೆ ಹಿಡ್ಕ ಬಡ್ಡಿಮಗನ್ನ ಹುಡುಕ್ತಾ ಇದಿನಿ. ವೇಷಕ್ ತಕ್ಕ ಭಾಷೆ, ಭಾಷೆಗ್ ತಕ್ಕ ವೇಷ ಹಾಕೊಳೋ ನಿಸ್ಸೀಮ ಇವ್ನು. ಏನೂ ತಿಳಿದ ಹೆಣ್ಣುಮಕ್ಳಿಗೆ ಅದೂ ಇದೂ ಹೇಳಿ ಕೆಲ್ಸಕ್ಕ್ ಸೇರ್‍ಸ್ತಿನಿ, ನಾಟಕಕ್ ಸೇರ್‍ಸ್ತಿನಿ ಅಂತ ಹೇಳೋದು ಕರ್ಕೊಂಡ್ ಬಂದು ಸೂಳೆಗಿರಿಗೆ ಮಾರೋದು. ಒಂದಾ ಎರೆಡಾ ಹೆಸರು ಇವನಿಗೆ. ಪ್ರಾಣೇಶ, ತಿಪ್ಪೇಶ, ತಿಮ್ಮೇಶ, ವ್ಯಾಸರಾಯ ಅಂತ ನೂರಾರು ಹೆಸರು ಅವನಿಗೆ. ಮೋಸಗಾರ.

(ಮೂರ್ತಿ ಮತ್ತು ಇಂದಿರಾ ಗಾಬರಿಗೊಳ್ಳುತ್ತಾರೆ)

**[ರಾಜ್‌ಗೋಪಾಲ್‌ನಿಂದ ವ್ಯಾಸರಾಯನ ಅಸಲೀ ಬಣ್ಣ ತಿಳಿದು ಗಾಬರಿ ಮತ್ತು ಭಯಗೊಂಡಿರುವ ಇಂದಿರಾಳ ಮುಖವನ್ನು ಸಿನಿಮ್ಯಾಟಿಕ್ ಆಗಿ ತೋರಿಸಲು ಮಿಡ್ ಶಾಟ್‌ನಿಂದ ಆಕೆಯ ಮುಖಕ್ಕೆ ಝೂಮ್ ಬಳಸಲಾಗಿದೆ]**

.. ನೋಡಿ ಈ ವ್ಯಕ್ತಿನೆ ನಾನ್ ಹುಡುಕ್ತಾ ಇರೋದು. (ಎಂದು ವ್ಯಾಸರಾಯನ ಫೋಟೋ ತೋರಿಸುತ್ತಾನೆ,



ಫೋಟೋ ನೋಡಿದ ಮೂರ್ತಿ ಮತ್ತು ಇಂದಿರಾ ಬೆಚ್ಚಿಬಿದ್ದು ಗಾಬರಿಗೊಳ್ಳುತ್ತಾರೆ, ರಾಜ್‌ಗೋಪಾಲ್ ಕಡೆಯವರಿಂದ ಶಿಳ್ಳೆಯ ಮೂಲಕ ಕರೆ ಬರುತ್ತದೆ, ರಾಜ್‌ಗೋಪಾಲ್ ಹೊರಡಲನುವಾಗುತ್ತಾನೆ.)

.. ನಿಮ್ಗೇನಾದ್ರು ಸಿಕ್ಕಿದ್ರೆ ದಯವಿಟ್ಟು ತಿಳಿಸಿ, ನಾನಿನ್ ಬರ್ತಿನಿ. (ಎಂದು ಹೇಳಿ ರೈಲಿನಿಂದ ಇಳಿಯುತ್ತಾನೆ)

ಮೂರ್ತಿ : (ರಾಜ್‌ಗೋಪಾಲ್‌ನನ್ನು ಹಿಂಬಾಲಿಸಿ ಬಂದು)
ಸಾರ್ ಸಾರ್ ಇಲ್ನೋಡಿ ಇಲ್ಲಿ ಸಾರ್ ಸಾರ್..
(ಎಂದು ಕೂಗಿ ಕರೆಯುತ್ತಲೇ ಇರುತ್ತಾನೆ)

ರಾಜ್‌ಗೋಪಾಲ್ : ಈ ವಿಸಿಟಿಂಗ್ ಕಾರ್ಡ್ ಇಟ್ಕೊಳಿ ಬೇಕಾಗ್ಬಹುದು.

ಮೂರ್ತಿ : ನೋಡಿ ವ್ಯಾಸರಾಯ, ಈ ಹುಡ್ಗೀನ ಅವ್ನೇ ಕರ್ಕೊಂಡ್ ಬಂದಿರೋದು.
(ಸರಿಯಾಗಿ ಕೇಳಿಸದ ರಾಜ್‌ಗೋಪಾಲ್ ತಪ್ಪಾಗಿ ಅರ್ಥೈಸಿಕೊಂಡು)

ರಾಜ್‌ಗೋಪಾಲ್ : ಓಕೆ, ಬಾಯ್..
(ಎಂದು ಹೇಳಿ ಮುಂದೆ ನಡೆದು ಹೋಗುತ್ತಾನೆ.)

ಮೂರ್ತಿ : ಸರ್ ರಾಜ್‌ಗೋಪಾಲ್ ನೋಡಿ ಇಲ್ಲಿ..
(ಎಂದು ಮೂರ್ತಿ ಕೂಗುತ್ತಲೇ ಇರುತ್ತಾನೆ)
.. ವ್ಯಾಸರಾಯ ಇಲ್ಲೇಲ್ಲೋ ಇದಾನೆ. ರಾಜ್‌ಗೋಪಾಲ್ ಇಲ್ನೋಡಿ ಇಲ್ಲಿ.
(ಎಂದು ಬಾಗಿಲ ಬಳಿಯಲ್ಲಿ ಕೂಗುತ್ತ ಕೆಳಗೆ ಇಳಿಯಲು ಪ್ರಯತ್ನಿಸುತ್ತಾನೆ)

ಇಂದಿರಾ : ಅಯ್ಯೋ..!!
(ಎಂದು ಸಣ್ಣಗೆ ಕಿರುಚಿ ಬೇಡವೆಂದು ಅವನ ಕೈ ಹಿಡಿದುಕೊಳ್ಳುತ್ತಾಳೆ)
ಬನ್ನಿ ಒಳಗಡೆ.. ಬಾಗಿಲ್ಹಾಕಿ, ಬಾಗಿಲ್ಹಾಕಿ ನಿಮ್ ದಮ್ಮಯ್ಯ ಅಂತಿನಿ.

ಮೂರ್ತಿ : ಎಂಥ ಕೆಲ್ಸ ಆಗ್ಹೋಯ್ತು..
ಹಾಳಾದೋನು ತಪ್ಸ್ಕೊಂಡ್ಬಿಟ್ನೆ.

**ನಿರ್ದೇಶಕರ ಟಿಪ್ಪಣಿ:**

**ಮೂರ್ತಿ ಮತ್ತು ರಾಜಗೋಪಾಲ್‌ರ ಸಂಭಾಷಣೆಯಲ್ಲಿ ಮೊದಲಿದ್ದ ಸಂಭಾಷಣೆಯನ್ನು ಆಡುಭಾಷೆಯ ಬಳಕೆಯಲ್ಲಿ ಬಳಸುವಾಗ ಪೂರ್ತಿಯಾಗಿ ಹೊಸ ಸಂಭಾಷಣೆಯೇ ಆಗಿದೆ.**

# ದೃಶ್ಯ 7

*ಹಗಲು – ರೈಲು ಬೋಗಿಯ ಒಳಗೆ (ಚಲಿಸುತ್ತಿರುವ ರೈಲು)*

(ಮೂರ್ತಿ ಮುಂದೇನು ಮಾಡುವುದೆಂದು ಯೋಚಿಸಿದಾಗ ರೈಲು ನಿಲುಗಡೆ ಸರಪಳಿಯನ್ನು ಎಳೆದು ರಾಜ್‌ಗೋಪಾಲನಿಗೆ ವಿಷಯ ತಿಳಿಸಬೇಕೆಂಬ ಉದ್ದೇಶದಿಂದ ಅತ್ತ ಧಾವಿಸಿದಾಗ ವ್ಯಾಸರಾಯ ಅಲ್ಲಿಗೆ ಬಂದು ಮೂರ್ತಿಯ ಕೈಯನ್ನು ಹಿಡಿದೆಳೆದು ತಡೆಯುತ್ತಾನೆ. ಮೂರ್ತಿ ವ್ಯಾಸರಾಯನಿಗೆ ಹೊಡೆದು ಮತ್ತೆ ಹೊಡೆಯಲು ಮುಂದಾಗಬೇಕೆನ್ನುವಷ್ಟರಲ್ಲಿ ವ್ಯಾಸರಾಯ ಇಂದಿರಾಳಿಗೆ ಚಾಕುವನ್ನು ಹಿಡಿದು ಮೂರ್ತಿಯ ಚಟುವಟಿಕೆಗಳಿಗೆ ತಡೆಹಾಕುತ್ತಾನೆ)

*ಹಸ್ತಪ್ರತಿಯಲ್ಲಿ:*

*ವ್ಯಾಸರಾಯ : ಏನ್ ಪೋಲಿಸ್ನೋನಿಗೆ ಕಥೆ ಒದರೋಕ್ ಹೋಗ್ತಿದಿಯಾ? ಬಾಯ್ ಮುಚ್ಕೊಂಡ್ ಬಿದ್ದಿದ್ರೆ ನಂಗೂ ಒಳ್ಳೇದು ನಿಂಗೂ ಒಳ್ಳೇದು.*

*.. ಒಂದೆಜ್ಜೆ ಮುಂದೆ ಬಂದ್ರೆ ಇವ್ಳು ಸತ್ತ್ಹೋಗ್ತಾಳೆ. ನಂಗೊತ್ತು ಮರೀ ಆ ರಾಜ್‌ಗೋಪಾಲ ಒಳಗ್ ಬಂದಾಗ್ಲೇ ಹರಿಕಥೆ ಮಾಡಿರ್‍ತಾನೆ ಅಂತ. ನಾನೇ ಹಲಾಲ್ ಟೋಪಿ, ನನಿಗೇ ಟೋಪಿ ಹಾಕೋಕ್ ನೋಡ್ತಿಯಾ?*

*(ಇಂದಿರಾಳಿಗೆ) ಮುಚ್ಚುಬಾಯ್ ಉಸ್ರು ಬಿಟ್ರೆ ಕುತ್ತಿಗೆಗೆ ಚುಚ್ಚುಬಿಡ್ತಿನಿ.*

ವ್ಯಾಸರಾಯ : ಏಯ್, ಒಂದ್ ಹೆಜ್ಜೆ ಮುಂದೆ ಇಟ್ರೆ ಇವ್ಳ್ನ ಸಾಯಿಸ್ಬಿಡ್ತಿನಿ.

(ಮೂರ್ತಿ ಏನೂ ಮಾಡದಂತೆ ಸ್ತಬ್ದನಾಗುತ್ತಾನೆ)

.. ನನಿಗ್ ಗೊತ್ತು ಮರಿ, ಆ ನನ್ ಮಗ ರಾಜ್ ಗೋಪಾಲ ಒಳಗ್ ಬಂದ್ ಕೂಡ್ಲೆ ಹರಿಕಥೆ ಶುರುಮಾಡಿರ್‍ತಾನೆ ಅಂತ. ಅಲ್ಲಾ, ನಾನೇ ಹಲಾಲ್ ಟೋಪಿ, ನನಿಗೇ ಟೋಪಿ ಹಾಕೋಕ್ ನೋಡ್ತಿಯಾ?

(ಇಂದಿರಾ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾಳೆ ಆದರೆ ವ್ಯಾಸರಾಯ ಅವಳನ್ನು ಬಿಗಿಯಾಗಿ ಹಿಡಿದು..)

.. ಕೂಗ್ಕೋ ಬೇಡ. ಕೂಗುದ್ರೆ ಕುತ್ತಿಗೆ ತೆಗದ್ಬಿಡ್ತೀನಿ. ಬಾಯ್ ಮುಚ್ಕೊಂಡಿರು.
(ಮೂರ್ತಿ ಕೋಪದಿಂದ ವ್ಯಾಸರಾಯನನ್ನೇ ನೋಡುತ್ತಿರುತ್ತಾನೆ)
.. ಕೂತ್ಕೋ ಮರಿ. ಕೂತ್ಕೋ..
(ಮೂರ್ತಿ ನಿಧಾನವಾಗಿ ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತಾನೆ)
.. ಹಾ ಹಾಗೇ.
(ನಂತರ ವ್ಯಾಸರಾಯ ಇಂದಿರಾಳನ್ನು ತಳ್ಳಿ ಕುರ್ಚಿಯ ಮೇಲೆ ಕೂರಿಸಿ ತಾನು ಆಕೆಯ ಪಕ್ಕದಲ್ಲಿ ಕೂರುತ್ತಾನೆ. ನಂತರ ಯಾವುದೋ ಹಾಡನ್ನು ಹಾಡುತ್ತಾನೆ)

***ಹಸ್ತಪ್ರತಿಯಲ್ಲಿ:***

***ವ್ಯಾಸರಾಯ : ಏನೂ ಬಹಳ ಯೋಚ್ನೆ ಮಾಡ್ತಿದೀಯ? ಹಾಂ ಹ್ಯಾಗ್ ಇವನ್ನ ಸಿಕ್ ಹಾಕಿಸ್ಬೇಕು, ಹ್ಯಾಗ್ ಒದೀಬೇಕು ಅಂತ ಯೋಚ್ನೆ ಮಾಡ್ತಿದೀಯಾ?***

ವ್ಯಾಸರಾಯ : ಮಲ್ಲೆ, ಮಲ್ಲಿಗೆ, ಜಾಜಿ..
(ಅಷ್ಟರಲ್ಲಿ ಮೂರ್ತಿ ಎದ್ದುನಿಂತುಕೊಳ್ಳುತ್ತಾನೆ.. ಆಗ ವ್ಯಾಸರಾಯ..)
.. ಏನ್ ಸಮಾಚಾರ?
(ಎಂದು ಅನುಮಾನಾಸ್ಪದವಾಗಿ ನೋಡುತ್ತಾನೆ)

ಮೂರ್ತಿ : ಒಳ್ಳೆ ಪಂಚಾಯಿತಿ ಆಯ್ತಲ್ಲ ನಿಂದು, ಏನ್ ಬಾತ್‌ರೂಮ್ ಗೀತ್‌ರೂಮ್ಗೇನು ಹೋಗ್ಬಾರ್ದಾ ನಾವು?

ವ್ಯಾಸರಾಯ : (ನಗುತ್ತ) ನಂಗೊತ್ತು ಕಣಮ್ಮ ನಿನ್ ಬಾತ್‌ರೂಮು ನಿನ್ ಪ್ಲಾನು ಎಲ್ಲ. ನಿನ್ನಂಥವ್ರ್ನ ಎಷ್ಟು ಜನನ್ನ ನೋಡಿಲ್ಲ ನನ್ ಸರ್ವೀಸ್‌ನಲ್ಲಿ. ಹೇಯ್ ಸುಮ್ನೆ ಕೂತ್ಕೋ.
(ಮೂರ್ತಿ ಅಸಹಾಯಕನಾಗಿ ಕುಳಿತುಕೊಳ್ಳುತ್ತಾನೆ.
(ವ್ಯಾಸರಾಯ ಚಾಕುವಿನಿಂದ ತನ್ನ ಹಲ್ಲಿನಲ್ಲಿ ಸಿಕ್ಕಿಕೊಂಡಿದ್ದನ್ನು ತೆಗೆಯುತ್ತಿದ್ದಾನೆ, ಇಂದಿರಾ ದುಃಖಿಸುತ್ತ ತನ್ನನ್ನು ಕಾಪಾಡುವಂತೆ ಮೂರ್ತಿಗೆ ಅಳುತ್ತ ಕೈ ಮುಗಿಯುತ್ತಾಳೆ)



**[ವ್ಯಾಸರಾಯನಿಗೆ ಹೆದರಿಕೊಂಡು ತನ್ನನ್ನು ಈತನಿಂದ ಪಾರು ಮಾಡಿ ಎಂದು ಅಳುತ್ತಾ ಕೈಮುಗಿದು ಮೂಕಳಾಗಿ ದೈನ್ಯತಾ ಭಾವದಿಂದ ಮೂರ್ತಿಯೆಡೆಗೆ ನೋಡುವ ಇಂದಿರಾಳ ಮುಖದ ರಿಯಾಕ್ಷನ್ ಅನ್ನು ಕ್ಲೋಸ್ ಶಾಟ್ ಮೂಲಕ ಚಿತ್ರಿಸಲಾಗಿದೆ]**

(ನಂತರ ಸ್ವಲ್ಪ ಸಮಯದ ತನಕ ಮೂರ್ತಿ ಯೋಚಿಸಿ ಕೊನೆಗೆ ಒಂದು ಉಪಾಯ ಹೊಳೆದು)

ಮೂರ್ತಿ : ಸಾರ್ ರಾಜ್‌ಗೋಪಾಲ್..!!
(ಎಂದು ಕೂಗಿದ ತಕ್ಷಣ ವ್ಯಾಸರಾಯ ಗಾಬರಿಗೊಂಡು ಕಿಟಕಿಯ ಕಡೆಗೆ ನೋಡುತ್ತಾನೆ. ಮೂರ್ತಿ, ವ್ಯಾಸರಾಯನಿಗೆ ಜಾಡಿಸಿ ಒದೆಯುತ್ತಾನೆ. ಮೂರ್ತಿ ವ್ಯಾಸರಾಯನ ಎರೆಡೂ ಕೈಗಳನ್ನು ಕಟ್ಟಿಹಾಕುತ್ತಾನೆ. ವ್ಯಾಸರಾಯ ಬಿಡಿಸಿಕೊಳ್ಳಲು ಪ್ರಯತ್ನಪಡುತ್ತಿರುತ್ತಾನೆ)

***ಹಸ್ತಪ್ರತಿಯಲ್ಲಿ:***

***ಮೂರ್ತಿ : ನನ್ನಂಥವ್ರನ್ನ ಎಷ್ಟೋ ಜನನ್ನ ನೋಡಿದಿಯಲ್ಲ ನೀನು, ಆದ್ರೆ ನನ್ ನೋಡಿಲ್ಲಿಲ್ಲ. ತಲೆಹಿಡುಕ ನನ್ಮಗನೆ. ನೀನು ಚಾಪೆ ಕೆಳಗೆ ನುಸುಳಿದ್ರೆ ನಾನು ರಂಗೋಲಿ ಕೆಳಗೆ***

*ನುಸಿಯೋನು ಕಣೋ. ಇರು, ನಿಂಗೊಂದ್ ಗತಿ ಕಾಣಿಸ್ತೀನಿ.*

ಮೂರ್ತಿ : ನನ್ನಂಥವ್ರನ್ನ ಎಷ್ಟೋ ಜನನ್ನ ನೋಡಿದಿಯಲ್ಲ ನೀನು, ಆದ್ರೆ ನನ್ ನೋಡ್ರಿಲ್ಲಿಲ್ಲ. ತಲೆಹಿಡುಕ ವ್ಯಾಸರಾಯ ಸ್ವಲ್ಪ ನಿಧಾನ್ಸು. ನಿನ್ಗೆ ಸರ್ಯಾದ್ ಕೆಲ್ಸ ಮಾಡ್ತಿನಿ.
(ಎಂದು ಹತ್ತಿರದಲ್ಲೇ ಇದ್ದ ಟವಲನ್ನು ಕಾಲಿನಲ್ಲಿ ತೆಗೆದುಕೊಂಡು ವ್ಯಾಸರಾಯನ ಎರೆಡೂ ಕೈಗಳನ್ನು ಕಟ್ಟುತ್ತಾನೆ. ಇಂದಿರಾ ಭಯಭೀತಳಾಗಿ ಕೂತಿರುತ್ತಾಳೆ. ನಂತರ ಮೂರ್ತಿ ವ್ಯಾಸರಾಯನನ್ನು ಎಳೆದು ಕೂರಿಸಿ)

**(ಚಲನಚಿತ್ರದಲ್ಲಿ ಸೇರಿಸಲಾಗಿದೆ)**

ಮೂರ್ತಿ : ಕುಕ್ಕ್ರ ಬಡಿಯೋ ಅಲ್ಲಿ, ಜಾಡ್ಸಿ ಒದಿಲಾ ಇವಾಗ?
(ರೈಲು ನಿಲ್ಲುತ್ತದೆ ಮೂರ್ತಿ ರೈಲಿನಿಂದ ಕೆಳಗಿಳಿದು ರಾಜ್ ಗೋಪಾಲನನ್ನು ಹುಡುಕಲು ಪ್ರಾರಂಭಿಸುತ್ತಾನೆ)

**ನಿರ್ದೇಶಕರ ಟಿಪ್ಪಣಿ:**

**ವ್ಯಾಸರಾಯನ ಉದ್ಧಟತನವನ್ನು ಮತ್ತು ಮೂರ್ತಿಯ ಅಸಹಾಯಕತೆಯನ್ನು ಪೂರ್ತಿಯಾಗಿ ಕಾಣಿಸಬೇಕು. ನಂತರ ಮೂರ್ತಿ ಪರಿಸ್ಥಿಯನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಬೇಕು ಈ ರೀತಿಯಾಗಿ ಸಂಭಾಷಣೆಯನ್ನು ಚಿತ್ರೀಕರಣ ಸಮಯದಲ್ಲಿ ಬದಲಾಯಿಸಿ ಮತ್ತು ಅಭಿವೃದ್ಧಿಮಾಡಲಾಗಿದೆ.**

# ದೃಶ್ಯ 8

*ಹಗಲು – ರೈಲು ನಿಲ್ದಾಣ.*

ಮೂರ್ತಿ : ರಾಜ್‌ಗೋಪಾಲ್.. ರಾಜ್‌ಗೋಪಾಲ್..
(ಎಂದು ಹಲವಾರು ಬೋಗಿಯಲ್ಲಿ ಇಣುಕಿ ನೋಡಿ ಹುಡುಕುತ್ತಾನೆ)



**[ಮೂರ್ತಿ ರಾಜ್‌ಗೋಪಾಲನಿಗಾಗಿ ರೈಲಿನ ಬೋಗಿಗಳಲ್ಲಿ ಹುಡುಕುವ ದೃಶ್ಯವಾದ್ದರಿಂದ ಹುಡುಕಾಟವನ್ನು ಚಿತ್ರಿಸಲು ಟ್ರಾಲಿ ಮತ್ತು ವೈಡ್ ಶಾಟ್ ಬಳಸಲಾಗಿದೆ]**

(ರೈಲು ಹೊರಡುವುದನ್ನು ಗಮನಿಸಿ ಕೊನೆಯ ಬೋಗಿಯಲ್ಲಿ ಓಡಿಹೋಗಿ ಹತ್ತಿಕೊಳ್ಳುತ್ತಾನೆ. ಹೊರಗೆ ನೋಡಿದಾಗ ಇಂದಿರಾ ತನ್ನ ವಸ್ತುಗಳನ್ನೆಲ್ಲ ತೆಗೆದು–ಕೊಂಡು ರೈಲಿನಿಂದ ಕೆಳಗೆ ಇಳಿದಿರುವುದನ್ನು ನೋಡಿ..)
.. ಯಾಕ್ ಇಳ್ದ್ಬಿಟ್ಟೆ? ಹತ್ಕೋ ಹತ್ಕೋ.
(ಆಶ್ಚರ್ಯದಿಂದ)
.. ಯಾಕ್ ಇಳ್ದೆ? ಹತ್ಕೋ.
(ಎಂದು ಕೂಗಿ ಹೇಳುತ್ತಾನೆ)

# ದೃಶ್ಯ ೯

***ಹಗಲು – ರೈಲು ನಿಲ್ದಾಣ (ಅರಸಾಳು ಸ್ಟೇಷನ್)***

| | | |
|---|---|---|
| | | (ರೈಲು ವೇಗವಾಗುತ್ತಿರುವುದನ್ನು ಗಮನಿಸಿ ಮೂರ್ತಿ ರೈಲಿನಿಂದ ಹಾರಿ ಇಳಿಯುತ್ತಾನೆ ನಂತರ ಇಂದಿರಾಳ ಬಳಿ ಓಡಿ ಬಂದು) |
| ಮೂರ್ತಿ | : | ಕೆಳಗಡೆ ಯಾಕ್ ಇಳ್ದ್ಬಿಟ್ಟೆ ನೀನು? |
| ಇಂದಿರಾ | : | ನೀವಿಳಿದ್ರಿ ಅಂತ ಇಳ್ದ್ಬಿಟ್ಟೆ. |
| ಮೂರ್ತಿ | : | ಸರಿ ಸರಿ ನಾನಿಳ್ದಿದ್ದೇ ಬೇರೆದ್ದಕ್ಕೆ. ಏನ್ಮಾಡೋದು ಟ್ರೈನ್ ಬೇರೆ ಹೊರ್ಟ್ಹೋಯ್ತು. ನೀನ್ ಇಳಿಬಾರ್ದಾಗಿತ್ತು (ಹತಾಶನಾಗಿ ಹೇಳುತ್ತಾನೆ) |
| ಇಂದಿರಾ | : | ಇಳಿದೆ ಏನ್ಮಾಡ್ಲಿ? ಎಲ್ ಹೋಗ್ಲಿ, ನಿಮ್ಮನ್ ಬಿಟ್ರೆ ಬೇರೆ ಯಾರ್ ದಿಕ್ಕು? |
| ಮೂರ್ತಿ | : | ಹೋಗ್ಲಿ ಬಿಡು ಬಿಡು, ನೀನ್ ಅಳ್ಬೇಡ ಅಳ್ಬೇಡ. ಬ್ಯಾಗ್ ಬೇರೆ ಟ್ರೈನ್‌ನಲ್ ಬಿಟ್ಬಿಟ್ಟೆ<br>(ಎಂದು ಬೇಸರಿಸಿಕೊಳ್ಳುತ್ತಿರುತ್ತಾನೆ ಅಷ್ಟರಲ್ಲಿ ಇಂದಿರಾ ತನ್ನ ಭುಜದಲ್ಲಿ ನೇತುಹಾಕಿಕೊಂಡಿದ್ದ ಅವನ ಬ್ಯಾಗನ್ನು ನೀಡುತ್ತಾಳೆ. ಬ್ಯಾಗನ್ನ ನೋಡಿ ಮೂರ್ತಿಗೆ, ಇಂದಿರಾಳ ಬಗೆಗೆ ಕನಿಕರದ ಮತ್ತು ಕಾಳಜಿಯ ಭಾವನೆ ಮೂಡುತ್ತದೆ.) |
| | | **[ಮೂರ್ತಿ ರೈಲಿನಲ್ಲಿ ಬಿಟ್ಟು ಬಂದಿದ್ದ ಬ್ಯಾಗನ್ನು ಮರೆಯದೆ ತಂದು ಮೂರ್ತಿಗೆ ಕೊಡುವ ಇಂದಿರಾ ಹಾಗು ಆಕೆಯ ಜಾಣ್ಮೆಯನ್ನು ತನ್ನ ಮುಖಭಾವದಿಂದ ಪ್ರಶಂಸಿಸುವ ಮೂರ್ತಿಯ ಶಾಟ್‌ಗಳನ್ನು ಓವರ್ ಶೋಲ್ಡರ್ ಶಾಟ್‌ಗಳು (OSS/Suggession shot) ಮತ್ತು ಸಮಯಕ್ಕನುಗುಣವಾದ ರೀರೆಕಾರ್ಡಿಂಗ್ ಬಳಸಿ ಪರಿಣಾಮಕಾರಿಯಾಗಿ ಚಿತ್ರಿಸಲಾಗಿದೆ]** |

***ಹಸ್ತಪ್ರತಿಯಲ್ಲಿ:***

| | | |
|---|---|---|
| ***ಮೂರ್ತಿ*** | *:* | ***ಈಗೇನ್ಮಾಡೋದು? ನಾನೊಬ್ನೆ ಆಗಿದ್ರೆ ಹೆಂಗೋ ಇರಬಹುದಾಗಿತ್ತು. ಸರಿ ಬಾ.*** |



| | | |
|---|---|---|
| ಮೂರ್ತಿ | : | ಎಲ್ಲಗ್ಹೋಗೋದು ಅಂತ..<br>(ಯೋಚಿಸಿ, ಇಂದಿರಾಳಿಗೆ) ನಿಮ್ಮೂರ್‍ಯಾವ್ದು? |
| ಇಂದಿರಾ | : | ನವಿಲುಕೆರೆ ಅಂತ. |
| ಮೂರ್ತಿ | : | ನವಿಲುಕೆರೆ ಎಲ್ಲರೋದು? |
| ಇಂದಿರಾ | : | ಸಾಗರದ ಹತ್ತಿರ. |
| ಮೂರ್ತಿ | : | ಸಾಗರದತ್ರ ಅಂದ್ರೆ<br>(ಎಂದು ಹೇಳಿ ಯೋಚಿಸುತ್ತ ಅತ್ತಿತ್ತ ನೋಡುತ್ತಾನೆ, ಏನೋ ಕಂಡವನಂತಾಗಿ.. ಬಾ.. ಎಂದು ಕರೆದು ಮುಂದೆ ಹೋಗುತ್ತಾನೆ. ಇಂದಿರಾ ಅವನನ್ನು ಹಿಂಬಾಲಿಸುತ್ತಾಳೆ. ಅಲ್ಲಿನ ರೈಲು ನಿಲ್ದಾಣದಲ್ಲಿ ಒಬ್ಬ ರೈಲ್ವೆ ಸಿಬ್ಬಂದಿ ಕುಳಿತುಕೊಂಡು ಬೀಡಿ ಸೇದುತ್ತಿರುತ್ತಾನೆ. ಕೂತಿದ್ದ ವ್ಯಕ್ತಿಯ ಬಳಿಗೆ ಮೂರ್ತಿ ಬರುತ್ತಾನೆ) |

**(ಚಲಚಿತ್ರದಲ್ಲಿ ಸೇರಿಸಲಾಗಿದೆ)**

| | | |
|---|---|---|
| ಮೂರ್ತಿ | : | ಏನಪ್ಪ, ಈ ಸಾಗರದತ್ರ ನವಿಲ್‌ಕೆರೆ ಅಂತ ಇದ್ಯಲ್ಲ ಆಕಡೆ ಹೋಗ್ಬೇಕು ಯಾವ್ದಾದ್ರು ಬಸ್ಸು, ಲಾರಿಗಳು ಸಿಗ್ತಾವ? |
| ಸಿಬ್ಬಂದಿ | : | (ಯೋಚಿಸಿ) ಬಸ್ಸು ಲಾರಿ? ನಟರಾಜ ಸರ್ವೀಸ್ ಐತೆ. |
| ಮೂರ್ತಿ | : | ಅದೆಷ್ಟೊತ್ಗೆ? |
| ಸಿಬ್ಬಂದಿ | : | (ನಗುತ್ತ) ನಡ್ಕಂಡ್ ಹೋಗದು. ಈಗ ರಾತ್ರಿಗ್ ಬಿಟ್ರೆ ನಾಳೆ ಬೆಳಗ್ಗೆಗ್ ಸಾಗರ ತಲುಪ್ತೀರ. |

*ಹಸ್ತಪ್ರತಿಯಲ್ಲಿ:*

*ಮೂರ್ತಿ : ಸ್ವಾಮಿ ರಾತ್ರಿ ಉಳ್ಕೊಳ್ಳೋಕೆ ಇಲ್ಲಿ ವೈಟಿಂಗ್ ರೂಮ್ ಏನಾದ್ರು ಇದಿಯಾ?*

*ಸಿಬ್ಬಂದಿ : ಊಂ ಇಲ್ಲಿ ಒಂದ್ ಹತ್ತಾರ್ ರೈಲು ಓಡಾಡ್ತೈತೆ, ಒಂದ್ ಐದಾರ್ ರೈಲು ನಿಲ್ಲುತ್ತೆ ಅಂತ್ಹೇಳಿ ಒಂದ್ ದೊಡ್ಡ ಸ್ಟೇಷನ್ ಕಟ್ಟಿದಾರೆ. ಅಲ್ರೀ ಇಂಥಾ ಕೊಂಪೇಲಿ ವೈಟಿಂಗ್ ರೂಂ ಕೇಳ್ತೀರಲ್ಲ ಏನೇಳ್ಲಿ? ಅಗೂ ಅಲ್ನೋಡಿ ಅದೇ ವೈಟಿಂಗ್ ಬೆಂಚು, ಅದೇ ವೈಟಿಂಗ್ ರೂಂ. ಮಳೆ ಗಿಳೆ ಬಂದ್ರೆ ಕಷ್ಟ. ನೆನೀಬೇಕು ಅಷ್ಟೆ. ಇಲ್ಲಾಂದ್ರೆ ಇಲ್ಲೆ ಒಂದೆರೆಡು ಕಿಲೋ ಮೀಟರ್ ಹೋದ್ರೆ ಒಂದು ಟಿ.ಬಿ ಇದೆ ಅಲ್ಲಿ ಎಲ್ಲಾ ಅನುಕೂಲಾನು ಇದೆ. ಹುಂ, ರಾತ್ರಿ ಬೇರೆ, ಮಳೇ ಬೇರೆ ಬರ್ತಿದೆ. ಚಳಿ ಬೇರೆ. ಮಳೆಗಾಲದಲ್ಲಿ ಛತ್ರಿ ಬಿಡಬೇಡ, ಚಳಿಗಾಲದಲ್ಲಿ ಹೆಂಡತಿ ಬಿಡಬೇಡ ಅಂತಾರೆ ನಮ್ಮ ಕರ್ಮ ಎರೆಡೂ ಇಲ್ಲ ರಾತ್ರಿ ಎಲ್ಲ ಇಲ್ಲೇ ಸಾಯ್ಬೇಕು.*

ಮೂರ್ತಿ : ಅಲ್ಲ ಇಲ್ಲುಳ್ಕೊಳೋಕ್ ಯಾವ್ದಾದ್ರು ರೂಮು, ವೈಟಿಂಗ್ ರೂಮು ಅಂತಾರಲ್ಲ.

ಸಿಬ್ಬಂದಿ : ಇದೆ. ವೈಟಿಂಗ್ ಬೆಂಚು
(ರೈಲು ನಿಲ್ದಾಣದ ಬೆಂಚನ್ನು ತೋರಿಸುತ್ತ..)
ವೈಟಿಂಗ್ ಸೂರು..
(ರೈಲು ನಿಲ್ದಾಣವನ್ನು ತೋರಿಸುತ್ತ..)
ಇಲ್ಲಿ ಒಂದ್ ಹತ್ತಾರ್ ರೈಲು ಓಡಾಡ್ತೈತೆ, ಒಂದ್ ಐದಾರ್ ರೈಲು ನಿಲ್ಲುತ್ತೆ ಅಂತ್ಹೇಳಿ ಒಂದ್ ದೊಡ್ಡ ಸ್ಟೇಷನ್ ಕಟ್ಟಿದಾರೆ, ನಾನೇ ಇದಿಕ್ಕೆಲ್ಲ.

ಮೂರ್ತಿ : (ನಗುತ್ತ) ಮರ್ಯಾದೆಯಾಗಿ ಜಾಗ ಬಿಟ್ರೆ ಒಳ್ಳೇದು ಅಂತಿಯಾ? ಏನೋ ಎಂಬಂತೆ ಸಿಬ್ಬಂದಿ ಕೈ ತೋರಿಸುತ್ತಾನೆ)
.. ಇಲ್ಲಿ ಯಾವ್ದಾದ್ರು ಹತ್ರದಲ್ಲಿ ಟಿ.ಬಿ ಗೀಬಿ ಅಂತ.

ಸಿಬ್ಬಂದಿ : (ಯೋಚಿಸಿ) ಒಂದೆರೆಡ್ಮೂರ್ ಕಿಲೋಮೀಟರ್ ಹೋದ್ರೊಂದ್ ಪ್ರವಾಸಿ ಮಂದಿರ ಸಿಗ್ತೈತೆ, ನಿಮ್ ಅದೃಷ್ಟ ಚೆನ್ನಾಗಿದ್ರೆ ಒಂದ್ ರೂಮು ಸಿಗಬೈದು.

ಮೂರ್ತಿ : ಥ್ಯಾಂಕ್ಸ್, ತುಂಬ ಉಪಕಾರ ಆಯ್ತು.
(ಮೂರ್ತಿ ಹೊರಡಲನುವಾದಾಗ, ಗುಡುಗು ಸಿಡಿಲಿನ ಶಬ್ದವಾಗುತ್ತದೆ..)

| | | |
|---|---|---|
| ಸಿಬ್ಬಂದಿ | : | ಮಳೆ ಬೇರೆ ಬರಂಗೈತೆ.<br>(ಮೂರ್ತಿ ಮತ್ತು ಇಂದಿರಾ ಇಬ್ಬರನ್ನೂ ನೋಡಿ..)<br>ಮಳೆಗಾಲದಲ್ಲಿ ಛತ್ರಿ ಬಿಡಬೇಡ, ಚಳಿಗಾಲದಲ್ಲಿ ಹೆಂಡತಿ ಬಿಡಬೇಡ ಅಂತಾರೆ ದೊಡ್ಡೋರು.<br>(ಈ ಮಾತುಗಳನ್ನು ಕೇಳಿಸಿಕೊಂಡು ಮೂರ್ತಿ ನಿಧಾನವಾಗಿ ಅವನ ಕಡೆಗೆ ತಿರುಗಿ ನೋಡುತ್ತಾನೆ, ತಕ್ಷಣ ಸಿಬ್ಬಂದಿ ಬೇರೆ ಕಡೆಗೆ ತಿರುಗುತ್ತಾನೆ)<br>.. ಆಹಹ ನಾರಾಯಣ ಈ ನರಕದಲ್ ತಂದ್ಹಾಕ್ಬಿಟಿದಿಯಲ್ಲಪ್ಪ ನನ್ನ.<br>(ಮತ್ತೆ ಅವರೆಡೆಗೆ ಕಳ್ಳದಾಗಿ ನೋಡುತ್ತ)<br>.. ಜೋಡಿ ಚೆಂದಾಗೈತೆ.<br>(ಮೂರ್ತಿ ಮತ್ತು ಇಂದಿರಾ ನಡೆದು ಬರುತ್ತಿರುವಂತೆಯೇ ಮೋಡಕವಿದ ವಾತಾವರಣ ಸೃಷ್ಟಿಯಾಗುತ್ತದೆ) |

**ನಿರ್ದೇಶಕರ ಟಿಪ್ಪಣಿ:**

**ಡಾ. ರಾಜ್ ಈ ಚಿತ್ರದಲ್ಲಿ ನೀವೆಲ್ಲು ನಟಿಸೋದಿಲ್ವಾ ಎಂದು ನನ್ನನ್ನು ಕೇಳುತ್ತಿದ್ದಾಗ, ನಾನು ನಟಿಸ್ತೀನಿ, ನಟಿಸ್ತೀನಿ ಎಂದು ಕೊನೆಯ ತನಕ ದೂಡುತ್ತಾ ಬಂದಿದ್ದೆ. ರೈಲು ನಿಲ್ದಾಣದಲ್ಲಿ ಕೊನೆಯ ದಿನದ ಚಿತ್ರೀಕರಣ ಇನ್ನೇನು ಮುಗಿಯುತ್ತೆ ಎಂದಾಗ, ರಾಜ್ ಕೊನೆಗೂ ನನ್ನ ಜೊತೆ ನೀವು ಅಭಿನಯಿಸಲಿಲ್ಲ ಎಂದು ಹೇಳಿ ಶಾಟ್‌ಗೆ ಸಿದ್ಧರಾದರು. ಪಾತ್ರದ ಅಭ್ಯಾಸ ಮಾಡುವಾಗ ಎಲ್ಲಿ ನಿರ್ದೇಶಕರು ಎಂದು ಹುಡುಕುತಿದ್ದರು. ಆಗ ನಾನು ಮೇಕಪ್ ಹಾಕಿಕೊಂಡು ನಾನಿಲ್ಲೇ ಇದೀನಲ್ಲ ಅಣ್ಣಾ ಎಂದೆ. ವೇಷಧಾರಿಯಾದ ನನ್ನನ್ನು ನೋಡಿ ಅಂತೂ ನಮ್ಮ ಜೊತೇಲೆ ಇರ್ತೀರಿ ಎಂದು ತುಂಬಾ ಖುಷಿಪಟ್ಟರು. ಒಂದೇ ಶಾಟ್‌ನಲ್ಲಿ, ಒಂದೇ ಟೇಕ್‌ನಲ್ಲಿ ಚಿತ್ರೀಕರಣ ಮುಗಿಯಿತು.**



ತಾಳಗುಪ್ಪ ಸ್ಟೇಷನ್‌ನ ಹೊರಾಂಗಣದಲ್ಲಿ ಚಿತ್ರೀಕರಣ ತಂಡ

# ದೃಶ್ಯ 10

***ರಾತ್ರಿ – ಹೊರಾಂಗಣ – ಬಯಲು ಪ್ರದೇಶ – ರಸ್ತೆ***

(ನಿಧಾನವಾಗಿ ಮೋಡಕವಿದ ವಾತಾವರಣ ಸೃಷ್ಟಿಯಾಗುತ್ತದೆ. ನಡೆದು ಬರುತ್ತಿದ್ದಂತೆ ಕತ್ತಲಾಗಿ ಗುಡುಗು ಸಿಡಿಲು ಪ್ರಾರಂಭವಾಗುತ್ತದೆ. ಮೂರ್ತಿ ಮತ್ತು ಇಂದಿರಾ ಒಬ್ಬರನ್ನೊಬ್ಬರು ನೋಡಿ ಬೇಗ ಬೇಗ ನಡೆಯುಲು ಪ್ರಾರಂಭಿಸುತ್ತಾರೆ.)

# ದೃಶ್ಯ 11

*ರಾತ್ರಿ – ಹೊರಾಂಗಣ – ಒಳಾಂಗಣ – ಪ್ರವಾಸಿ ಮಂದಿರ*

(ಮೂರ್ತಿ ಮತ್ತು ಇಂದಿರಾ ಮಳೆಯಲ್ಲಿ ನೆನೆಯುತ್ತಾ ಪ್ರವಾಸಿ ಮಂದಿರದ ಬಳಿ ಬರುತ್ತಾರೆ. ಸುತ್ತಲೂ ಯಾರೂ ಇಲ್ಲದ್ದನ್ನು ಕಂಡು ಜೋರಾಗಿ ಮೇಟಿಯನ್ನು ಕರೆಯುತ್ತಾನೆ)

***ಹಸ್ತಪ್ರತಿಯಲ್ಲಿ:***

***ಮೂರ್ತಿ : ಯಾರಪ್ಪ ಅಲ್ಲಿ?***

***ಮೇಟಿ : ಏನ್ ಬೇಕಾಗಿತ್ತು ಸ್ವಾಮಿ?***

***ಮೂರ್ತಿ : ರಾತ್ರಿ ಉಳ್ಕೊಳೋಕೆ ಎರೆಡ್ ರೂಮ್ ಬೇಕಾಗಿತ್ತು. ಬೆಳಿಗ್ಗೆ ಹೊರ್ಟೋಗ್ತೀವಿ.***

***ಮೇಟಿ : ಇಲ್ಲಿರೋದು ಒಂದೇ ರೂಮು ಬನ್ನಿ***

ಮೂರ್ತಿ : ಏನಪ್ಪ, ಯಾರಿದೀರಪ್ಪ ಇಲ್ಲಿ? ಏ ಮೇಟಿ..
(ಒಬ್ಬ ವ್ಯಕ್ತಿಯ ಧ್ವನಿ ಕೇಳಿಸುತ್ತದೆ)

ಮೇಟಿ : ಬಂದೆ ಸ್ವಾಮಿ.

ಮೂರ್ತಿ : ಬಾಪ್ಪಾ..
(ಮೈ ತುಂಬ ಕಂಬಳಿಯನ್ನು ಸುತ್ತಿಕೊಂಡು, ಒಬ್ಬ ವ್ಯಕ್ತಿ ಬರುತ್ತಾನೆ.)

ಮೇಟಿ : ಏನಾ ಸ್ವಾಮಿ?

ಮೂರ್ತಿ : ಏನಪ್ಪ ಇವತ್ ರಾತ್ರಿ ಉಳ್ಕೊಳೋಕೆ ಎರೆಡ್ ರೂಮ್ ಬೇಕಿತ್ತಲ್ಲ..
(ಮಾತು ಮುಗಿಸುವ ಮುಂಚೆಯೇ)

ಮೇಟಿ : ಎರೆಡ್ ರೂಮಾ? ಇರದ್ ಒಂದೇ ರೂಮು ಸ್ವಾಮಿ. ಸದ್ಯ ನಿಮ್ ಅದೃಷ್ಟ ಚೆನಾಗೈತೆ.
(ಬೇರೆ ರೀತಿಯಲ್ಲಿ)
.. ಇವತ್ತ್ಯಾವ್ ಹೊಸಾ ಜೋಡಿನೂ ಬಂದಿಲ್ಲ.
(ತನ್ನ ಸೊಂಟದಲ್ಲಿ ಸಿಕ್ಕಿಸಿಕೊಂಡಿದ್ದ ಬೀಗವನ್ನು ತಗೆದು ಬಾಗಿಲನ್ನು ತೆರೆಯುತ್ತಾನೆ.)

# ದೃಶ್ಯ 12

*ರಾತ್ರಿ – ಪ್ರವಾಸಿ ಮಂದಿರದ ಕೋಣೆಯ ಒಳಗೆ*

| | | |
|---|---|---|
| | | (ಮೇಟಿ ಒಳಗೆ ಬಂದು ಲೈಟ್ ಹಾಕಿ, ಸ್ನಾನಗೃಹ/ ಶೌಚಾಲಯವನ್ನು ಮತ್ತು ಮಂಚವನ್ನು ತೋರಿಸಿ ಹೊರಡುವಾಗ ಬಾಗಿಲ ಬಳಿಯಲ್ಲಿ ನಿಂತಿದ್ದ ಇಂದಿರಾಳನ್ನು ಕಳ್ಳನೋಟದಲ್ಲಿ ಒಳಬಂದು) |
| ಮೇಟಿ | : | (ಶೌಚಾಲಯ ತೋರಿಸುತ್ತ..)<br>ಇದೇ ಬಾತ್‌ರೂಮ್ ಸ್ವಾಮಿ.<br>(ಅಲ್ಲಿದ್ದ ಒಂದೇ ಮಂಚವನ್ನು ತೋರಿಸುತ್ತ..)<br>ಅಲ್ಲಿರೋದ್ ಅದೊಂದೇ ಸಿಂಗಲ್ ಮಂಚ. ನಾ ಬರ್ಲಾ ಸ್ವಾಮಿ (ಎಂದು ಹೇಳಿ ಹೊರಡುತ್ತಾನೆ.) |
| ಮೂರ್ತಿ | : | ಸರಿಯಪ್ಪ.<br>(ಮೇಟಿ ಹೊರಡುವಾಗ ಬಾಗಿಲ ಬಳಿಯಲ್ಲಿ ನಿಂತಿದ್ದ ಇಂದಿರಾಳನ್ನು ಕಳ್ಳನೋಟದಲ್ಲಿ ನೋಡಿ ಮತ್ತು ತಿರುಗಿ ಮೂರ್ತಿಯನ್ನು ನೋಡಿ ಹೋಗುತ್ತಾನೆ. ಮೂರ್ತಿ, ಬಾಗಿಲ ಬಳಿಯಲ್ಲೇ ನಿಂತಿರುವ ಇಂದಿರಾಳನ್ನು ನೋಡುತ್ತಾನೆ. ನೋಡಿ ನಂತರ ಪ್ರಶ್ನಾರ್ಥಕವಾಗಿ)<br>.. ಯಾಕ್ ಅಲ್ಲೇ ನಿಂತ್ಕೊಂಡಿದಿಯಾ?<br>.. ಬಾ ಒಳಗೆ<br>(ಇಂದಿರಾ ನಿಧಾನವಾಗಿ ನಡೆದು ಒಳಗೆ ಬರುತ್ತಾಳೆ)<br>.. ನೀನಲ್ ಮಲ್ಕೊಂಡ್ ನಿದ್ರೆ ಮಾಡು, ನಾ ಅಲ್ ಹೊರ್ಗಡೆ ಇರ್ತೀನಿ.<br>(ಎಂದ ತಕ್ಷಣ ಇಂದಿರಾ, ಮೂರ್ತಿಯ ಕಾಲನ್ನು ಹಿಡಿದುಕೊಳ್ಳುತ್ತಾಳೆ.)<br>.. ಯಾಕೇ, ಯಾಕೆ? |
| ಇಂದಿರಾ | : | ನಾನ್ ನಮ್ಮಮ್ಮನ್ ನೋಡ್ಬೇಕು, ನನ್ ಇಬ್ರು ತಂಗೀನ್ ನೋಡ್ಬೇಕು. ನನ್ನ ಮನೆಗ್ ಕರ್ಕೊಂಡ್ಹೋಗಿ. ನಾನ್ ನಮ್ಮಮ್ಮನ್ ನೋಡ್ಬೇಕು. ನಾನ್ ಮನೇಗ್ ಹೋಗ್ಬೇಕು. (ಎಂದು ಅಳುತ್ತಾಳೆ) |
| ಮೂರ್ತಿ | : | ಈಗ ಅಮ್ಮನ್ನ ನೋಡ್ಬೇಕು, ಮನೇಗ್ ಕರ್ಕೊಂಡ್ಹೋಗಿ ಅಂದ್ರೆ ಹ್ಯಾಗ್ ಸಾಧ್ಯ. ನಿಮ್ಮೂರ್ ಸಾಗರದತ್ರ ಯಾವ್ದೋ ಹಳ್ಳಿ ಅಂತ ಬೇರೆ ಹೇಳ್ದೆ. ನೀನ್ ಏಳು, ನೀನ್ ಏಳು ಮೇಲ್ ಹೇಳ್ತನಿ. |



**[ತನ್ನ ಕಾಲನ್ನು ಹಿಡಿದಿರುವ ಇಂದಿರಾಳೊಂದಿಗೆ ಮಾತನಾಡುವ ಮೂರ್ತಿಯನ್ನು ಮತ್ತು ಇಂದಿರಾಳ ಪಾಯಿಂಟ್ ಆಫ್ ವ್ಯೂ ಅನ್ನು ಚಿತ್ರಿಸಲು ಲೋ ಆ್ಯಂಗಲ್ ಬಳಸಲಾಗಿದೆ]**

(ಇಂದಿರಾ ಎದ್ದು ನಿಲ್ಲುತ್ತಾಳೆ)
.. ನಾಳೆ ಬೆಳಗ್ಗೆ ಆಗುತ್ಲೆ ನಿಮ್ಮಮ್ಮನ್ ಹತ್ರ ಕರ್ಕೊಂಡ್ ಹೋಗ್ ಸೇರ್ಸೊ ಭಾರ ನಂದು. ಆಗ್ಬಹುದಾ. ನೀನಿನ್ ಮಲ್ಕೊ ನಾನ್ ಹೊರ್ಗಡೆ ಇರ್ತಿನಿ.

ಇಂದಿರಾ : ಬೇಡಿ ಬೇಡಿ ನಾನೊಬ್ಬೇ ಇರೋದಕ್ಕೆ ಭಯ ಆಗುತ್ತೆ.

***ಹಸ್ತಪ್ರತಿಯಲ್ಲಿ:***

***ಮೂರ್ತಿ : ನಿನ್ನ ಜೊತೆ ಇರೋದಕ್ಕೆ ನಂಗೆ ಹೆದ್ರುಕೆ ಆಗುತ್ತೆ. ಸರಿ ನಾ ಇಲ್ಲೇ ಕೂತಿರ್ತೀನಿ. ನಿನು ಮಲಕ್ಕೋ.***

***ಇಂದಿರಾ : ಅಯ್ಯೋ ಬೇಡಾ, ನೀವು ಮಲಗಿ ನಾನು ಕೂತಿರ್ತೀನಿ.***

ಮೂರ್ತಿ : ಭಯ ಅಂದ್ರೆ ಮತ್ತೇನ್ ಮಾಡೋದ್ ಇವಾಗ. (ಎಂದು ಹೇಳಿ ಏನನ್ನೋ ಯೋಚಿಸಿ ನಂತರ) ಸರಿ ನಾನಲ್ ಕೂತ್ಕೊಂಡಿರ್ತೀನಿ, ನೀನಲ್ ಮಲ್ಕೊ.

ಇಂದಿರಾ : ನಂಗ್ಗೆ ಮಂಚದ್ ಮೇಲೆ ಮಲ್ಕೊಂಡು ಅಭ್ಯಾಸ ಇಲ್ಲ.

ನೀವೆ ಅಲ್ ಮಲ್ಕೊಳಿ, ನಾನಿಲ್ ಮಲ್ಕೊತಿನಿ. (ಆಯಿತೆಂದು ಮೂರ್ತಿ ಕೈ ತೋರಿಸಿ ಹೋಗಿ ದಿಂಬನ್ನು ಸರಿಮಾಡುತ್ತಾನೆ. ಇಂದಿರಾ ತಾನು ಮಲಗಲು ಸಿದ್ಧಳಾಗುತ್ತಾಳೆ. ಮೂರ್ತಿ ಹೋಗಿ ಬಾಗಿಲನ್ನು ಹಾಕಿ ಬರುತ್ತಾನೆ. ಮಲಗದೆ ಇನ್ನೂ ನಿಂತಿರುವ ಇಂದಿರಾಳನ್ನು ಕಂಡು..)

ಮೂರ್ತಿ : ಇನ್ಯಾಕ್ ನಿಂತ್ಕೊಂಡಿದ್ಯಾ? ಮಲ್ಕೊ..
(ಹೂಂ ಎಂದು ಇಂದಿರಾ ಕುಳಿತುಕೊಳ್ಳುತ್ತಾಳೆ.)
.. ತಗೋ ಹೊದ್ಕೋ.
(ಎಂದು ಕಂಬಳಿಯನ್ನು ಇಂದಿರಾಗೆ ಕೊಡುತ್ತಾನೆ, ಹೊರಗೆ ಜೋರಾಗಿ ಮಳೆ ಬರುತ್ತಲೇ ಇರುತ್ತದೆ)

**[ಸಿಡಿಲು, ಗುಡುಗು ಮತ್ತು ಮಳೆಯ ತೀವ್ರತೆಯನ್ನು ತೋರಿಸಲು ಟಿ.ಬಿ ಕೋಣೆಯನ್ನು ಹೊರಗಡೆಯಿಂದ ಸೌಂಡ್ ಎಫೆಕ್ಟ್ಸ್ ಮತ್ತು ವೈಡ್ ಶಾಟ್ ಮೂಲಕ ಚಿತ್ರಿಸಲಾಗಿದೆ]**

(ಮೂರ್ತಿ ಮತ್ತು ಇಂದಿರಾ ತಮ್ಮ ತಮ್ಮ ಜಾಗಗಳಲ್ಲಿ ಮಲಗಿಕೊಳ್ಳುತ್ತಾರೆ. ಆದರೆ ಇಂದಿರಾ ಇದ್ದಕ್ಕಿದ್ದ ಹಾಗೆ ಅಳಲು ಪ್ರಾರಂಭಿಸುತ್ತಾಳೆ..)
.. ಪುನಃ ಯಾಕ್ ಅಳ್ತಾದಿಯಾ ನೀನು? ನಿದ್ರೆ ಬರ್ಲಿಲ್ವ ನಿಂಗೆ?
(ಅಳುತ್ತಲೇ ಇಂದಿರಾ "ಊಹುಂ" ಎಂದು ಹೇಳುತ್ತಾಳೆ. ಮೂರ್ತಿ ಚಿಂತೆಗೀಡಾಗುತ್ತಾನೆ)
.. ಯಾವ್ದು? ಸಾಗರದ ಹತ್ರ ನಿಮ್ಮೂರ್ ಯಾವ್ದು ಅಂದೆ?

ಇಂದಿರಾ : ನವಿಲುಕೆರೆ.

ಮೂರ್ತಿ : ಹೌದು ಈ ಕಟುಕನ ಕೈಲಿ ಅದ್ಹ್ಯಾಗ್ ಸಿಕ್ಕಾಕೊಂಡೆ ನೀನು?
(ಇಂದಿರಾ ಅಳುತ್ತಲೇ ನಿಧಾನವಾಗಿ ಮೇಲಕ್ಕೇಳುತ್ತಾಳೆ)

ಇಂದಿರಾ : ನಮ್ಮನೆ ಪಕ್ಕ ಆನಂದಿ ಅಂತ ಇದ್ರು. ನಾನು ಅವ್ರನ ಚಿಕ್ಕಮ್ಮ ಅಂತ ಕರೀತಿದ್ದೆ. ಅವರ್ ಮನೇಲಿ ಗ್ರಾಮ ಫೋನ್ ಪ್ಲೇಟ್ ಇತ್ತು. ನಂಗ್ ಹಾಡು ಅಂದ್ರೆ ತುಂಬಾ ಇಷ್ಟ. ಆಗಾಗ ಅಲ್ಲಿ ಹಾಡು ಕೇಳೋಕೆ ಹೋಗ್ತಿದ್ದೆ. ಆಗ ಅವನು ನನ್ನ ನೋಡ್ದ.



[ಇಂದಿರಾ ತನ್ನ ಫ್ಲ್ಯಾಶ್ ಬ್ಯಾಕನ್ನು ಮೂರ್ತಿಗೆ ಹೇಳುವಾಗ ಆಕೆಯ ಮುಖಕ್ಕೆ ಝೂಮ್ ಮಾಡುವ ಮೂಲಕ ಹಾಗು ಮುಂದಿನ ದೃಶ್ಯದಲ್ಲಿರುವ ಗ್ರಾಮಾಫೋನಿನ ಶಬ್ದವನ್ನು ಬಳಸುವ ಮೂಲಕ ಆ ಗ್ರಾಮಾಫೋನಿನ ಶಬ್ದವನ್ನು ಟೈಮ್ ಲ್ಯಾಪ್ಸ್ ಆಗಿ ಬಳಸಲಾಗಿದೆ]

# ದೃಶ್ಯ 13

***ಹಗಲು – ಆನಂದಿ ಮನೆ ಒಳಗೆ***

(ಆನಂದಿ ಮನೆಯಲ್ಲಿ ಗ್ರಾಮಾಫೋನ್ ಪ್ಲೇಟ್ ತಿರುಗುತ್ತಿದೆ. ಇಂದಿರಾ ಮನೆಯಲ್ಲಿ ಕಸಗುಡಿಸುತ್ತಿದ್ದಾಳೆ. ಹಾಡು ಕೇಳಿಸುತ್ತಿದ್ದಂತೆ ಕಸಗುಡಿಸುತ್ತಿದ್ದನ್ನು ಅಲ್ಲೇ ಬಿಟ್ಟು ಗ್ರಾಮಫೋನಿನ ಹತ್ತಿರ ಬರುತ್ತಾಳೆ, ಹಾಡಿನ ಜೊತೆಗೆ ತಾನೂ ಹಾಡುತ್ತಿರುತ್ತಾಳೆ.. ಅಷ್ಟರಲ್ಲಿ ವ್ಯಾಸರಾಯ ಬೀಡಿ ಸೇದುತ್ತ ಅಲ್ಲಿಗೆ ಬರುತ್ತಾನೆ. ಬಂದು ಇಂದಿರಾ ಹಾಡುತ್ತಿರುವುದನ್ನು ಕೇಳುತ್ತಾ ನಿಲ್ಲುತ್ತಾನೆ)



**[ಗ್ರಾಮಾಫೋನ್, ಅದನ್ನು ಕೇಳುತ್ತಿರುವ ಇಂದಿರಾ ಹಾಗು ಅದೇ ಕೋಣೆಗೆ ಬರುವ ವ್ಯಾಸರಾಯ.. ಇವಿಷ್ಟೂ ವಿವರಗಳನ್ನು ಒಂದೇ ಶಾಟ್‌ನಲ್ಲಿ ತೋರಿಸುವ ಸಲುವಾಗಿ ವೈಡ್ ಶಾಟ್ ಬಳಸಲಾಗಿದೆ]**

ವ್ಯಾಸರಾಯ : ಆಹಹಹಾ, ಎಂಥ ಸೊಗಸಾದ ಶಾರೀರ? ಎಂಥ ಸುಂದರವಾದ ಶರೀರ. ಅಬ್ಬಬ್ಬಬ್ಬಾ ನನ್ನ ಕಣ್ಣಿಗೆ ಮಿಂಚು ಹೊಡ್ದು ಕುರುಡಾಗೋಯ್ತಲ್ಲಪ್ಪ, ಕುರುಡಾಗೋಯ್ತು.

(ಬೀಡಿ ಸೇದುತ್ತ ವ್ಯಾಸರಾಯ ಅವಳನ್ನೇ

| | | |
|---|---|---|
| | | ನೋಡುತ್ತಾ ನಿಲ್ಲುತ್ತಾನೆ, ಆಗ ಅಲ್ಲಿಗೆ ಆನಂದಿ ಸಂತೋಷದಿಂದ ಬರುತ್ತಾಳೆ) |
| ಆನಂದಿ | : | ಏನಣ್ಣ, ಯಾವಾಗ್ ಬಂದೆ ಜೈ.....ಲ್.. (ಜೈಲಿಂದ ಎಂದು ಹೇಳಲು ಹೋಗಿ, ಇಂದಿರಾಳನ್ನು ನೋಡಿ ಅಲ್ಲಿಗೆ ನಿಲ್ಲಿಸಿ) ಊರಿಂದ? |
| ವ್ಯಾಸರಾಯ | : | ಮೂರು ದಿನ ಆಯ್ತು ಹೊರಗೆ ಬಂದು. ಬಸ್ ಸ್ಟ್ಯಾಂಡಿಗೆ ಬಂದೆ ನಿನ್ ಜ್ಞಾಪಕ ಬಂದು ಇಲ್ಲಿಗೇ ಟಿಕೆಟ್ ತಗೊಂಡ್ ಬಂದ್ಬುಟ್ಟೆ. |
| ಆನಂದಿ | : | ಅಯ್ಯೋ ನನ್ ಚೆಂದ ಏನ್ ಬುಡು, ಮಾಮೂಲು.<br>(ಆನಂದಿ ನುಲಿಯುತ್ತಾ ನಿಂತಿರುತ್ತಾಳೆ)<br>ಹೌದು ಯಾವ್ದಿದು ಹೊಸ ಮೈನಾ ಹಕ್ಕಿ ಚೆನಾಗಿದೆ. |
| ಆನಂದಿ | : | ಅದಾ..<br>(ಇಂದಿರಾ ಹತ್ತಿರ ಬಂದು)<br>..ಇಂದ್ರಾ ನೀನ್ ಒಳ್ಗಡೆ ಹೋಗು. ಅನ್ನ ಮಿಕ್ಕಿದೆ ತಗೊಂಡ್ ಹೋಗ್ ನಿಮ್ಮಮ್ಮಂಗ್ ಕೊಟ್ಬಿಡು. |
| ಇಂದಿರಾ | : | ಸರಿ ಚಿಕ್ಕಮ್ಮ (ಒಳಗಡೆ ಹೋಗುತ್ತಾಳೆ) |
| ಆನಂದಿ | : | ಆಗ್ಲೇ ನಿನ್ ಹದ್ದಿನ್ ಕಣ್ಣು ಅವ್ಳ್ಮೇಲ್ ಹೋಗ್ಬಿಡ್ತೋ? |
| ವ್ಯಾಸರಾಯ | : | ಕಜ್ಜಿ ಹೋದ್ರು ಕಡಿತ ಹೋಗಲ್ಲ ಅನ್ನೋ ಹಾಗೆ ಕಸುಬು ಹೋದ್ರು ಹಾಳಾದ್ದು ವಾಸನೆ ಹೋಗಲ್ವಲ್ಲ. |
| ಆನಂದಿ | : | ಹೌದು..<br>(ಇಂದಿರಾ ಬಂದಿದ್ದನ್ನು ಗಮನಿಸಿ)<br>.. ಇವ್ಳು ಇಂದ್ರಾಂತ ನಮ್ಮನೆ ಪಕ್ಕದಲ್ಲೇ ಇದಾಳೆ. ಸಂಗೀತ ಅಂದ್ರೆ ಪಂಚಪ್ರಾಣ. ಯಾವಾಗ್ಲು ಗ್ರಾಮಾಫೋನ್ ಕೇಳೋಕೆ ನಮ್ಮನೆಗ್ ಬರ್ತಾನೇ ಇರ್ತಾಳೆ. ಇವ್ಳಿಂದೆ ಇನ್ನಾ ಎರೆಡ್ ಹೆಣ್ಮಕ್ಳಿವೆ. ಪಾಪ ತುಂಬಾ ಬಡತನ ಕಣಣ್ಣ. |
| ವ್ಯಾಸರಾಯ | : | ಅಯ್ಯಯ್ಯ ಬಡವರಾಗ್ ಹುಟ್ಟೋದ್ ತಪ್ಪಲ್ಲ ಆನಂದಿ, ಬಡವರಾಗ್ ಬಾಳೋದ್ ತಪ್ಪು. ಅಲ್ವಾ?<br>(ಇಂದಿರಾಳಿಗೆ ಕೇಳುತ್ತಾನೆ)<br>.. ಏನವ್ವ?<br>(ಅವಳನ್ನು ಮಾತನಾಡಿಸಿದ ತಕ್ಷಣ ಆನಂದಿ..) |
| ಆನಂದಿ | : | ಹೌದೌದೌದು.<br>(ಎಂದು ವ್ಯಾಸರಾಯನಿಗೆ ಹೇಳಿ, ಇಂದಿರಾಳಿಗೆ)<br>.. ಇಂದ್ರಾ ನೀನ್ಹೋಗಮ್ಮ. |
| ಇಂದಿರಾ | : | ಸರಿ. (ಹೊರಡುತ್ತಾಳೆ, ವ್ಯಾಸರಾಯ ಅವಳು ಹೋಗುವುದನ್ನೇ ನೋಡುತ್ತಿರುತ್ತಾನೆ) |

# ದೃಶ್ಯ 14

***ಹಗಲು – ಇಂದಿರಾ ಮನೆ ಹೊರಗೆ***

(ಮುರುಕಲು ಗೋಡೆ, ಜೋಡಿಸಿರುವ ಇಟ್ಟಿಗೆಗಳು. ಇಂದಿರಾ, ತಾಯಿ ಮತ್ತು ತಂಗಿಯರ ಜೊತೆಗೆ ಕುಳಿತಿದ್ದಾಳೆ. ವ್ಯಾಸರಾಯ, ಆನಂದಿ ಪಕ್ಕದಲ್ಲಿ ಕುಳಿತಿದ್ದಾನೆ)



**[ಇಂದಿರಾಳ ಮುರುಕಲು ಮನೆ, ಬಡತನ, ಆಕೆಯ ತಾಯಿ ಹಾಗು ತಂಗಿಯರೊಂದಿಗೆ ಮಾತನಾಡುತ್ತಿರುವ ವ್ಯಾಸರಾಯ ಮತ್ತು ಆನಂದಿ.. ಇವಿಷ್ಟೂ ವಿವರಗಳನ್ನು ತೋರಿಸಲು ಮನೆಯ ಹೊರಗಡೆಯಿಂದ ವೈಡ್ ಶಾಟ್ ಮೂಲಕ ಚಿತ್ರಿಸಲಾಗಿದೆ]**

ವ್ಯಾಸರಾಯ : ನೋಡಿ ತಪ್ಪು ತಿಳ್ಕೋಬೇಡಿ ತಾಯಿ. ನಿಮ್ಮ ಮಗಳು ಬೇರೆಯಲ್ಲ ನನ್ನ ಮಗಳು ಬೇರಯಲ್ಲ, ಅದೇನು ವಾಂಛಲ್ಯವೋ ಏನೋ ನನಿಗ್ ಗೊತ್ತಿಲ್ಲ. ಈ ಹುಡುಗಿ ಕಂಠಾ ಕೇಳಿದ ಮೇಲೆ ಆಹಹಹಹ. ಈ ಹುಡುಗಿ ಏನಾದ್ರು ನಾಟಕದ ಕಂಪೆನಿಗೆ ಸೇರ್ಬಿಟ್ರೆ ದೊಡ್ಡ ಸ್ಟಾರ್ ಆಗೋದ್ರಲ್ಲಿ ಅನುಮಾನಾನೇ ಇಲ್ಲ. ಕಲೆ ಎಲ್ಲನ್ನೂ ಕೈ

|  |  |  |
|---|---|---|
|  |  | ಬೀಸಿ ಕರೆಯುತ್ತೆ ಆದ್ರೆ ಕೆಲವರನ್ನ ಮಾತ್ರ ಆಯ್ಕೆ ಮಾಡ್ಕೊಳುತ್ತೆ. |
| ಆನಂದಿ | : | ಹಂಗೇನಣ್ಣ, ನಮ್ಮ ಇಂದಿರಾಂಗೆ ಅಂಥಾ ಒಳ್ಳೆ ಭವಿಷ್ಯ ಐತಾ? |
| ವ್ಯಾಸರಾಯ | : | ಆ ವಿಷಯದಲ್ಲಿ ಅನುಮಾನ್ವೇ ಬೇಡ ಆನಂದಿ ಅನುಮಾನ್ವೇ ಬೇಡ. ನಾನ್ಬೇಕಾದ್ರೆ ಸ್ಟಾಂಪ್ ಪೇಪರ್ ಮೇಲೆ ಬರ್ಕೊಡ್ತೀನಿ. ನನಿಗೆ ಗೊತ್ತಿರೋ ಕೆಲವು ನಾಟಕದ ಕಂಪೆನಿಗಳಿದಾವೆ. ಅದ್ರಲ್ಲೂ ನರಸಿಂಹಾಚಾರ್ ಕಂಪೆನಿ ಗುಬ್ಬಿ ಕಂಪೆನಿಯಷ್ಟೇ ಸ್ಟ್ಯಾಂಡರ್ಡು. ಅಲ್ಲಿ ಹೆಣ್ಣುಮಕಳ್ಳು ಬಹಳ ಸುರಕ್ಷಿತವಾಗಿರ್ತಾರೆ ಹೂಂ. ನಂಬಿಕೆ ಇಟ್ಟು ಕಳ್ಸ್‌ಕೊಡಿ, ನಾನಿದೀನಲ್ಲ. ನೀನ್ ಸ್ವಲ್ಪ ಹೇಳು ಆನಂದಿ. |
| ಆನಂದಿ | : | ಹೂ ಅನ್ನು ರಾಜೀವಕ್ಕ. ನೋಡು ನಮ್ ವ್ಯಾಸಣ್ಣ ಹೇಳೋದು ನಿಜ. ಈಗ (ಎಂದು ಸೊಂಟದಲ್ಲಿ ಸಿಕ್ಕಿಸಿಕೊಂಡಿದ್ದ ದುಡ್ಡನ್ನು ತಗೆದು..)<br>.. ಈ ಇದೊಂದ್ಸಾವಿರೂಪಾಯ್ ಇಟ್ಕೊ. ಹೇ ಮುಂದೆ ನಿನ್ ಮಗ್ಳು ಕಳ್ಸೋ ಸಾವಿರಾರ್‍ರುಪಾನಿಂದ ನಿನ್ ಇಬ್ರು ಹೆಣ್ ಮಕ್ಳು ಮದ್ವೇನೂ ಮಾಡ್ಬಹುದು. ನಿನ್ ಬಡತನಾನೂ ನೀಗುತ್ತೆ.<br>(ರಾಜೀವಮ್ಮ ತಗೆದುಕೊಳ್ಳದೇ ಇದ್ದಾಗ)<br>ಹೇಯ್ ತಗೋ ರಾಜೀವಕ್ಕ. ಮನೆಗ್ ಬಂದ್ ಲಕ್ಷ್ಮೀನಾ ಬೇಡ ಅನ್ಬಾರ್ದು. ನಮ್ ವ್ಯಾಸಣ್ಣ ಅಂದ್ರೆ ದೇವ್ರಂಥೋನು. |
| ರಾಜೀವಮ್ಮ | : | ನಿಜ.. ಆ ದೇವ್ರು ಯಾವ್ ಯಾವ್ ರೂಪದಲ್ ಬಂದು ಸಹಾಯ ಮಾಡ್ತಾನೋ ಯಾರಿಗ್ ಗೊತ್ತು. ನೀವೇ ನಮ್ ಭಾಗದ್ ದೇವ್ರು ನಿಮ್ಮನ್ನ ನಂಬಿ ನನ್ ಮಗೂನ ನಿಮ್ ಕೈನಲ್ ಹಾಕ್ತಿನಿ. |
|  |  | **[ವ್ಯಾಸರಾಯನ ಮತ್ತು ಆನಂದಿಯ ಬಣ್ಣದ ಮಾತಿಗೆ ಮರುಳಾಗುವ ಇಂದಿರಾ ಮತ್ತು ಆಕೆಯ ತಾಯಿಯ ಶೋಚನೀಯ ಸ್ಥಿತಿಯನ್ನು ಸಮಂಜಸವಾದ ಹಿನ್ನೆಲೆ ಸಂಗೀತದ ಮೂಲಕ ತೋರಿಸಲಾಗಿದೆ]** |
| ವ್ಯಾಸರಾಯ | : | ಹ್ಞಾಂ ಅಷ್ಟು ಮಾಡಿ, ಮಿಕ್ಕಿದ್ದು ನನಿಗ್ ಬಿಡಿ. |

# ದೃಶ್ಯ 15

*(ಚಿತ್ರದಿಂದ ತೆಗೆದು ಹಾಕಲಾಗಿದೆ).*
*ರಾತ್ರಿ – ಇಂದಿರಾ ಮನೆ ಒಳಗೆ*

(ರಾಜೀವಿ, ಇಂದಿರಾ ಮತ್ತು ಇಬ್ಬರು ತಂಗಿಯರು ಒಟ್ಟಿಗೆ ಮಲಗಿದ್ದಾರೆ. ಇಂದಿರಾ ಬಿಕ್ಕಳಿಸುತ್ತಿದ್ದಾಳೆ.)

ರಾಜೀವಿ : ನಿನ್ ಕಳ್ಸಿ ಕೊಡೋದು ನಂಗೂ ಕಷ್ಟಾನೆ. ಏನ್ಮಾಡ್ಲಿ ನಂಗೆ ದುಡಿದು ತರೋ ಗಂಡ ಇದಾನಾ? ಗಂಡು ಮಕ್ಳಿದಾರಾ? ಎಲ್ಲಾ ಕಳ್ಕೊಂಡ್ ಕೂತಿರೋ ನತದೃಷ್ಟೆ. ಈಗ ಈ ಸಂಸಾರಕ್ಕೆ ನೀನೆ ದಿಕ್ಕು. ನಿನ್ನ ದುಡಿಮೆಯಿಂದ ಈ ಮನೆ ಬೆಳಗಬೇಕು. ನೀನೋಗ್ತಿರೋದು ನಾಟಕದ ಕಂಪೆನಿ, ನಿನ್ನ ಗುಣ ಅಪರಂಜಿ ಅಂತ ನಂಗೊತ್ತು. ಆದ್ರೂ ನೆನಪಿಟ್ಕೊ ಒಂದು ಅರಮನೆಗೆ ಒಂದೇ ಸಿಂಹಾಸನ, ಒಬ್ಬನೇ ರಾಜ, ಒಬ್ಬಳೇ ರಾಣಿ. ಅದೇ ಶೋಭಿಸೋದು. ಒಂದ್ ಹೆಣ್ಣಿಗೂ ಒಬ್ನೇ ಗಂಡ. ಅದಾಗ್ದೆ ಮೈ ಒಬ್ಬನಿಗೆ ಮನಸ್ಸು ಒಬ್ಬನಿಗೆ ಆದ್ರೆ ಅವ್ಳು ಗರತಿಯಲ್ಲ ಸೂಳೆ. ನಿನ್ ಮನಸ್ಸನ್ನ ಹತೋಟಿಯಲ್ಲಿ ಇಟ್ಕೊ ನಿನ್ಮೇಲೆ ನಂಗೆ ನಂಬಿಕೆ ಇದೆ. ಸ್ವಲ್ಪ ದಿನ ಹೊಂದ್ಕೊಂಡಿರು ನಿಂದು ಒಂದ್ ಮದ್ವೆಯಾಗಿ ನಿನ್ನ ತಂಗೀರು ಒಂದು ದಡ ಸೇರ್ಬಿಟ್ರೆ ಸಾಕು. ತಾಯಿಯಾಗಿ ಇಷ್ಟು ಹೇಳಬಲ್ಲೆ. ಅಷ್ಟೆ ಶಕ್ತಿ ನಂಗಿರೋದು.

(ಇಂದಿರಾ ತಾಯಿಯನ್ನು ತಬ್ಬಿಕೊಂಡು ಅಳುವಳು)

# ದೃಶ್ಯ 16

*(ಚಿತ್ರದಿಂದ ತೆಗೆದು ಹಾಕಲಾಗಿದೆ.)*
*ಹಗಲು – ನದಿ ದಡ.*

ಇಂದಿರಾಳನ್ನು ಬೀಳ್ಕೊಡಲು ತಾಯಿ ಮತ್ತು ತಂಗಿಯರು. ಆನಂದಿ ವ್ಯಾಸರಾಯ ಜೊತೆಗಿದ್ದಾರೆ. ಇಂದಿರಾ ತಾಯಿ ತಂಗಿಯನ್ನು ತಬ್ಬಿಕೊಂಡು ಅಳುತ್ತಾಳೆ. ತಾಯಿ ಮಗಳಿಗೆ ಗಂಟುಕೊಡುತ್ತಾಳೆ. ವ್ಯಾಸರಾಯ ದೋಣಿಯನ್ನೇರುತ್ತಾನೆ. ಇಂದಿರಾಳೂ ಹೋಗಿ ಕೂರುತ್ತಾಳೆ. ಎಲ್ಲರೂ ಕೈಬೀಸುತ್ತಾರೆ.
(ಹಿಂದಿನ ಘಟನೆ/ಫ್ಲಾಷ್ ಬಾಕ್ ಮುಕ್ತಾಯ)

# ದೃಶ್ಯ 17

*ರಾತ್ರಿ – ಪ್ರವಾಸಿ ಮಂದಿರದ ಒಳಗೆ*

| | | |
|---|---|---|
| | | (ಹಳೆಯ ಘಟನೆಯನ್ನು ಹೇಳಿದ ನಂತರ) |
| ಇಂದಿರಾ | : | ಇವ್ನಿಂಥಾ ಚಂಡಾಳ ಕೆಲ್ಸ ಮಾಡ್ತಾನೆ ಅಂತ ನಾನನ್ಕೊಂಡಿರ್ಲಿಲ್ಲ. ನೀವ್ ಇಲ್ದೆ ಹೋಗಿದ್ದಿದ್ರೆ ನಾನೇನಾಗ್ತಿದ್ನೊ, ನನ್ ಗತಿ ಏನಾಗ್ತಿತ್ತೋ.. (ಮುಖಮುಚ್ಚಿಕೊಂಡು ಅಳುತ್ತಾಳೆ) ನನ್ನ ಅದೃಷ್ಟ ದೇವರಾಗ್ ನೀವು ಸಿಕ್ಕುದ್ರಿ. ನಾಳೇನೆ ನನ್ನ ನಮ್ ಮನೇಗ್ ಕರ್ಕೊಂಡ್ ಹೋಗ್ತಿರಾ ಅಲ್ವಾ? |
| ಮೂರ್ತಿ | : | ಯಾಕ್ ಅನುಮಾನಾನಾ? |
| ಇಂದಿರಾ | : | ಅಯ್ಯೋ ಇಲ್ಲ, ಖಂಡಿತಾ ಇಲ್ಲ. ನಿಮ್ ಸಹವಾಸ್ದಲ್ಲಿ ಯಾವ್ ಅನುಮಾನಾನು ಇರಲ್ಲ. |
| ಮೂರ್ತಿ | : | ಮತ್ತೆ ನೆಮ್ದಿಯಾಗ್ ಮಲ್ಕೊಂಡ್ ನಿದ್ರೆ ಮಾಡು. ನಾನಿದಿನಿ. |



**[ಕೆಳಗೆ ಕುಳಿತಿರುವ ಇಂದಿರಾ ಮತ್ತು ಮಂಚದ ಮೇಲೆ ಕುಳಿತು ಮಾತನಾಡುತ್ತಿರುವ ಮೂರ್ತಿಯ ಸಂಭಾಷಣೆಯನ್ನು ಅವರವರ ಪಾಯಿಂಟ್ ಆಫ್ ವ್ಯೂಗಳಿಂದ ಚಿತ್ರಿಸಲು ಓವರ್ ಶೋಲ್ಡರ್ ಶಾಟ್‌ಗಳನ್ನು ಬಳಸಲಾಗಿದೆ]**



**[ನಿಧಾನವಾಗಿ ನಿದ್ರೆಗೆ ಜಾರುತ್ತಿರುವ ಮೂರ್ತಿಯ ಕಣ್ಣ ರೆಪ್ಪೆಗಳನ್ನು ಮತ್ತು ಅವನನ್ನು ಗಮನಿಸುವ ಇಂದಿರಾಳ ಕಣ್ಣುಗಳನ್ನು ಸೂಕ್ಷ್ಮವಾಗಿ ಚಿತ್ರಿಸಲು ಕ್ಲೋಸ್ ಶಾಟ್ಸ್ ಬಳಸಲಾಗಿದೆ]**

(ಹಾಗೇ ಯೋಚಿಸುತ್ತ ಮಲಗಿರುವಾಗ ಮಳೆ ಬೀಳುತ್ತಿದ್ದ ಕಾರಣ ಜೋರಾಗಿ ಸಿಡಿಲೊಂದು ಹೊಡೆಯುತ್ತದೆ. ಇಂದಿರಾ ಗಾಬರಿಗೊಂಡು, ಬೆಚ್ಚಿಬಿದ್ದು ಜೋರಾಗಿ ಕಿರುಚಿ ಮೂರ್ತಿ ಮಲಗಿರುವ ಕಡೆಗೆ ಹೋಗಿ ಅವನ ಕೈ ಹಿಡಿದುಕೊಳ್ಳುತ್ತಾಳೆ... ಮೂರ್ತಿ ಗಾಬರಿಗೊಂಡು)

ಮೂರ್ತಿ : .. ಯಾರು? ಯಾಕೆ? ಯಾಕ್ ಹೆದ್ರುಕೆ? ಸಿಡಿಲು ಹೊಡ್ದಿದ್ದು ಅದಿಕ್ಕಿಷ್ಟು ಭಯಾನಾ?

ಇಂದಿರಾ : ನಾನಿಲ್ಲೇ ಇರ್ತಿನಿ

ಮೂರ್ತಿ : ಇರು

ಇಂದಿರಾ : ನಿಮ್ ಜೊತೇಲೆ ಇರ್ತೀನಿ.

ಮೂರ್ತಿ : ಹಾಗೇ ಮಾಡು. ನೀನಿಲ್ ಮಲ್ಕೊ ನಾನಿಲ್ ಕೂತ್ಕೊಂಡಿರ್ತೀನಿ.

ಇಂದಿರಾ : ಇಲ್ಲ ನೀವ್ ನನ್ ಜೊತೇಲೆ ಇರ್ಬೇಕು
(ಎಂದು ಹೇಳಿ ಕೈ ಹಿಡಿದುಕೊಂಡು ಅಲ್ಲೇ ಮಲಗಿಕೊಂಡು)

.. ನನ್ ಜೊತೇಲೆ ಇರ್ಬೇಕು. ನಂಗ್ ಭಯಾ ಆಗ್ತಿದೆ. (ಎಂದು ಕೈ ಹಿಡಿದುಕೊಂಡಾಗ ಮೂರ್ತಿಗೆ ಏನು ಮಾಡಬೇಕೆಂದು ತೋಚದೆ ಕುಳಿತಿರುತ್ತಾನೆ, ಇತ್ತ ಇಂದಿರಾ ಭಯದ ವಾತಾವರಣದಿಂದ ಕಲ್ಪನಾ ಲೋಕಕ್ಕೆ ಹೋಗುತ್ತಾಳ)

**ನಿರ್ದೇಶಕರ ಟಿಪ್ಪಣಿ:**

**15 ಮತ್ತು 16ನೇ ದೃಶ್ಯವನ್ನು ಜೋಡಿಸಲಾಗಿದೆ. ದೃಶ್ಯ 13, 14, 15, 16, 17ರಲ್ಲಿ ಇಂದಿರಾಳ ಕಥೆ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಇಂದಿರಾಳ ಕೌಟುಂಬಿಕ ಚಿತ್ರಣವನ್ನು ಆನಂದಿ ಮತ್ತು ವ್ಯಾಸರಾಯರು ತಮ್ಮ ಕೃತ್ಯಕ್ಕೆ ಬಳಸಿಕೊಳ್ಳುವ ಹುನ್ನಾರವನ್ನು ಚಿತ್ರಕಥೆಯಲ್ಲಿ ಮತ್ತು ಕಾದಂಬರಿಯಲ್ಲಿ ವಿವರವಾಗಿ ಹೇಳಲಾಗಿತ್ತು. ಚಿತ್ರಿತ ಭಾಗದಲ್ಲಿ ಅವೆಲ್ಲವನ್ನು ಸಂಕ್ಷಿಪ್ತವಾಗಿ ಹೇಳಲಾಗಿದೆ.**

# ದೃಶ್ಯ 18

***ಹಾಡು: ಈ ಕಣ್ಣಿಗೂ ಹೆಣ್ಣಿಗೂ ಏನು ಸ್ನೇಹವೋ,***

ಈ ಕಣ್ಣಿಗೂ ಹೆಣ್ಣಿಗೂ ಏನು ಸ್ನೇಹವೋ,
ಈ ಹೆಣ್ಣಿಗೂ ಪ್ರೀತಿಗೂ ಏನು ಬಂಧವೋ,
ನೋಡಲು ಮೋಹಕ,
ಕೂಡಲು ಪ್ರೇರಕ,
ಏನು ಮಾಯವೋ,
ಈ ಕಣ್ಣಿಗೂ ಹೆಣ್ಣಿಗೂ ಏನು ಸ್ನೇಹವೋ,
ಈ ಹೆಣ್ಣಿಗೂ ಪ್ರೀತಿಗೂ ಏನು ಬಂಧವೋ.

ಮನದಾ ಕೊಳದಾ ತಿಳಿಯಾ ಜಲದ ಮೇಲೆ ಮನವೆಸೆದು,
ಸಿಗದಾ ಜಗದಾ ಸುಖದಾ ತಳಕೆ ನನ್ನಾ ಬರಸೆಳೆದು,
ಅಳುವಾ ಮೊಗದಾ ಒಳಗೇ ತೆರೆದಾ ಎದೆಗೇ ಜೊತೆಬೆಸೆದೂ,
ಇಹದಾ ಪರದಾ ಜನುಮಾಂತರದಾ ಕಥೆಯಾ ಪುಟತೆರೆದು,
ಆಕಸ್ಮಿಕ ಎಂದಳೀ ಚೆಲುವ ಬಾಲೆ,
ಅನಿರೀಕ್ಷಿತಾ ತಂದಳೀ ಒಲವ ಮಾಲೆ,
ಗಂಧದಾ ಕನ್ಯೆಯೋ ದಂತದಾ ಬೊಂಬೆಯೋ ಏನು ಮಾಯಯೋ.

ಸರಸಿ ಸರಸಿ ಚೆಲುವಿಗೆ ಅರಸಿ, ಬಂದಳೊ ನನ್ನರಸೀ,
ಕವನಾ ಕಾವ್ಯ ನಾಟ್ಯಾ ಗಮಕ ಕಲೆಗಳ ಸಿಂಗರಿಸಿ,
ಕನಸು ನನಸು ಬದುಕು ಭ್ರಮೆಯ ನಡುವೆ ಸಂಚರಿಸಿ,
ಮೌನದ ಒಡವೆ ಧರಿಸಿ ನಕ್ಕಳು ಒಲವನು ಸಿಂಪಡಿಸಿ,
ಆಕಸ್ಮಿಕ ಆಗದೀ ಪ್ರೇಮಯೋಗ,
ಅನಿರೀಕ್ಷಿತ ಅನಿಸದೀ ಪ್ರಣಯರಾಗ,
ಸ್ವರ್ಗವೀ ಸ್ಪರ್ಷವು,
ಸೌಖ್ಯವೀ ಸಂಗವೂ,
ಏನು ಮಾಯವೋ.

**ಗಾಯನ: ಡಾ. ರಾಜ್‌ಕುಮಾರ್ ಮತ್ತು ಮಂಜುಳಾ ಗುರುರಾಜ್**
**ರಚನೆ ಮತ್ತು ಸಂಗೀತ: ಹಂಸಲೇಖ**

# ದೃಶ್ಯ 19

*ರಾತ್ರಿ – ಪ್ರವಾಸಿ ಮಂದಿರದ ಒಳಗೆ*

(ಹಾಡು ಮುಕ್ತಾಯವಾಗುತ್ತಿದ್ದಂತೆ ಇಂದಿರಾ ನಿದ್ರೆಗೆ ಜಾರಿರುತ್ತಾಳೆ. ಮೂರ್ತಿ ನಿಧಾನವಾಗಿ ತನ್ನ ಕೈಯನ್ನು ಬಿಡಿಸಿಕೊಂಡು ಇಂದಿರಾಳಿಗೆ ಕಂಬಳಿಯನ್ನು ಹೊದ್ದಿಸುತ್ತಾನೆ. ನೀರನ್ನು ಕುಡಿದು ಕುರ್ಚಿಯ ಮೇಲೆ ಮಲಗುತ್ತಾನೆ)

# ದೃಶ್ಯ 20

***ಬೆಳಗ್ಗೆ – ಪ್ರವಾಸಿ ಮಂದಿರದ ಸುತ್ತ ಮುತ್ತಲಿನ ಪ್ರದೇಶ***

(ಬೆಳಿಗ್ಗೆಯ ಸೂರ್ಯೋದಯದ ಸಮಯ. ಮಲಗಿದ್ದ ಮೂರ್ತಿ ಎಚ್ಚರಗೊಳ್ಳುತ್ತಾನೆ. ತಕ್ಷಣ ಎದುರಿನ ಮಂಚದ ಕಡೆಗೆ ನೋಡುತ್ತಾನೆ. ಅಲ್ಲಿ ಇಂದಿರಾ ಇಲ್ಲದ್ದನ್ನು ನೋಡಿ ಗಲಿಬಿಲಿಯಾಗುತ್ತಾನೆ. ಹೊರಗಡೆ ಬಾಗಿಲು ತೆರೆದಿರುವುದು ಗಮನಿಸಿ ಹೊರಗೆ ಹೋಗಬೇಕೆನ್ನುವಷ್ಟರಲ್ಲಿ ಶೌಚಾಲಯದಿಂದ ನೀರಿನ ಶಬ್ಧವಾಗುತ್ತದೆ. ತಕ್ಷಣ ನಿಂತು ಇಲ್ಲೇ ಇರುವಳೆಂದು ಭಾವಿಸಿ ಸಮಾಧಾನವಾಗುತ್ತಾನೆ. ಮತ್ತೆ ಹೋಗಿ ಮಲಗಿಕೊಳ್ಳುತ್ತಾನೆ. ನಂತರ ಶೌಚಾಲಯದ ಬಾಗಿಲು ತೆರೆದಂತಾಗುತ್ತದೆ. ಮೂರ್ತಿ ತಿರುಗಿ ನೋಡಿ ಗಾಬರಿಗೊಳ್ಳುತ್ತಾನೆ. ಶೌಚಾಲಯದಿಂದ ಹೊರಬರುವ ವ್ಯಾಸರಾಯನನ್ನು ನೋಡಿ ಆಶ್ಚರ್ಯಗೊಳ್ಳುತ್ತಾನೆ. ವ್ಯಾಸರಾಯ, ಮೂರ್ತಿಯನ್ನು ನೋಡಿ ಅಣಕಿಸುವ ನಗುವನ್ನು ಬೀರುತ್ತಾನೆ. ಮೂರ್ತಿ ಕೋಪಗೊಂಡು..)

ಮೂರ್ತಿ : ನೀನ..? ಎಲ್ಲಿ ಇಂದಿರಾ?

ವ್ಯಾಸರಾಯ : ಹಾಂ ಇದಾಳೆ ಇದಾಳೆ.. ಏನ್ ಮೂರ್ತಿ ರಾಯರು, ಪ್ರಥಮ ಮಧುಚಂದ್ರ ಆನಂದವಾಗ್ ನಡೀತು ಅಂತ ಕಾಣುತ್ತೆ. ಹಾಸಿಗೆ ಮೇಲೆ ಮಲ್ಲಿಗೆ ಹೂ ಇರ್ಲಿಲ್ಲ. ಗಂಧದ ಕಡ್ಡಿ ಸುವಾಸನೆ ಬೀರ್ಲಿಲ್ಲ. ಆದ್ರೂ ಸುಖಕರವಾದ ರಾತ್ರಿ ಅನ್ನಿ. ಏನು ಮಳೆ, ಗುಡುಗು, ಮಿಂಚು, ಅಬ್ಬಬ್ಬಬ್ಬಾ ಬಡ್ಡೀ ಮಗಂದು ಮೈಕೊರೆಯೋ ಚಳಿ (ವ್ಯಂಗ್ಯವಾಗಿ ನಗುತ್ತಾನೆ)
ಯಾಕೆ? ಯಾಕ್ ಹಾಗ್ ದುರ್ಗುಟ್ಕೊಂಡು ನೋಡ್ತಾ ಇದಿರಿ.

ಮೂರ್ತಿ : ಚಂಡಾಳ ಮಗನೆ
(ವ್ಯಾಸರಾಯನನ್ನು ಎತ್ತಿ ಬಿಸಾಡುತ್ತಾನೆ).

**ನಿರ್ದೇಶಕರ ಟಿಪ್ಪಣಿ:**
**ಮೂರ್ತಿ ಅನಿರೀಕ್ಷಿತವಾಗಿ ವ್ಯಾಸರಾಯನ ಉಪಸ್ಥಿತಿಯನ್ನು ಗಮನಿಸುವುದು ಹಾಗು ಅದಕ್ಕೆ ಪ್ರತಿಕ್ರಿಯಿಸುವುದು ಈ ದೃಶ್ಯದಲ್ಲಿ ಬಹಳ ಮುಖ್ಯ.**

# ದೃಶ್ಯ 21

*ಬೆಳಗ್ಗೆ – ಪ್ರವಾಸಿ ಮಂದಿರದ ಸುತ್ತ ಮುತ್ತಲಿನ ಪ್ರದೇಶ (ಹೊಡೆದಾಟ)*



(ಮೂರ್ತಿ ಜೋರಾಗಿ ಎಸೆದ ಕಾರಣ ವ್ಯಾಸರಾಯ ಬಾಗಿಲ ಬಳಿ ರಭಸವಾಗಿ ಬಿದ್ದ ವ್ಯಾಸರಾಯ ಮತ್ತೆ ಮೂರ್ತಿ ಮೇಲೆರಗಲು ಬರುತ್ತಾನೆ. ಇಂದಿರಾಳಿಗೆ ಬಾಯಿಗೆ ಬಟ್ಟೆ ಕಟ್ಟಿಬಿಟ್ಟಿರುತ್ತಾರೆ. ಬಿದ್ದ ವ್ಯಾಸರಾಯ ಮತ್ತೆ ಹೊಡೆಯಲು ಬಂದಾಗ ಮೂರ್ತಿ ಅವನಿಗೆ ಹೊಡೆಯುತ್ತಾನೆ. ನಂತರ ವ್ಯಾಸರಾಯನ ಕಡೆಯವರು ಮೂರ್ತಿಯ ಮೇಲೆ ಎರಗುತ್ತಾರೆ. ಮೂರ್ತಿ ಇತರರಿಗೆ ಹೊಡೆಯುವ ಸಂಧರ್ಭದಲ್ಲಿ ವ್ಯಾಸರಾಯ ಹಿಂದಿನಿಂದ ಬಂದು ಮೂರ್ತಿಯ ತಲೆಗೆ ದೊಣ್ಣೆಯಿಂದ ಹೊಡೆದು ತೀವ್ರವಾದ ಗಾಯಮಾಡುತ್ತಾನೆ. ಮತ್ತೆ ಮತ್ತೆ ಹೊಡೆದು ಘಾಸಿಮಾಡಿ ಇಂದಿರಾಳನ್ನು ಅಪಹರಿಸಿಕೊಂಡು ಹೋಗುತ್ತಾನೆ. ಮೂರ್ತಿ ಪ್ರಜ್ಞೆ ತಪ್ಪಿ ಕೆಳಗೆ ಬೀಳುತ್ತಾನೆ)

# ದೃಶ್ಯ 22

*ಹಗಲು – ಒಳಾಂಗಣ – ಮೂರ್ತಿ ಮನೆ*

**[ತಲೆಗೆ ಪೆಟ್ಟು ಬಿದ್ದು ಕೆಳಗೆ ಕುಸಿಯುವ ಮೂರ್ತಿಯನ್ನು ಹಾಗು ಸ್ವಲ್ಪ ದಿನಗಳ ನಂತರ ಚೇತರಿಸಿಕೊಂಡು ತಲೆಗೆ ಕಟ್ಟಿರುವ ಬ್ಯಾಂಡೇಜ್ ಕಳಚುತ್ತಿರುವ ಮೂರ್ತಿಯ ನಡುವಿನ ದಿನಗಳ ಅಂತರವನ್ನು ತೋರಿಸಲು ಡಿಸಾಲ್ವ್ ಅನ್ನು ಟೈಮ್ ಲ್ಯಾಪ್ಸ್ ಆಗಿ ಬಳಸಲಾಗಿದೆ]**



(ಮೂರ್ತಿ ತಲೆಗೆ ಕಟ್ಟಿರುವ ಗಾಯದ ಪಟ್ಟಿಯನ್ನು ಬಿಚ್ಚುತ್ತಿದ್ದಾನೆ. ಬಿಚ್ಚಿದ ನಂತರ ಗಾಯವನ್ನು ನೋಡಿ ಮೂರ್ತಿ ತಾಯಿ ಗಾಬರಿಗೊಂಡು..)

ಮೂರ್ತಿ ತಾಯಿ : ಅಯ್ಯಯ್ಯೋ ತುಂಬ ಏಟು ಬಿದ್ದಿದೆಯಾ ಕಂದ?

ಮೂರ್ತಿ : ಇಲ್ಲಮ್ಮಾ, ಬರೀ ಮೂಗೇಟು ಅಷ್ಟೇ.

ಮೂರ್ತಿ ತಾಯಿ : ನೀನ್ಯಾಕಪ್ಪ ಅಲ್ಲಿಗ್ಹೋಗೋಕ್ ಹೋದೆ. ಅದ್ಯಾವ ಹುಡುಗೀನೊ.. ಅವನ್ಯಾರೊ.. ಏನ್ ಕಥೆನೊ.. ನಿನಗೇನಾದ್ರು ಹೆಚ್ಚುಕಡಿಮೆ ಆಗಿದ್ರೆ ನನ್ ಗತಿ ಏನಪ್ಪಾ?

ಮೂರ್ತಿ : ಹಾಗಾದ್ರೆ ನಾನ್ ಮಾಡಿದ್ದು ತಪ್ಪು ಅಂತೀಯಾಮ್ಮಾ?

ಮೂರ್ತಿ ತಾಯಿ : ತಪ್ಪೂಂತ ಹೇಳ್ತಾಯಿಲ್ಲ ರಾಜಾ. ಆದ್ರೆ ಕೆಲವು ಸಂಧರ್ಭಗಳಲ್ಲಿ ನಮ್ಮ ಪರಿಸ್ಥಿತಿನು ಯೋಚ್ನೆ ಮಾಡ್ಬೇಕಲ್ವ.

ಮೂರ್ತಿ : ಅದು ಸರಿಯಮ್ಮ. ಆದ್ರೂ ಆ ಹುಡುಗಿ, ಅವಳ

ಮುಗ್ಧಮುಖ ಅದನ್ನ ನನ್ ಕೈನಲ್ಲಿ ಮರೆಯೋಕೆ ಆಗ್ತಿಲ್ಲಮ್ಮ. ನಮ್ಮಮ್ಮನ್ ನೋಡ್ಬೇಕು ನಮ್ಮಮ್ಮನ್ ನೋಡ್ಬೇಕು ನನ್ ಕರ್ಕೊಂಡ್ ಹೋಗ್ತೀರಾ ಅಂದ್ಲು. ನಾನೇನೊ ನಿನ್ನ ನೋಡ್ಬಿಟ್ಟೆ, ಆದ್ರೆ ಪಾಪ ಅವ್ಳು? ಈಗ ಅವ್ಳೆಲ್ಲಿದ್ದಾಳೊ, ಅದ್ ಹ್ಯಾಗಿದಾಳೊ, ಅದೇನು ಕಥೆನೊ. (ಎಂದು ಯೋಚಿಸುತ್ತ ನಿಲ್ಲುತ್ತಾನೆ)

**[ಮೂರ್ತಿಗೆ ಇಂದಿರಾಳ ಬಗೆಗಿರುವ ಕಾಳಜಿ ಮತ್ತು ಸಹಾನುಭೂತಿಯನ್ನು ತಿಳಿಸಲು ಸಮಂಜಸವಾದ ಹಿನ್ನೆಲೆ ಸಂಗೀತ ಬಳಸಲಾಗಿದೆ]**

ಮೂರ್ತಿ ತಾಯಿ : ಅಯ್ಯಯ್ಯೋ ನತದೃಷ್ಟ ಹುಡುಗಿ ಪಾಪ. ಅದ್ರ ಹಣೇಲಿ ಭಗವಂತ ಏನ್ ಬರ್ದಿದಾನೋ ಏನೊ. (ಎಂದು ಹೇಳಿ ಮೂರ್ತಿ ತಾಯಿ ಒಳಗಡೆ ಹೋಗುತ್ತಾರೆ. ಮೂರ್ತಿ ಯೋಚಿಸುತ್ತ ಅಲ್ಲೇ ತಲ್ಲೀನನಾಗುತ್ತಾನೆ.)

## ದೃಶ್ಯ 23

*(ಚಿತ್ರದಿಂದ ತೆಗೆದು ಹಾಕಲಾಗಿದೆ.)*
*ಹಗಲು – ರೈಲು ಬೋಗಿಯ ಒಳಗೆ (ಚಲಿಸುತ್ತಿರುವ ರೈಲು)*

(ರೈಲಿನಲ್ಲಿ ಒಂಟಿಯಾಗಿ ಕೂತ ಮೂರ್ತಿ. ಚಿಂತಾಕ್ರಾಂತ ಮುಖ. ರೈಲು ಚಲಿಸುತ್ತಿದೆ. ಬ್ಯಾಕ್‌ಗ್ರೌಂಡಿನಲ್ಲಿ "ಅನುರಾಗದ ಭೋಗ" ಹಾಡು)

# ದೃಶ್ಯ 24

*(ಚಿತ್ರದಿಂದ ತೆಗೆದು ಹಾಕಲಾಗಿದೆ.)*
*ಹಗಲು – ಪ್ರವಾಸಿ ಮಂದಿರದ ಒಳಗೆ*

(ಮೂರ್ತಿ ಪ್ರವಾಸಿ ಮಂದಿರದ ಹತ್ತಿರ ಬರುತ್ತಾನೆ. ಹಿಂದಿರುಗಿ ನೋಡಿದರೆ ಇಂದಿರಾ ಅಂದು ನಡೆದು ಬಂದಂತೆ, ಮೆಟ್ಟಿಲ ಬಳಿ ಆಕೆ ನಿಂತಂತೆ, ಬಾಗಿಲ ಬಳಿ ಒಳಗೆ ಬಂದಂತೆ, ಮಂಚದ ಬಳಿ ಕಾಲಿಗೆ ಬಿದ್ದಂತೆ, ಮಂಚದಲ್ಲಿ ಮಲಗಿದ್ದಂತೆ, ಕಥೆ ಹೇಳಿದಂತೆ ಈ ಗುಂಗಿನಲ್ಲಿಯೇ ಇರುತ್ತಾನೆ.)

ಮೇಟಿ : ಓ ನೀವಾ? ಏನ್ ಸ್ವಾಮಿ ಚೆನ್ನಾಗಿದ್ದೀರ? ಅಲ್ಲ ತಿರುಗಿ ಇಲ್ಲಿಗ್ ಯಾಕ್ ಬರೋಕ್ ಹೋದ್ರಿ. ಅವತ್ತು ಪೋಲೀಸ್ನೋರನ್ನ ಕರ್ಕಂಬರಾಣ ಅಂತ ಹೋಗಿ ಬರೊದ್ರೊಳಗೆ ಒಬ್ಬರೂ ಇಲ್ಲ. ಏನ್ ಸ್ವಾಮಿ ಹಂಗ್ ಗಲಾಟೆ ಆಗೋಯ್ತಲ್ಲ. ಅವ್ರೆಲ್ಲ ಯಾರು?

ಮೂರ್ತಿ : ಯಾರೋ ಪುಂಡ್ರು, ಪೋಕ್ರಿಗಳು.. ಆ ಹುಡ್ಗಿ.. (ಎಂದು ಬಾಯಿ ತೆಗೆಯುತ್ತದ್ದಂತೆಯೇ)

ಮೇಟಿ : ನಾನ್ ಅಂದ್ಕೊಂಡೆ ಇದು ಹುಡ್ಗಿಕೇಸೇ ಅಂತ. ಬಂದೆ ಇರಿ.. (ಮೇಟಿ ಒಳಗಿನಿಂದ ಬರುವಷ್ಟರಲ್ಲಿ ಮೂರ್ತಿ ಗೇಟ್‌ಬಳಿನಡೆಯುತ್ತಿರುತ್ತಾನೆ. ಮೇಟಿಬ್ಯಾಗ್‌ತಂದು..)
.. ಸ್ವಾಮಿ, ತಗೊಳಿ. ಆವತ್ತು ಇಲ್ಲೇ ಬಿಟ್ಟು ಹೊಂಟೋಗಿದ್ದೀರಿ. (ಮೂರ್ತಿಗೆ ಇಂದಿರಾಳ ನೆನಪು ಬರುತ್ತದೆ)
.. ಎ.. ಏನೂ ತಗಂಡಿಲ್ಲ ಸ್ವಾಮಿ. ಎಂಗಿತ್ತೋ ಅಂಗೇ ಇಟ್ಟದ್ದೆ. (ಮೂರ್ತಿ ಜೇಬಿನಿಂದ ಹಣ ತಗೆದು ಕೊಡುತ್ತಾನೆ. ಮೇಟಿ ಸಲ್ಯೂಟ್ ಹೊಡೆಯುತ್ತಾನೆ.)

ಮೇಟಿ : ಈ ಜಾಗವನ್ನು ಮರೀಬೇಡಿ ಸ್ವಾಮಿ, ಆಗಾಗ ಬರ್ತಿರಿ. (ಮೂರ್ತಿ ಸಣ್ಣದಾಗಿ ನಗುತ್ತಾನೆ)

# ದೃಶ್ಯ 25

***ಹಗಲು – ಪೋಲೀಸ್ ಠಾಣೆಯ ಒಳಗೆ***

(ಎಸ್.ಐ. ರಾಜ್‌ಗೋಪಾಲ್ ಎದುರು ಚಿಂತಾಕ್ರಾಂತನಾಗಿ ಕುಳಿತಿರುವ ಮೂರ್ತಿ)

ರಾಜ್‌ಗೋಪಾಲ್ : ಛೇ, ಎಂಥಾ ಕೆಲ್ಸ ಆಗೋಯ್ತ್ರೀ? ಒಂದೊಂದ್ಸಲ ನಮ್ಮ ಬುದ್ಧೀನೆ ಮಣ್ಣು ತಿಂದ್ಹೋಗುತ್ತೆ. ನಾನು ನೀವ್ ವಿಷ್ ಮಾಡ್ತಿದಿರಾ ಅಂತ ತಿಳ್ಕೊಂಬಿಟ್ಟೆ. ಆ ವ್ಯಾಸರಾಯ ಟೋಪಿ ಹಾಕೋದ್ರಲ್ಲಿ ನಿಸ್ಸೀಮ. ತಲೆಹಿಡುಕ ಬಡ್ಡೀಮಗ. ಒಂದ್ ಹೆಣ್ಣು ಆ ಪಾಪಕೂಪದಲ್ಲಿ ಸಿಕ್ಹಾಕೊಂಡ್ರೆ ವಾಪಾಸ್ ಬರೋದೇ ಬಹಳ ಕಷ್ಟ. ಛೇ..

ಮೂರ್ತಿ : (ಬೇಸರದಲ್ಲಿ ಕುಳಿತಿದ್ದ ಮೂರ್ತಿ)
ನಾನು ಆ ಹುಡುಗೀನ ಆ ಚಂಡಾಳನ ಕೈಯಿಂದ ತಪ್ಸೋದಿಕ್ಕೆ ಶಕ್ತಿಮೀರಿ ಹೋರಾಡ್ದೆ ಸರ್. ಆದ್ರೂ ಕೈತಪ್ಪ್ಹೋಯ್ತು. ಒಂದು ಹುಡುಗೀನ ಕಾಪಾಡೋಕಾಗ್ಲಿಲ್ವಲ್ಲಾ ಅನ್ನೊ ಸಂಕಟ ಇವತ್ತಿಗೂ ನನ್ನ ಕಾಡ್ತಾ ಇದೆ. ಏನ್ ಸಾರ್ ಇದಕ್ಕೇನು ಮಾಡಾಕಾಗೋದಿಲ್ವೇ. ಏನಾದ್ರು ಉಪಾಯ ಇದ್ರೆ ಹೇಳಿ ಸರ್ ನಾನು ನಿಮ್ ಸಹಾಯಕ್ಕೆ ಬರ್ತಿನಿ.

ರಾಜ್‌ಗೋಪಾಲ್ : ಮಿ. ಮೂರ್ತಿ ಆ ಹುಡುಗಿ ನಿಮ್ಹತ್ರ ಏನಾದ್ರು ಹೇಳಿದ್ಲ. ಊರು, ಕೇರಿ, ಬಂಧು ಬಳಗಾಂತೇನಾದ್ರು..?

ಮೂರ್ತಿ : ಹೇಳಿದ್ಲು ಸಾರ್. ಆಕೆಗೆ ತಾಯಿ ಇದಾರಂತೆ. ಇಬ್ಬರು ತಂಗಿದೀರು ಇದಾರಂತೆ. ಊರು..
(ಯೋಚಿಸಿ ಜ್ಞಾಪಿಸಿಕೊಂಡು) ..ನವಿಲುಕೆರೆ.

ರಾಜ್‌ಗೋಪಾಲ್ : (ಹೆಸರು ಕೇಳುತ್ತಿದ್ದಂತೆ ಗೊತ್ತಾದಂತೆ)
ನವಿಲುಕೆರೆ.. ಸಾಗರದತ್ರ.

# ದೃಶ್ಯ 26

*ಹಗಲು – ಇಂದಿರಾ ಮನೆ (ನವಿಲುಕೆರೆ)*

(ಇಂದಿರಾ ತಾಯಿ, ಮಗಳು ಈ ರೀತಿ ಕಾಣೆಯಾದ್ದದ್ದನ್ನು ಕೇಳಿ ತೀವ್ರವಾಗಿ ರೋಧಿಸುತ್ತಿದ್ದಾಳೆ. ಎದುರಿಗೆ ಮೂರ್ತಿ ಮತ್ತು ರಾಜ್‌ಗೋಪಾಲ್ ನಿಂತಿದ್ದಾರೆ.)

ರಾಜೀವಿ : ನಾನ್ ಎಂಥಾ ಕೆಲ್ಸ ಮಾಡ್ಬಿಟ್ಟೆ ನನ್ ಕಂದಾ, ನನ್ ಕೈಯಾರ ನಿನ್ ಬಾಳ್ ಹಾಳ್ ಮಾಡ್ಬಿಟ್ಟೆ. ಆ ಕಟುಕನ ಕೈಗೆ ನಿನ್ನ ಕೊಟ್ನಲ್ಲ. (ಹಣೆ ಚಚ್ಚಿಕೊಂಡು ಅಳುತ್ತಾ..) ನಾನ್ ಪಾಪಿ ಕಣೆ ಇಂದ್ರಾ ನಾನ್ ಪಾಪಿ.
(ಮಗಳು ಸಮಾಧಾನ ಪಡಿಸುತ್ತಾಳೆ)

ಮಗಳು : ಅಳ್ಬೇಡ.
(ಆನಂದಿ ಅಲ್ಲಿಗೆ ಬಂದು ರಾಜ್‌ಗೋಪಾಲ್‌ನನ್ನು ನೋಡಿ ನಾಟಕವಾಡಲು ಆರಂಭಿಸುತ್ತಾಳೆ)

ಆನಂದಿ : ಲೇ ನನ ಮಗನೆ ವ್ಯಾಸರಾಯ, ನೀನಿಂಥ ಕೆಲ್ಸ ಮಾಡ್ತೀಯ ಅಂಥ ನಾನಗ್ಗೊತ್ತಿರ್ಲಿಲ್ಲ ಕಣೋ. ಅಯ್ಯೋ ನಿನ್ನ ಮನೆ ಹಾಳಾಗ.
(ಮಣ್ಣನ್ನು ಎತ್ತಿ ಗಾಳಿಯಲ್ಲಿ ತೂರುತ್ತಾಳೆ)
.. ನಿನ್ನ ಮನೆ ಎಕ್ಕುಟ್ಹೋಗ. ಅಯ್ಯೋ ಅಕ್ಕ ರಾಜೀವಕ್ಕ
(ರಾಜೀವಮ್ಮನ ಬಳಿ ಬಂದು)
.. ಲೇ ವ್ಯಾಸರಾಯ ನೀನ್ ನನ್ ಕೈಗಿನೊಂದ್ಸಲ ಸಿಕ್ಕು ನನ್ನ್ ಜೋಡ್ನಲ್ ನಾನಿನಗ್ ಹೊಡಿಲಲ್ಲ ಅಂದ್ರೆ ನಾನ್ ನಮಪ್ಪನಿಗ್ ಹುಟ್ಟಿದ್ ಮಗಳೇ ಅಲ್ಲ ಕಣೋ. ಅಕ್ಕ ರಾಜೀವಕ್ಕ.
(ಎಂದು ಅವಳ ಹತ್ತಿರ ಹೋಗುತ್ತಿದ್ದಂತೆಯೇ ರಾಜ್‌ಗೋಪಾಲ್..)

ರಾಜ್ ಗೋಪಾಲ್ : ಹೇಯ್ ಹೊಡಿಬೇಕಾಗಿರೋದು ಅವ್ನಿಗಲ್ಲ ಕಣೆ, ನಿಂಗೆ. ನೀನೆಷ್ಟು ಜನಕ್ ಹುಟ್ಟಿದಿಯಾ? ಈ ನಾಟಕ, ಸಿನಿಮಾ, ಟಿವಿ ಎಲ್ಲ ನನ್ಹತ್ರ ಬಿಚ್ಚ್‌ಬೇಡ. ಬೊಗಳು, ಎಲ್ಲೇ ವ್ಯಾಸರಾಯ?

ಆನಂದಿ : ಏನ್ ಸಾರ್ ಹಂಗಂತಿರಾ? ವ್ಯಾಸರಾಯ್ನೊ ಪಾಸರಾಯ್ನೊ ನಂಗೊತ್ತಿಲ್ಲ.
(ರಾಜ್‌ಗೋಪಾಲ್, ಆನಂದಿ ಕೆನ್ನೆಗೆ ಹೊಡೆಯುತ್ತಾನೆ, ಆಗ ಮೂರ್ತಿ ರಾಜ್ ಗೋಪಾಲ್‌ರನ್ನು ತಡೆದು..)

**[ವಂಚಕಿ ಆನಂದಿಗೆ ಪೊಲೀಸ್ ಇನ್ಸ್‌ಪೆಕ್ಟರ್ ರಾಜ್‌ಗೋಪಾಲ್ ಹೊಡೆಯುವುದನ್ನು ವಿರೋಧಿಸುವ ಮೂರ್ತಿಯ ವರ್ತನೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಚಿತ್ರದಲ್ಲಿನ ಮೂರ್ತಿಯ ವ್ಯಕ್ತಿತ್ವ ಹಾಗು ಸ್ತ್ರೀಯರ ಬಗೆಗಿನ ಆತನ ಧೋರಣೆಯನ್ನು ತಿಳಿಯಬಹುದು]**

| | | |
|---|---|---|
| ಮೂರ್ತಿ | : | ಸರ್ ಪ್ಲೀಸ್ ಪ್ಲೀಸ್ ದಯವಿಟ್ಟು ಹೆಣ್ಣು ಮಗಳ ಮೇಲೆ ಕೈ ಮಾಡ್ಬೇಡಿ. |
| ರಾಜ್‌ಗೋಪಾಲ್ | : | ಇವಳೇನ್ರಿ ಹೆಣ್ ಮಗಳು. ಇವಳೂ ಮರಕ್ಕಂಟಿರೋ ಗೆದ್ದಲಿನ ಹುಳ ಇದ್ದಾ್ಗೆ. ಸ್ತ್ರೀ ಕುಲಾನೆ ನಾಶ ಮಾಡೋಕೊಂಟಿರೊ ಪಾಪಿ. ಹೇಯ್ ನಿನ್ ಜಾತಕ ಪೂರ್ತಿ ನನ್ಹತ್ರ ಇದೆ. ಬೊಗಳು ಎಲ್ಲೇ ವ್ಯಾಸರಾಯ. |
| ಆನಂದಿ | : | ನನಿಗೊತ್ತಿಲ್ಲ, ನನಿಗೊತ್ತಿಲ್ಲ ಬುಧ್ಧಿ. ಆ ದೇವ್ರಾಣೆಗ್ಲು ನನಿಗ್ಗೊತ್ತಿಲ್ಲ. |
| ರಾಜ್‌ಗೋಪಾಲ್ | : | ಗೊತ್ತಿಲ್ಲ? |
| ಆನಂದಿ | : | ನನ್ನ ಕಣ್ಣಾಣೆಗ್ಲು ನನಿಗ್ಗೊತ್ತಿಲ್ಲ. |
| ರಾಜ್‌ಗೋಪಾಲ್ | : | ನಿನಗೆ ಇಲ್ಲಲ್ಲ ಅಲ್ಲಿ ಬಾಯಿ ಬಿಡಿಸ್ತೀನಿ.. ನಡಿ.<br>(ಅವಳ ಕೈ ಹಿಡಿದುಕೊಂಡು ಎಳೆದೊಯ್ಯುತ್ತಾನೆ) |
| ಆನಂದಿ | : | ಅಯ್ಯಯ್ಯೋ, ಯಾರಾದ್ರು ಸಹಾಯ ಮಾಡ್ರಪ್ಪ ನನ್ನ ಎಳ್ಕೊಂಡ್ ಹೋಗ್ತಿದಾರೆ. ಅಯ್ಯೋ. |
| ರಾಜೀವಮ್ಮ | : | (ರಾಜ್‌ಗೋಪಾಲ್ ಹತ್ತಿರ ಬರುತ್ತಾಳೆ)<br>.. ಸ್ವಾಮಿ, ನನ್ನಪ್ಪ ತಂದೆ<br>(ರಾಜ್‌ಗೋಪಾಲ್‌ನ ಕಾಲನ್ನು ಹಿಡಿದು ಅಂಗಲಾಚುತ್ತಾಳೆ.)<br>.. ನನ್ನ ಮಗಳ್ನ ಉಳ್ಸ್ಕೊಡಪ್ಪ. ನನ್ನ ಕಂದನ್ನ ಉಳ್ಸ್ಕೊಡು ನನ್ನಪ್ಪ.<br>(ಜೋರಾಗಿ ಅಳುತ್ತಾಳೆ. ರಾಜ್‌ಗೋಪಾಲ್ ಅವಳನ್ನು ಸಮಾಧಾನ ಪಡಿಸುತ್ತಾನೆ)<br>.. ನನ್ನ ಮಗಳ ತಲೆ ಮೇಲೆ ನಾನೇ ಕಲ್ ಹಾಕ್ಬಿಟ್ಟೆ. |
| ರಾಜ್‌ಗೋಪಾಲ್ | : | ಹುಡುಕೋದಕ್ ಆದಷ್ಟು ಪ್ರಯತ್ನ ಪಡ್ತೀವಿ. ಸಮಾಧಾನ ಮಾಡ್ಕೋ ತಾಯಿ.<br>(ಅಳುತ್ತಲೇ ಇರುವ ರಾಜೀವಮ್ಮ ಮತ್ತು ಇಂದಿರಾಳ ತಂಗಿಯರ ಕಡೆಗೆ ತಿರುಗಿ ನೋಡಿ ಮೂರ್ತಿ ತುಂಬ ದುಃಖಿತನಾಗಿ ಮರುಕ ಪಡುತ್ತಾ, ದುಃಖಿಸುತ್ತ ಯೋಚಿಸುತ್ತಾ ನಿಲ್ಲುತ್ತಾನೆ) |

# ದೃಶ್ಯ 27

*ಹಸ್ತಪ್ರತಿಯಲ್ಲಿ (ಚಲನಚಿತ್ರದಲ್ಲಿ ತೆಗೆಯಲಾಗಿದೆ)*
*ಹಗಲು – ಮೂರ್ತಿ ಮನೆ*

| | | |
|---|---|---|
| | | *(ಮೂರ್ತಿ ಬ್ಯಾಗನ್ನ ಹಿಡಿದುಕೊಂಡು ಬರುತ್ತಾನೆ. ತಾಯಿ ಬಂದು ಬಾಗಿಲನ್ನು ತೆರೆಯುತ್ತಾಳೆ)* |
| *ತಾಯಿ* | : | *ಮೂರ್ತಿ ಎಲ್ಲಪ್ಪ ಹೊಟ್ಹೋದೆ ನೀನು? ಒಂದು ಮಾತು ಹೇಳಿ ಹೋಗಿದ್ರೆ ನನ್ನ ಮನಸ್ಸಿಗೂ ನೆಮ್ಮದಿ ಇರೋದು.* |
| | | *(ಮೂರ್ತಿ ಕೈಯಲ್ಲಿನ ಬ್ಯಾಗು ತೋರಿಸಿ)* |
| *ಮೂರ್ತಿ* | : | *ಟಿ.ಬಿ.ನಲ್ಲಿ ಅವತ್ತು ಬ್ಯಾಗಿ ಮರ್ತು ಬಂದಿದ್ನಮ್ಮ. ಬಟ್ಟೆ ಎಲ್ಲ ಅದ್ರಲ್ಲೆ ಇತ್ತು. ತರೋಕೆ ಅಂತ ಹೋದೆ.* |
| *ತಾಯಿ* | : | *30 ರೂಪಾಯಿ ಬ್ಯಾಗಿಗೋಸ್ಕರ 3600 ಕಿಲೋ ಮೀಟರ್ ಹೋಗೋದಾ? ಬ್ಯಾಗ್ ಹೋದ್ರೆ ಅಷ್ಟೇ ಹೋಯ್ತು.* |
| *ಮೂರ್ತಿ* | : | *ಈಗೇನಾಯ್ತು ಬಿಡು.* |
| *ತಾಯಿ* | : | *ಹಂಗಲ್ಲ ಕಣೋ, ಆ ಹುಡುಗಿ ಕಥೆ ಆದ್ಮೇಲೆ ನಿನ್ನ ಮನಸ್ಸು ಮನಸಾಗಿ ಉಳ್ದಿಲ್ಲ. ಹೇಳಿದ್ರೆ ನಾನು ಜೊತೇಲಿ ಬರ್ತಾ ಇದ್ದೆ. ಸರಿ ಒಳ್ಗೆ ಬಾ.* |
| | | *(ಮೂರ್ತಿ ಮತ್ತು ತಾಯಿ ಇಬ್ಬರೂ ಒಳಗೆ ಬರುತ್ತಾರೆ. ಅಲ್ಲಿ ಮೂರ್ತಿಯ ಸ್ನೇಹಿತರು ಬಂದಿರುತ್ತಾರೆ.)* |

*(ಚಲನಚಿತ್ರದಲ್ಲಿ ಸೇರಿಸಲಾಗಿದೆ)*
*ಹಗಲು – ಮೂರ್ತಿ ಮನೆಯ ಒಳಗೆ*

| | | |
|---|---|---|
| ನಟರಾಜು | : | ಅಲ್ವೋ ಮೂರ್ತಿ.. ನೀನೆಲ್ಲೊಗ್ತೀಯ, ಎಲ್ಲಿಗ್ ಬರ್ತೀಯಾ ಅಂತಾ ನಾವ್ ಕೇಳ್ತಾ ಇಲ್ಲ, ಹೋಗು. ಕಾಲು ನಿಂದು, ಕಾಲಲ್ಲಿರೊ ಶಕ್ತಿನು ನಿಂದು. ಆದ್ರೆ ನಮ್ಹತ್ರ ಒಂದ್ ಮಾತ್ ಹೇಳ್ಹೋಗ್ಬಾರ್ದಾಗಿತ್ತ? |
| ಶ್ರೀಧರ | : | ಏನಯ್ಯ ನಿಂಗೋಸ್ಕರ ಊರೆಲ್ಲ ಹುಡುಕಾಡ್ಬಿಟ್ವಲ್ಲ. ಪೋಲೀಸ್ ಕಂಪ್ಲೈಂಟ್ ಕೊಡೋದೊಂದ್ ಬಾಕಿ. |
| ಶ್ರೀಕಾಂತ | : | ಗೆಳೆಯರ ಹತ್ರಾನು ಗುಟ್ಟಾ? ಅಮ್ಮ ಎಲ್ಲ ಕಥೆ ಹೇಳಿದಾರೆ. |
| ಮೂರ್ತಿ | : | ಈಗ್ ನೀವು ದಾರಿ ಕೊಡ್ತೀರೊ ಇಲ್ವೊ? |

ನಟರಾಜು : ಅದೆಲ್ಲ ಆಗಲ್ಲ, ನಮ್ ಪ್ರಶ್ನೆಗೆ ಉತ್ತರ ಕೊಡು.

ಮೂರ್ತಿ : ಉತ್ತರ ಕೊಡ್ಬೇಕ? ಕೊಡ್ಲೇ ಬೇಕಾ?
(ಎಂದು ಹೇಳಿ ಮೂವರನ್ನು ದೂಕಿಕೊಂಡು ಒಳಗೆ ಹೋಗುತ್ತಾನೆ)

ನಟರಾಜು : ಏ ನಿಂತ್ಕೊಳಯ್ಯ.

ಶ್ರೀಕಾಂತ : ಮೊದ್ಲು ನಮ್ ಮಾತಿಗೆ ಜವಾಬ್ ಕೊಡು.

ನಟರಾಜು : ಶ್ರೀಧರ, ಶ್ರೀಕಾಂತ ನೀವಿಬ್ರು ಒಂದೈದ್ ನಿಮ್ಮ ಬಾಯ್ ಮುಚ್ಕೋಕೆ ಏನಯ್ಯ ತಗೋತಿರಾ ಬಾಡಿಗೆ? ಈಗ್ತಾನೆ ಸುಸ್ತಾಗ್ ಬಂದಿದಾನೆ. ಸ್ವಲ್ಪ ಸುಧಾರ್ಸ್ಕೊಳ್ಳಿ ಬಿಡಿ. (ಮೂರ್ತಿಯ ತೋಳನ್ನು ಹಿಡಿದು) .. ನೀನ್ ಬಾ ಬಾ ಕೂತ್ಕೊ, ಕೂತ್ಕೊಪಾ. ಬಾ.. ಯಾವೂರ್ ಟಿ.ಬಿ ಅಂದೆ?

ಮೂರ್ತಿ : ಅರಸಾಳು.

ಶ್ರೀಧರ : ಅರಸಾಳು.. (ನಟರಾಜುಗೆ..) ಏನಯ್ಯಾ.. ನಾವಿಬ್ರು ಎಲ್ಲಾದ್ರು ಹೋಗಿದ್ವಾ?

ನಟರಾಜು : ಅಯ್ಯೋ ನನ್ ಕರ್ಮ. ನಿನ್ನ ಕಟ್ಕೊಂಡು ನಾನ್ ಮಾಡೋದೇನಿದೆ ಅಲ್ಲಿ.

ಶ್ರೀಕಾಂತ : ಈಗ ಹ್ಯಾಗು ಗೊತಾಯ್ತಲ್ಲ. ಮುಂದೆ ಜೊತೆ ಮಾಡ್ಕೊಂಡೋದ್ರೆ ಅಲ್ಲಿ ಉಳಬಹುದು ಅಂತ.

ನಟರಾಜು : ಹೇಯ್ (ಎಂದು ಶ್ರೀಕಾಂತನಿಗೆ ತಲೆಯ ಮೇಲೆ ಹೊಡೆಯುತ್ತಾನೆ)
.. ಮುಂದೆ ಅಂದ್ರೆ ಟೆಂಪರೊರಿ ಜೊತೆ ಅಲ್ಲ

ಶ್ರೀಕಾಂತ : ಮತ್ತೆ?

ನಟರಾಜು : ಪರ್ಮನೆಂಟ್ ಜೊತೆ ಹನಿಮೂನು ಅದು ಇದು ಅಂತ ಹೋಗೋದು.
(ಎಲ್ಲರೂ ನಗುತ್ತಿರುವಾಗ ಮೂರ್ತಿ ಮಾತ್ರ ಗಂಭೀರವಾಗಿರುವುದನ್ನು ಕಂಡು..)

ನಟರಾಜು : ಮೂರ್ತಿ, ಯಾಕೊ ಒಂಥರಾ ಇದಿಯಾ?

ಶ್ರೀಧರ : ಏನಪ್ಪ, ಟಿ.ಬಿ ಗೀಬಿ ಅಂತ ಏನಾದ್ರು ತಲೆ ಕೆಡ್ಸ್ಕೊಂಡಿದಿಯಾ?

ಶ್ರೀಕಾಂತ : ಮಾತಾಡಯ್ಯ

ಮೂರ್ತಿ : ಏನಪ್ಪ ಮಾತಾಡ್ಲಿ ನಾನು? ಎಲ್ಲಾ ಮಾತ್ನೂ ನೀವೆ ಆಡ್ತಿದಿರಲ್ರಯ್ಯ.

ನಟರಾಜು : (ಶ್ರೀಧರ, ಶ್ರೀಕಾಂತನನ್ನು ನೋಡಿ)
ಯಾಕೊ, ಮೂರ್ತಿ ಮೂಡ್ ಸರಿಯಿಲ್ಲ.

ಶ್ರೀಧರ : ಅದಿಕ್ಕೆ?

| | | |
|---|---|---|
| ನಟರಾಜು | : | ಅದಿಕ್ಕೆ, ಒಂದ್ ಪೆಗ್ಗು ಏರಿಸ್ಬಿಟ್ರೆ.<br>(ಶ್ರೀಧರ, ಶ್ರೀಕಾಂತ ಖುಷಿಯಾಗುತ್ತಾರೆ. ಆದರೆ ಮೂರ್ತಿ ಕೋಪಗೊಂಡು..) |
| ಮೂರ್ತಿ | : | ನಿಮ್ಗೆಲ್ಲ ನಾಲಕ್ ತದುಕಿದ್ರೆ ಇವಾಗ. |
| ನಟರಾಜು | : | ಅದೂ ಆಗ್ಬಹುದು. ಆದ್ರೆ ಒಂದ್ಸಲ ನಕ್ಕುಬಿಡು. |
| ಮೂರ್ತಿ | : | ನೀವಿಲ್ಲಿಂದ ತೊಲ್ಗ್ಹೋಗಿ ಮತ್ತೆ ನಂಗ್ ಸ್ವಲ್ಪ ನೆಮ್ದಿ ಸಿಗುತ್ತೆ. |
| ನಟರಾಜು | : | ನೀನ್ ಬಾಯ್ ತುಂಬ ನಕ್ಕಬಿಡು ನಾವ್ ಹಂಗೇ ತೊಲ್ಗ್ಹೋಗ್ ಬಿಡ್ತಿವಿ. |
| ಮೂರ್ತಿ | : | (ತಲೆ ಚಚ್ಚಿಕೊಂಡು) ನನ್ನ ಕರ್ಮ, ನನ್ನ ಕರ್ಮ. |
| ನಟರಾಜು | : | ಹ್ಹಾ ಹ್ಹಾ, ಎಲ್ಲಿ, ಒಂದ್ಸಲ ನಗು, ನನ್ನ್ ರಾಜ...<br>(ಶ್ರೀಧರ, ಶ್ರೀಕಾಂತರೂ ಹಿಂದೆ ಹೇಳುತ್ತಿರುತ್ತಾರೆ)<br>ನನ್ನ ಕಂದ, ನನ್ನಪ್ಪ.<br>(ಎಂದಾಗ ಮೂರ್ತಿ ಕಿರುನಗೆಯನ್ನು ಬೀರುತ್ತಾನೆ. ಶ್ರೀಧರ, ಶ್ರೀಕಾಂತ ಮತ್ತು ನಟರಾಜು, ಮೂರ್ತಿಗೆ ಮುಖಮುಟ್ಟಿ ಕೀಟಲೆ ಮಾಡಿದಾಗ ಮೂರ್ತಿ ಕೋಪಗೊಳ್ಳುತ್ತಾನೆ) |

**ನಿರ್ದೇಶಕರ ಟಿಪ್ಪಣಿ:**
**ಸಂಕಲನ ಸಮಯದಲ್ಲಿ ಭಾಗಶಃ ತೆಗೆದುಹಾಕಲಾಗಿದೆ**

# ದೃಶ್ಯ 28

*(ಚಲನಚಿತ್ರದಿಂದ ತೆಗೆಯಲಾಗಿದೆ)*
*ರಾತ್ರಿ – ಒಳಾಂಗಣ – ಬಾರ್*

| | | |
|---|---|---|
| | | (ಠಳ್ ಎಂದು ಗಾಜಿನ ಲೋಟ ಕೆಳಗೆ ಬಿದ್ದ ಸದ್ದು.) |
| ಧ್ವನಿ | : | ಐ ವಾಂಟ್ ವಿಸ್ಕಿ, ನಾಟ್ ವಾಟರ್.<br>(ಎಲ್ಲರೂ ಅತ್ತ ನೋಡುತ್ತಾರೆ. ಸೋದರ ಆಂಥೋನಿ ಎದುರು ಕುಳಿತಿರುವ ಕ್ಲಾರಾ ಬೇರರ್‌ಗೆ ಹೇಳುತ್ತಾಳೆ.) |
| ಕ್ಲಾರಾ | : | (ಬೇರರ್ ಕಡೆಗೆ ತಿರುಗಿ)<br>.. ಏನ್ ನಿನ್ನೊಬ್ಬುಂದೇನಾ ಹೋಟ್ಲು? ನಾನು ದುಡ್ಡು ಕೊಡ್ತೀನಿ, ಕಲ್ಲಲ್ಲ. ವಿಸ್ಕಿ ಕೊಡು ಅಂದ್ರೆ ನೀರು ಕೊಡ್ತೀಯ ರ್‍ಯಾಸ್ಕಲ್? |
| ಬೇರರ್ | : | ಬಾರ್‌ನಲ್ಲಿ ರಿಸ್ಟ್ರಿಕ್ಷನ್ ಇದೆ ಕೊಡ್ಬೇಡಿ ಅಂತ |
| ಕ್ಲಾರಾ | : | ಅವ್ವ್ಯಾರೊ ಹೇಳೋಕೆ? ನಾನ್ ಹೇಳ್ತೀನಿ. ದುಡ್ಡು ಕೊಡೋಳು ನಾನು. ಕುಡ್ಕೋಳೋಳು ನಾನು. ಗೋ ಅಂಡ್ ಬ್ರಿಂಗ್ ಟೂ ಮೋರ್ ಪೆಗ್ಸ್. |
| ಬೇರರ್ | : | ಸಾರಿ ಮೇಡಂ |
| ಕ್ಲಾರಾ | : | ನೀನ್ ಕೊಡ್ದೆ ಇದ್ರೆ ಅಷ್ಟೆ. ಕತ್ತೆ ಬಾಲ ವಿಂಡ್ಸರ್ ಮ್ಯಾನರ್ಗ್ಹೋಗ್ತೀನಿ<br>(ಎಂದು ಟೇಬಲ್ ಮೇಲಿದ್ದ ಕಾರಿನ ಬೀಗದ ಕೀಲಿಯನ್ನ ತಗೆದುಕೊಂಡು ಟೇಬಲ್ ಸರಿಸಿ ಹೊರ ನಡೆಯುತ್ತಾಳೆ) |

**ನಿರ್ದೇಶಕರ ಟಿಪ್ಪಣಿ:**
**ಚಿತ್ರೀಕರಣಕ್ಕೆ ಮುನ್ನವೇ ತೆಗೆದುಹಾಕಲಾಗಿದೆ. ಕಾರಣ ಕ್ಲಾರಾಳ ಪರಿಚಯವನ್ನು ವಿಭಿನ್ನ ರೀತಿಯಲ್ಲಿ ರೈಲ್ವೇ ಟ್ರ್ಯಾಕಿನ ಮೇಲೆ ಕಾರು ಓಡಿಸುತ್ತಿರುವ ದೃಶ್ಯದೊಂದಿಗೆ ಯೋಚಿಸಲಾದ್ದರಿಂದ ಈ ದೃಶ್ಯವನ್ನು ಕೈಬಿಡಲಾಯಿತು.**

# ದೃಶ್ಯ 29

***ರಾತ್ರಿ – ರೈಲ್ವೆ ಹಳಿ***

(ಮೂರ್ತಿ ಒಬ್ಬನೆ ರಾತ್ರಿಯಲ್ಲಿ ನಡೆದು ಬರುತ್ತಿರುವಾಗ ಎದುರಿಗೆ ಒಂದು ಕಾರು, ರೈಲು ಹಳಿಯ ಮೇಲೆ ಬರುತ್ತಿರುವುದನ್ನು ನೋಡುತ್ತಾನೆ. ಮೂರ್ತಿ ಆಶ್ಚರ್ಯಚಕಿತನಾಗಿ ಆ ಕಾರನ್ನೇ ನೋಡುತ್ತಾ..)

**[ರೈಲ್ವೆ ಹಳಿಗಳು ಮತ್ತು ಅದರ ಮೇಲೆ ಬರುತ್ತಿರುವ ಕಾರು.. ಈ ವಿವರಗಳನ್ನು ಚಿತ್ರಿಸಲು ವೈಡ್ ಶಾಟ್ ಬಳಸಲಾಗಿದೆ]**



ಮೂರ್ತಿ : ಯಾರೋ ಹೆಣ್ಣ್ ಮಗಳು ರೈಲ್ವೇ ಟ್ರಾಕ್ ಮೇಲೆ ಕಾರೋಡುಸ್ಕೊಂಡ್ ಬರ್ತಿದಾಳಲ್ಲ.
(ಕಾರು ರೈಲ್ವೇ ಹಳಿ ಬಿಟ್ಟು ರಸ್ತೆಗಿಳಿಯುತ್ತದೆ)
.. ಏನಾಗಿದೆ ಈಕೆಗೆ.
(ಕಾರಿನ ಹಿಂದೆ ಓಡುತ್ತಾನೆ. ರಸ್ತೆಗಿಳಿಯುತ್ತಿದ್ದಂತೆ ಕಾರು ಅಡ್ಡಾದಿಡ್ಡಿಯಾಗಿ ಚಲಿಸಲು ಪ್ರಾರಂಭಿಸುತ್ತದೆ. ಅಡ್ಡಾದಿಡ್ಡಿಯಾಗಿ ಚಲಿಸಿ ಹೋಗಿ ಒಂದು ಮರಕ್ಕೆ ಢಿಕ್ಕಿ ಹೊಡೆಯುತ್ತದೆ. ಅದರಲ್ಲಿದ್ದ ಕ್ಲಾರಾ ಪ್ರಜ್ಞೆತಪ್ಪಿ ಪಕ್ಕದ ಸೀಟಿಗೆ ಬೀಳುತ್ತಾಳೆ. ಮೂರ್ತಿ ಕಾರಿನ ಬಳಿ ಬಂದು)

.. ಹೋ ಬಾಟ್ಲುಗಳು. ಓಹೊಹೊ ಇಷ್ಟೊಂದು ಹೊಟ್ಟೆಗೆ ಸೇರಿದ್ರೆ ಇನ್ನೇನ್ ಗತಿಯಾಗುತ್ತೆ.
(ಬಾಟಲುಗಳನ್ನು ಬಿಸಾಡುತ್ತಾನೆ. ಪ್ರಜ್ಞೆತಪ್ಪಿ ಬಿದ್ದಿದ್ದ ಕ್ಲಾರಾಳನ್ನು ಎಬ್ಬಿಸಲು ಪ್ರಯತ್ನಿಸುತ್ತಾನೆ)
.. ಏನ್ರೀ? ಏನಮ್ಮ?
(ಕ್ಲಾರಾ ಮತ್ತಿನಲ್ಲೆ ಏನು ಎಂಬ ಸೂಚನೆಗಳನ್ನು ಕೊಡುತ್ತಾಳೆ)
.. ಮೋ, ಸಧ್ಯ ಉಸಿರಿದೇಪಾ
(ಎಂದು ಹೇಳಿಕೊಳ್ಳುತ್ತಾನೆ.)

ಕ್ಲಾರಾ : ಏನಾಯ್ತು?

ಮೂರ್ತಿ : ಏನು ಆಗ್ಲಿಲ್ಲ. ಕುದುರೆ ಮೇಲ್ ಬಂದ್ರಿ ಆನೆ ಮೇಲ್ ಗುದ್ದಿದೀರ ಅಷ್ಟೆ.

ಕ್ಲಾರಾ : ಅ...ಯ್ಯೋ.. ಸಾರಿ

ಮೂರ್ತಿ : ಹೇಯ್ ಸಾರಂಗು ಇಲ್ಲ ಏನು ಇಲ್ಲ. ಸ್ವಲ್ಪ ಎದ್ದು ಕೂತ್ಕೊತಿರಾ? ರೀ ಮಾ ಅಮ್ಮೊ..
(ಏಳದೇ ಇದ್ದಾಗ ಕಾರಿನಲ್ಲಿದ್ದ ಒಂದು ವಿಸಿಟಿಂಗ್ ಕಾರ್ಡನ್ನು ತಗೆದುಕೊಂಡು ಅದರಲ್ಲಿದ್ದ ವಿಳಾಸವನ್ನು ಓದಿ, ತನ್ನ ಜೇಬಿನಲ್ಲಿ ಇಟ್ಟುಕೊಂಡು ಅವಳನ್ನು ಮನೆಗೆ ಕರೆತರುವ ಪ್ರಯತ್ನ ಮಾಡುತ್ತಾನೆ)

# ದೃಶ್ಯ ೩೦

*ರಾತ್ರಿ – ಕ್ಲಾರಾ ಮನೆಯ ಹೊರಗೆ ಮತ್ತು ಒಳಗೆ.*

(ಕ್ಲಾರಾ ಮನೆ ಆವರಣದಲ್ಲಿ ಕಾರು ನಿಲ್ಲಿಸಿ ಮೂರ್ತಿ ಕಾರಿನಿಂದ ಕೆಳಗಿಳಿದು ಮತ್ತೊಮ್ಮೆ ವಿಳಾಸವನ್ನು ಪರಿಶೀಲಿಸಿಸುತ್ತಾನೆ.)

ಮೂರ್ತಿ : ನೋಡಿ.. ಇಳಿತಿರಾ ಸ್ವಲ್ಪ?

ಕ್ಲಾರಾ : ಹ್ಞಾಂ..

ಮೂರ್ತಿ : ಇಳಿರೀ ಅಂದೆ.

ಕ್ಲಾರಾ : ಹ್ಞಾಂ

ಮೂರ್ತಿ : ಬನ್ನಿ ಬನ್ನಿ..
(ಆಕೆಯನ್ನು ಕಾರಿನಿಂದ ಹೊರತಂದು ಒಂದು ಕಂಬಕ್ಕೆ ಒರಗಿಸಿ)
.. ಒಂದು ನಿಮ್ಷ ಇಲ್ಲೇ ನಿಂತ್ಕೊಳಿ ಬೀಗ ತೆಗ್ದ್‌ಬಿಟ್ ಬರ್ತಿನಿ.
(ಬೀಗವನ್ನು ತೆಗೆದು ವಾಪಾಸ್ ತಿರುಗಿನೋಡಿ ತೂರಾಡುತ್ತಿರುವ ಕ್ಲಾರಾಳನ್ನು ಹಿಡಿದು)
.. ಸ್ವಲ್ಪ ಸ್ಟಡಿಯಾಗ್ ನಿಂತ್ಕೊಳಿ ತೂರಾಡ್ಬೇಡಿ.
(ಕ್ಲಾರಾ ಇಲ್ಲದಿರುವುದನ್ನು ಕಂಡು ಆಶ್ಚರ್ಯಗೊಂಡು ಅವಳನ್ನು ನಿಲ್ಲಿಸಲಾಗಿದ್ದ ಜಾಗಕ್ಕೆ ಬರುತ್ತಾನೆ. ಕೆಳಗೆ ಬಿದ್ದಿರುವುದನ್ನು ನೋಡಿ)
.. ಇದ್ರು ಮನೆ ಕಾಯೋಗ ..ದೇವ್ರೇ ಗತಿ
(ಆಕೆಯನ್ನು ನಿಧಾನವಾಗಿ ಮೇಲಕ್ಕೆತ್ತಿ)
.. ನಡೀರಿ, ನಡೀರೀಂದೆ. ನಡಿರಿ.
(ಮೂರ್ತಿ ಕ್ಲಾರಾಳನ್ನು ಬಾಗಿಲ ಬಳಿಗೆ ಕರೆತಂದು ಒರಗಿ ನಿಲ್ಲಿಸಿ)
.. ಸ್ವಲ್ಪ ನಿಂತ್ಕೊಳಿ ಡೋರ್ ಓಪನ್ ಮಾಡ್ತೀನಿ.
(ಬಾಗಿಲನ್ನು ತೆರೆಯುವಷ್ಟರಲ್ಲಿ ಕ್ಲಾರಾ ಬೀಳುವುದನ್ನು ಗಮನಿಸುವ ಮೂರ್ತಿ ಅವಳು ಬೀಳುವ ಮುಂಚೆ ಹಿಡಿದುಕೊಳ್ಳುತ್ತಾನೆ. ನಂತರ ಆಕೆಯನ್ನು ಎತ್ತಿಕೊಂಡು ಹೋಗಿ ಒಂದು ರೂಮಿನ ಒಳಗೆ ಮಲಗಿಸುತ್ತಾನೆ.)

***(ಒಳಾಂಗಣ)***

ಮೂರ್ತಿ : (ಮಲಗಿಸುವಾಗ, ಸರಿಯಾಗಿ ಮಲಗದ ಕ್ಲಾರಾಳಿಗೆ)

ಮೆತ್ತಗೆ ಮೆತ್ತಗೆ, ಮಲ್ಕೊಳಿ. ಸ್ವಲ್ಪ ಮೇಲಕ್ ಬನ್ನಿ. ದಿಂಬಿನ್ ಮೇಲೆ ತಲೆ ಹಾಕೊಳಿ.

ಕ್ಲಾರಾ : (ಮಲಗಿದ್ದ ಕ್ಲಾರಾ ಏನನ್ನೋ ನೆನೆಸಿಕೊಂಡು) ಕುರೀ..ನಾ, ಆನೆ..ನಾ ಹಾಸ್ಪಿಟಲ್‌ಗೆ ಸೇರ್...

ಮೂರ್ತಿ : ಓ.. ಆನೆ ಕುದುರೆನ ಇನ್ನೂ ಜ್ಞಾಪಕದಲ್ಲಿಟ್ಟುಕೊಂಡಿದಿರಾ? ಕುದುರೆ ನಿನ್ ದೇಹದ ಒಳಗೆ ಇದೆ. ಆನೆ ಹೊರಗಡೆ ಇದೆ. ಆನೆ ಕುದುರೆ ಎರೆಡು ರಿಪೇರಿ ಆಗ್ಬೇಕು ಅಷ್ಟೆ. ಅಯ್ಯೊ..

(ತಲೆ ಚಚ್ಚಿಕೊಂಡು ಈ ಕಡೆಗೆ ತಿರುಗಿದಾಗ ಕ್ಲಾರಾಳ ಅಣ್ಣ ನಿಂತಿರುತ್ತಾನೆ. ಆತ ಬಂದು ಗಾಬರಿಯಾಗಿ ನೋಡುತ್ತಾನೆ. ಹತ್ತಿರ ಬಂದು ಕೋಪದಿಂದ..)

ಆಂಥೋನಿ : ಏನ್ರಿ ಏನ್ರಿ ಮಾಡ್ತಿದಿರಾ ಈ ರೂಮಿಗ್ ಬಂದು.?

ಮೂರ್ತಿ : ನಾನಾ..! (ಆಶ್ಚರ್ಯದಿಂದ) ನಾನೇನ್ರಿ ಮಾಡ್ತಿದ್ದೆ? ಏನು ಮಾಡ್ಲಿಲ್ಲ.

ಆಂಥೋನಿ : ಒಂಟಿ ಹೆಣ್ ಮಲಗಿರೋವಾಗ ಇಷ್ಟೊತ್ತಲ್ಲಿ ಈ ರೂಮಿಗ್ ಯಾಕ್ರೀ ಬಂದಿದ್ದು?

ಮೂರ್ತಿ : ನಿಮ್ಗೆ ಪ್ರಶ್ನೆಗಳನ್ನ ಬಿಟ್ರೆ ಬೇರೇನು ಗೊತ್ತಿಲ್ಲ ಅಂತ ಕಾಣ್ಸುತ್ತೆ. ಆತ್ರ ಪಟ್ಟು ಯಾಕ್ರಿ ಏನೇನೋ ಕಲ್ಪನೆ ಮಾಡ್ಕೊತಿದಿರಾ? ಇವರು ಓವರ್ ಸ್ಪೀಡ್ನಲ್ಲಿ ಕಾರ್ ಡ್ರೈವ್ ಮಾಡ್ಕೊಂಡ್ ಬಂದು ಆಕ್ಸಿಡೆಂಟ್ ಮಾಡ್ಬಿಟ್ರು. ಆ ಜಾಗದಲ್ಲಿ ಹೇಳೋರಿಲ್ಲ ಕೇಳೋರಿಲ್ಲ ಪಕ್ಕದಲ್ಲಿ ಈ ರೂಮಿನ ಕೀ ಇತ್ತು. ಒಂಟಿ ಹೆಣ್ಣು ಬಿಟ್ಟು ಹೋಗೋದು ಸರಿ ಇಲ್ಲ ಅಂತ ಕರ್ಕೊಂಡ್ ಬಂದು ಮಲ್ಗ್ಸಿದಿನಿ. ಇಲ್ಲಾಂದ್ರೆ ಇಷ್ಟೊತ್ತಿಗೆ ಯಾವ್ದಾದ್ರು ಸರ್ಕಾರಿ ಹಾಸ್ಪಿಟಲ್‌ನಲ್ಲೊ, ಪೋಲೀಸ್ ಸ್ಟೇಷನ್‌ನಲ್ಲೊ ನೋಡ್ಬೇಕಾಗ್ತಿತ್ತು.

ಆಂಥೋನಿ : ಜಸ್ಟ್ ಅ ಮಿನಿಟ್ ಸರ್, ನನ್ ತಂಗೀಗ್ ಏನಾಗ್ಹೋಯ್ತೊ ಅನ್ನೋ ಆತುರದಲ್ಲಿ ನಾನ್ ದುಡುಕಿ ಮಾತಾಡ್ಬಿಟ್ಟೆ.

ಮೂರ್ತಿ : ಅವ್ರು ನಿಮ್ ತಂಗಿನಾ?

ಆಂಥೋನಿ : ಹೌದು ಸರ್. ಪ್ಲೀಸ್ ಎಕ್ಸ್‌ಕ್ಯೂಸ್‌ಮಿ ಮಿಸ್ಟರ್..

ಮೂರ್ತಿ : ಮೂರ್ತಿ ಅಂತ ನನ್ನೆಸ್ರು.

ಆಂಥೋನಿ : ಐ ಯಾಮ್ ಆಂಥೋನಿ ಸರ್.

ಮೂರ್ತಿ : ತುಂಬಾ ಸಂತೋಷ ನಿಮ್ಮನ್ನ ಮೀಟ್ ಮಾಡಿದ್ದು. ಬರ್ತೀನಿ.

(ಹೊರಡಲನುವಾದಾಗ ಆಂಥೋಣಿ ತಡೆದು)

| | | |
|---|---|---|
| ಆಂಥೋಣಿ | : | ಇಲ್ಲ, ನಾನ್ ನಿಮ್ಮನ್ನ ಡ್ರಾಪ್ ಮಾಡ್ತೀನಿ. |
| ಮೂರ್ತಿ | : | ನಿಮಗ್ಯಾಕ್ ತೊಂದ್ರೆ. |
| ಆಂಥೋಣಿ | : | ನೋ ನೋ ನೀವೆಷ್ಟು ದೊಡ್ಡ ಸಹಾಯ ಮಾಡಿದಿರಾ. ನಾನಿಷ್ಟು ಮಾಡ್ದಿದ್ರೆ ಹೇಗೆ ಸರ್. ಪ್ಲೀಸ್ ಅಲೋಮಿ ಟು ಡ್ರಾಪ್ ಯೂ. |

*ಹಸ್ತಪ್ರತಿಯಲ್ಲಿ: (ಚಲನಚಿತ್ರದಿಂದ ತೆಗೆಯಲಾಗಿದೆ)*

| | | |
|---|---|---|
| *ಮೂರ್ತಿ* | *:* | *ನೀವ್ ಕಾರ್ ತಗೊಂಡ್ ಬಂದ್ರೆ ನಿಮ್ ತಂಗಿ ಒಬ್ಬರೆ ಇರ್ಬೇಕಾಗುತ್ತಲ್ಲ.* |
| *ಆಂಥೋಣಿ* | *:* | *ಪರ್ವಾಗಿಲ್ಲ ಅವಳನ್ನು ಎಚ್ರ ಆಗೋದು ಬೆಳಗ್ಗೇನೆ (ಎಂದು ಮೂರ್ತಿಯೊಂದಿಗೆ ಹೊರಡುತ್ತಾನೆ)* |

# ದೃಶ್ಯ 31

*ರಾತ್ರಿ – ರಸ್ತೆ (ಕಾರಿನಲ್ಲಿ)*

| | | |
|---|---|---|
| | | (ಕಾರಿನಲ್ಲಿ ಮೂರ್ತಿ ಮತ್ತು ಆಂಥೋನಿ ಹೋಗುತ್ತಿದ್ದಾರೆ) |
| ಮೂರ್ತಿ | : | ಮಿ. ಆಂಥೋನಿ, ಹೀಗ್ ಕೇಳ್ತೀನಿ ಅಂತ ಏನು ತಿಳ್ಕೊಬೇಡಿ. ಯಾಕ್ ನಿಮ್ ತಂಗಿ ಅಷ್ಟೊಂದ್ ಕುಡಿತಾರೆ? ಏನಾದ್ರು ಹೆಚ್ಚು ಕಡಿಮೆ ಆದ್ರೆ? |
| ಆಂಥೋನಿ | : | ನೋಡಿ ಮಿ.ಮೂರ್ತಿ.. ಅವಳ ಜೀವನ್ದಲ್ಲಿ ಒಂದ್ ದೊಡ್ಡ ಘಟನೆ ನಡೆದ್ಹೋಯ್ತು. ಅದನ್ನ ಮರೆಯೋಕೆ ಈ ರೀತಿ ಸಿಕ್ಕಾಪಟ್ಟೆ ಕುಡಿಯೋಕೆ ಶುರುಮಾಡ್ಬಿಟ್ಲು. ಇನ್ಫಾಕ್ಟ್ ಮೊದ್ಲು ಅವಳಿಗೆ ಕುಡಿಯೋರ್ ನೋಡಿದ್ರೇನೆ ಆಗ್ತಿರ್ಲಿಲ್ಲ. |
| | | **[ಕ್ಲಾರಾಳ ಮುಂಚಿನ ವ್ಯಕ್ತಿತ್ವವನ್ನು ತಿಳಿಸುವ ಸಂಭಾಷಣೆಯನ್ನು ಪರಿಣಾಮಕಾರಿಯಾಗಿಸಲು ಕ್ಲೋಸ್ ಶಾಟ್ ಬಳಸಲಾಗಿದೆ]** |

**ನಿರ್ದೇಶಕರ ಟಿಪ್ಪಣಿ:**

**ಮೂರ್ತಿ ಮತ್ತು ಕ್ಲಾರಾಳ ಅಣ್ಣ ಆಂಥೋನಿ, ಕ್ಲಾರಾಳ ಬಗ್ಗೆ ಚರ್ಚಿಸುವಾಗ (ದೃಶ್ಯ 32 ಮತ್ತು 38ರಲ್ಲಿ) ಇಬ್ಬರಲ್ಲೂ ಕ್ಲಾರಾಳ ಬಗ್ಗೆ ಪ್ರೀತಿ ಮತ್ತು ಅನುಕಂಪ ಸೂಸುತ್ತಿರಬೇಕು.**

# ದೃಶ್ಯ 32

*ರಾತ್ರಿ – ಕ್ಲಾರಾ ಮನೆಯ ಒಳಗೆ*

*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ತೆಗೆಯಲಾಗಿದೆ.)*

| | | |
|---|---|---|
| | | *(ರೆಗ್ಗಿ ಎರೆಡು ಕೈಯಲ್ಲು ಮದ್ಯವನ್ನು ಹಿಡಿದುಕೊಂಡು ಬರುತ್ತಿದ್ದಾನೆ.)* |
| *ಆಂಥೋನಿ* | *:* | *ಏನಯ್ಯ ಎರೆಡು ಕೈಲೂ ಕುಡಿತೀಯಾ?* |
| *ರೆಗ್ಗಿ* | *:* | *ನೋ ನೋ ಒಂದು ನನಗೆ ಒಂದು ಕ್ಲಾರಾಗೆ.* |
| *ಆಂಥೋನಿ* | *:* | *ಕ್ಲಾರಾಗಾ?* |
| *ರೆಗ್ಗಿ* | *:* | *ಹೌದು.* |
| ಅನಾಮಧೇಯ | : | ಒಳ್ಳೆ ಎಂಗೇಜ್‌ಮೆಂಟ್ ಪಾರ್ಟಿ ಅಂತೂ ನಮ್ ರೆಗ್ಗಿ, ಒಳ್ಳೇ ಹುಡುಗೀನೆ ಹೊಡ್ದ್ ಬಿಟ್ಟ. |
| ರೆಗ್ಗಿ | : | ಕ್ಲಾರಾ.. (ಸ್ನೇಹಿತೆಯರೊಡನೆ ನಿಂತಿರುವ ಕ್ಲಾರಾ "ಎಕ್ಸ್‌ಕ್ಯೂಸ್ ಮಿ" ಎಂದು ಕೇಳಿ ಬರುತ್ತಾಳೆ. ರೆಗ್ಗಿ ಕ್ಲಾರಾ ಹತ್ತಿರ ಬಂದು..) .. ಕ್ಲಾರಾ, ಯೂವರ್ ಲುಕಿಂಗ್ ಆಬ್ಸಲ್ಯೂಟ್ಲಿ ಬ್ಯೂಟಿಫುಲ್. |
| ಕ್ಲಾರಾ | : | (ನಾಚಿಕೊಂಡು ನಗುತ್ತ) ಥ್ಯಾಂಕ್ಸ್. |
| ರೆಗ್ಗಿ | : | ಹ್ಯಾವ್ ಅ ಡ್ರಿಂಕ್.. (ಗ್ಲಾಸನ್ನು ಕ್ಲಾರಾಳ ಕೈಗೆ ನೀಡಲು ಹೋಗುತ್ತಾನೆ) |



ಕ್ಲಾರಾ : ರೆಗ್ಗಿ ಇದೆಲ್ಲ ನನಿಗಿಷ್ಟ ಇಲ್ಲ ಅಂತ ನಿನಗ್ ಗೊತ್ತು.

ರೆಗ್ಗಿ : ಅರನ್ಟ್ ಯೂ ಹ್ಯಾಪಿ ಟುಡೇ?

ಕ್ಲಾರಾ : ಅಫ್ ಕೋರ್ಸ್.

ರೆಗ್ಗಿ : ದೆನ್ ಹ್ಯಾವ್ ಇಟ್. ಕಮ್ಮಾನ್. ಸಂತೋಷಕ್ಕೆ ಹಾಡು, ಸಂತೋಷಕ್ಕೆ ಸಿನಿಮಾ, ಸಂತೋಷಕ್ಕೆ ಕುಡಿತ. ನಾವು 21ನೇ ಶತಮಾನಕ್ಕೆ ಕಾಲ್ ಹಾಕ್ತಿದಿವಿ. ಗಂಡಸಿನ ಜೊತೆ ಎಲ್ಲದರಲ್ಲೂ ಸರಿಸಮನಾಗಿ ನಿಂತ ಹೆಣ್ಣು ಇದ್ರಲ್ಲಿ ಹೀಗಂದ್ರೆ ಹ್ಯಾಗೆ? ಮತ್ತೆ ಗಂಡನ್ ಕೋರಿಕೆ ಈಡೇರ್ಸೋದು ಹೆಂಡ್ತಿಯಾದವಳ್ ಕರ್ತವ ಅಲ್ವಾ? ಹ್ಯಾವ್ ಇಟ್.

ಕ್ಲಾರಾ : ನೋಡು ಎಲ್ಲರಿಗು ಲೈಕ್ಸ್ ಅಂಡ್ ಡಿಸ್ ಲೈಕ್ಸ್ ಅಂತ ಇರುತ್ತೆ. ಬೇಡ ಅಂದ್ಮೇಲೆ ಫೋರ್ಸ್ ಮಾಡೋದು ನಾಗರೀಕತೆ ಅಲ್ಲ.

ಸುಂದರಿ : ಏನೇ ನೀನು, ಅವ್ರು ಅಷ್ಟೊಂದ್ ರಿಕ್ವೆಸ್ಟ್ ಮಾಡ್ಕೊತಿದಾರೆ. ಅವರ್ ಸಂತೋಷಕ್ಕಾದ್ರು ತಗೊಬಾರ್ದಾ?

ಕ್ಲಾರಾ : ಸುಂದ್ರೀ, ಬೇರೆಯವರ ಸಂತೋಷಕ್ಕೋಸ್ಕರ ವಿಷ ತಗೊಳ್ಳೋದು ಮೂರ್ಖತನ.

ರೆಗ್ಗಿ : ನಾಳೆ ಮದ್ವೆ ಆದ್ಮೇಲೆ ಒಬ್ರು ಸಂತೋಷಕ್ಕೋಸ್ಕರ ಇನ್ನೊಬ್ರು ಏನೇನ್ನೋ ತ್ಯಾಗಮಾಡ್ಬೇಕಾಗುತ್ತೆ ಆಗ್ಲೂ ಹೀಗೆ ಮೊಂಡ್ತನ ಮಾಡ್ತೀಯೇನು?

ಕ್ಲಾರಾ : ತ್ಯಾಗ, ಆತ್ಮೀಯತೆ, ಅರ್ಪಣೆ ತುಂಬಾ ದೊಡ್ಡ ದೊಡ್ಡ ಪದಗಳು. ಯೂ ಸೀ ಲೈಫ್‌ನಲ್ಲಿ ನನಗೆ ಕೆಲವು ಪ್ರಿನ್ಸಿಪಲ್ಸ್‌ಗಳಿವೆ. ಬೇಡ ಅಂದ್ರೆ ಬೇಡ ಅಷ್ಟೆ. (ಖಡಾಖಂಡಿತವಾಗಿ ಹೇಳುತ್ತಾಳೆ.)

ಸುಂದರಿ : ನಿನಗ್ ಬೇಡ್ದಿದ್ರೆ ಬೇಡ ಬಿಡು. ರೆಗ್ಗಿಗೆ ಸಂತೋಷ ಆಗೋದಾದ್ರೆ ನಾನ್ ತಗೋತಿನಿ.

ಕ್ಲಾರಾ : ಫೈನ್, ಗೋ ಅಹೆಡ್.

ರೆಗ್ಗಿ : ಚಿಯರ್ಸ್.. (ಸುಂದರಿಗೆ ಮದ್ಯವನ್ನು ಕೊಡುತ್ತಾನೆ)

ಸುಂದರಿ : (ಕ್ಲಾರಾ ಹೋದ ಮೇಲೆ)
ಪೂರ್ ಗರ್ಲ್.. (ಅನುಕಂಪದ ನೋಟ ಬೀರುತ್ತಾಳೆ)

***ಹಸ್ತಪ್ರತಿಯಲ್ಲಿ:***
***(ಚಲನಚಿತ್ರದಲ್ಲಿ ತೆಗೆದುಹಾಕಲಾಗಿದೆ)***

***ಕ್ಲಾರಾ : ರೆಗ್ಗಿ ನಾನೊಂದು ಮಾತ್ ಹೇಳ್ತೀನಿ, ಕೇಳ್ತೀಯಾ?***

| | | |
|---|---|---|
| *ರೆಗ್ಗಿ* | : | *ಓ ಎಸ್. ನಿನ್ನ ಮೇಲಿರೋ ಪ್ರೇಮಕ್ಕೋಸ್ಕರ ಪ್ರಾಣ ಬೇಕಾದ್ರು ಬಿಟ್ಟು ಬಿಡ್ತೀನಿ.* |
| *ಕ್ಲಾರಾ* | : | *ಅಯ್ಯಯ್ಯೋ ಪ್ರಾಣ ಬಿಟ್ರೆ ನನ್ನ ಗತಿ ಏನು?* |
| *ರೆಗ್ಗಿ* | : | *ಬೇರೆ ಏನು ಹೇಳು?* |
| *ಕ್ಲಾರಾ* | : | *ನಂಗೆ ಇದರ ವಾಸ್ನೆ ಬಂದ್ರೇ ವಾಕರಿಕೆ ಬರುತ್ತೆ. ಪ್ಲೀಸ್ ಈ ಡ್ರಿಂಕ್ಸ್‌ನ ಬಿಟ್ಟು ಬಿಡ್ತೀಯಾ?* |
| *ರೆಗ್ಗಿ* | : | *ಚಿಕ್ಕ ವಯಸ್ನಲ್ಲಿ ಕಲ್ತಿದ್ದು. ಅಷ್ಟು ಸುಲಭವಾಗಿ ಬಿಡೋಕ್ ಸಾಧ್ಯಾನಾ?* |
| *ಕ್ಲಾರಾ* | : | *ನೋಡು. ನನಗಿಂತ ಪ್ರಯವಾದ ವಸ್ತುನಾ ಇದು?* |
| *ರೆಗ್ಗಿ* | : | *ಈ ಪ್ರಶ್ನೆಗೆ ಉತ್ತರ ಹೇಳೋ ತಾಕತ್ ಇಲ್ಲಾ ನಂಗೆ.* |
| *ಕ್ಲಾರಾ* | : | *ಲವ್ ಇಸ್ ಗ್ರೇಟರ್ ದಾನ್ ಎನಿಥಿಂಗ್ ಅಂತಾರೆ. ಪ್ರೀತಿಗೋಸ್ಕರ ಪ್ರಾಣಾನೆ ಕೊಡ್ತೀನಿಂತ ನೀನೆ ಅಂದೆ, ಆ ಪ್ರಾಣಕ್ಕಿಂತ ದೊಡ್ಡದಾ ಈ ಹಾಳು ಡ್ರಿಂಕ್ಸ್.?* |
| *ರೆಗ್ಗಿ* | : | *ಸರಿ. ಇವತ್ತಿಂದ ಇದನ್ನ ಬಿಟ್ಟುಬಿಡ್ತೀನಿ* |
| *ಕ್ಲಾರಾ* | : | *ಪ್ರಾಮಿಸ್?* |
| *ರೆಗ್ಗಿ* | : | *ಪ್ರಾಮಿಸ್. ಇವತ್ತಿಂದ ಇದನ್ನ ಕೈಯಿಂದ ಮುಟ್ಟಲ್ಲ, ಕಣ್ಣಿಂದ ನೋಡಲ್ಲ.* |
| *ಕ್ಲಾರಾ* | : | *ಥ್ಯಾಂಕ್ಯೂ ಥ್ಯಾಂಕ್ಯೂ ವೆರಿ ಮಚ್* |
| *ರೆಗ್ಗಿ* | : | *ಅಷ್ಟು ಸಾಲದು (ಎಂದು ಅವಳ ತುಟಿಯ ಹತ್ತಿರ ಹೋಗುತ್ತಾನೆ)* |
| *ಕ್ಲಾರಾ* | : | *ಬೇಡ ಈಗ ಬೇಡ* |
| *ರೆಗ್ಗಿ* | : | *ನಂಗೆ ಬೇಕು.* |
| *ಕ್ಲಾರಾ* | : | *ನಿಂಗೆ ಇರೋ ಅಷ್ಟು ಆತುರ ನಂಗೂ ಇದೆ. ಆದರೆ ಇದೆಲ್ಲ ಮದುವೆ ಆದ್ಮೇಲೆ. ಮದುವೆ ಆದ್ಮೇಲೆ ಇಟ್ಕೊಂಡ್ರೆ ಮರ್ಯಾದೆ. ಆಗಲೇ ಸೊಗಸು. ಆಗಲೇ ಹಿತ.* |
| *ರೆಗ್ಗಿ* | : | *ಕ್ಲಾರಾ, ಕ್ಲಾರಾ ನೀನು ಎಲ್ಲದರಲ್ಲೂ ನಂಗೆ ನಿರಾಸೆ ಮಾಡ್ತಿದೀಯ* |
| *ಕ್ಲಾರಾ* | : | *ನಿರಾಸೆ ಮಾಡ್ತಿಲ್ಲ. ನಿನ್ನ ಆಸೇನ ಹೆಚ್ಚಿಸ್ತಾ ಇದಿನಿ. (ಹೋಗುವಳು)* |

# ದೃಶ್ಯ 33

***ಹಗಲು – ಕ್ಲಾರಾ ಮನೆಯ ಒಳಗೆ***

| | | |
|---|---|---|
| | | (ಕ್ಲಾರಾಳ ಅಣ್ಣ ಸ್ಯೂಟನ್ನು ಹಿಡಿದು ಓಡಿ ಬರುತ್ತಾನೆ) |
| ಆಂಥೋನಿ | : | ಕ್ಲಾರಾ ಕ್ಲಾರಾ.. ರೆಗ್ಗಿಗೆ ಸೂಟ್ ತಂದಿದಿನಿ. ನೋಡಿಲ್ಲಿ. (ಕ್ಲಾರಾ ಮಹಡಿಯಿಂದ ಓಡಿ ಬಂದು..) |
| ಕ್ಲಾರಾ | : | ಅಣ್ಣಾ ವೈಟ್. |
| ಆಂಥೋನಿ | : | ಮಮ್ಮಿ ಈ ಸೂಟನ್ನ ನಾನೆ ತಗೊಂಡೋಗಿ ಕೊಡ್ಲಾ ಇಲ್ಲಾ ಅವನ್ನೇ ಇಲ್ಲಿಗೆ ಫೋನ್ ಮಾಡಿ ಕರ್ಸ್ಲಾ. |
| ಕ್ಲಾರಾ | : | ನೋ ನೋ ನೋ ವ್ಯಟ್ ವೈಟ್ ವೈಟ್ (ಓಡಿಬಂದು ಸೂಟನ್ನು ತಗೆದುಕೊಂಡು) .. ನಾನ್ ತಗೊಂಡ್ಹೋಗ್ ಕೊಡ್ತೀನಿ. ಐ ವಾಂಟು ಗೀವ್ ಹಿಮ್ ಅ ಸರ್ಪ್ರೈಸ್. (ಸೂಟನ್ನು ಅಮ್ಮನಿಗೆ ತೋರಿಸುತ್ತ..) .. ಮಮ್ಮಿ ರೆಗ್ಗಿ ಈ ಕೋಟ್ ಹಾಕೊಂಡ್ರೆ ಎಷ್ಟು ಹ್ಯಾಂಡ್‌ಸಮ್ ಆಗಿ ಕಾಣ್ತಾನಲ್ವ? |
| ಕ್ಲಾರಾ ಅಮ್ಮ | : | ಚೆನ್ನಾಗಿದೆ. |
| ಆಂಥೋನಿ | : | ನೀನ್ಹೇಳಿದ್ಮೇಲೆ ದೆರಿಸ್ ನೋ ಸೆಕೆಂಡ್ ಒಪಿನಿಯನ್ ಅಬೌಟ್ ಇಟ್. |
| ಕ್ಲಾರಾ | : | ಅಚ್ಚಾ? |
| ಕ್ಲಾರಾ ಅಮ್ಮ | : | ನಿನ್ನ ಗಂಡಂಗೆ ನೀನ್ ತಗೊಂಡ್ಹೋಗ್ ಕೊಡ್ತೀನಿ ಅಂದ್ರೆ ಬೇಡಾ ಅನ್ನೋಕಾಗುತ್ತಾ? ಹೋಗ್ ತೋರ್ಸಮ್ಮ. ಹೋಗು.. |
| ಕ್ಲಾರಾ | : | ಓಕೆ. ಬೇಗ ಬಂದ್ಬಿಡ್ತಿನಿ ಬೈ.. ಬೈ.. (ಹೊರಡುತ್ತಾಳೆ) |

# ದೃಶ್ಯ 34

***ಹಗಲು – ಒಳಾಂಗಣ – ಹೊಟೇಲ್***

(ಕ್ಲಾರಾ ಲಿಫ್ಟ್‌ನಿಂದ ಇಳಿದು ರೆಗ್ಗಿ ರೂಮಿನ ಹತ್ತಿರ ಬರುತ್ತಿದ್ದಂತೆ ಯಾರೋ ಮಹಿಳೆ ನಗುತ್ತಿರುವ ಶಬ್ದ ಕೇಳಿಸುತ್ತದೆ. ಕ್ಲಾರಾ ಗೊಂದಲದಿಂದ ಬಾಗಿಲು ಬಡಿದು, ಒಳಗಿಂದ ರೆಗ್ಗಿ ಧ್ವನಿ ಕೇಳಿಸಿದ ಮೇಲೆ ಮತ್ತೂ ಕೋಪಗೊಂಡು ಜೋರಾಗಿ ಬಡಿಯುತ್ತಾಳೆ)

ಮಹಿಳೆ : ಯೂ ನಾಟ್ಟಿ.. ಹೇಯ್.. ಹ್ಹ..ಹ್ಹ..ಹ್ಹ.. ಊ....

**[ರಿಗ್ಗಿ ಹಾಗು ಸುಂದರಿಯ ಪ್ರಣಯದ ದೃಶ್ಯಗಳನ್ನು ಚಿತ್ರಿಸುವ ಬದಲು ಕೇವಲ ಸೌಂಡ್ ಬಳಸಿ ತೋರಿಸಿರುವುದರಿಂದ ಚಿತ್ರದಲ್ಲಿ ಅಶ್ಲೀಲತೆ ಸುಳಿಯದಂತೆ ಎಚ್ಚರವಹಿಸಲಾಗಿದೆ]**

ರೆಗ್ಗಿ : ಯಾರದು?
(ಮತ್ತೊಮ್ಮೆ ಜೋರಾಗಿ ಬಾಗಿಲು ಬಡಿಯುತ್ತಾಳೆ)
.. ಹ್ಹೂ ಇಸ್ ಇಟ್?
(ರೆಗ್ಗಿ ಬಾಗಿಲನ್ನು ತೆಗೆಯುತ್ತಾನೆ. ಕ್ಲಾರಾಳನ್ನು ನೋಡಿ ಗಾಬರಿ ಮತ್ತು ಆಶ್ಚರ್ಯದಿಂದ)
.. ಕ್ಲಾರಾ ವಾಟ್ ಅ ಸರ್‌ಪ್ರೈಸ್?
(ಕ್ಲಾರಾ ಜೋರಾಗಿ ರೂಮಿನ ಬಾಗಿಲನ್ನು ದೂಡುತ್ತಾಳೆ. ಅಲ್ಲಿ ಅರೆನಗ್ನ ಸ್ಥಿತಿಯಲ್ಲಿದ್ದ ಸುಂದರಿ ಬಾಗಿಲು ದೂಡಿದೊಡನೆ ಗಾಬರಿಯಿಂದ ತನ್ನ ಮೈಯನ್ನು ಮುಚ್ಚಿಕೊಳ್ಳುತ್ತಾಳೆ. ಅವಳನ್ನು ಕಂಡ ಕ್ಲಾರಾ ದಿಗ್ಭ್ರಾಂತಿಗೊಳ್ಳುತ್ತಾಳೆ. ಅತ್ತ ಸುಂದರಿ ಅವಮಾನಗೊಂಡು ತಲೆತಗ್ಗಿಸುತ್ತಾಳೆ)

**[ಕ್ಲಾರಾ ಹಾಗು ಸುಂದರಿಯ ಶಾಕ್‌ಗಳನ್ನು ಸಿನಿಮ್ಯಾಟಿಕ್ ಆಗಿ ತೋರಿಸಲು ಝೂಮ್ ತಂತ್ರ ಬಳಸಲಾಗಿದೆ]**

ಕ್ಲಾರಾ : ಇಟ್ ಇಸ್ ಅ ಸರ್‌ಪ್ರೈಸ್.

ರೆಗ್ಗಿ : (ನಾಚಿಕೆಯಿಂದ ಏನನ್ನು ಹೇಳಬೇಕೆಂದು ತೋಚದೆ)

ಕ್ಲಾರಾ ಅದೂ... ಐ ಮೀನ್...

(ಕ್ಲಾರಾ ತಾನು ತಂದಿದ್ದ ಕೋಟನ್ನು ಅವನಿಗೆ ಬಿಸಾಕಿ ಹೋಗುತ್ತಾಳೆ)

(ರೆಗ್ಗಿ, ಕ್ಲಾರಾ ಕ್ಲಾರಾ ಎಂದು ಕೂಗಿಕೊಂಡು ಅವಳ ಹಿಂದೆ ಬರುತ್ತಾನೆ)

ರೆಗ್ಗಿ : ಕ್ಲಾರಾ.. ಕ್ಲಾರಾ..

(ಕ್ಲಾರಾ ದುಃಖಿಸುತ್ತ ಹೊರಟುಹೋಗುತ್ತಾಳೆ. ರೆಗ್ಗಿ ತಲೆ ಕೆರೆದುಕೊಳ್ಳತ್ತಾ ಒಳಹೋಗುತ್ತಾನೆ)

# ದೃಶ್ಯ 35

***ಹಸ್ತಪ್ರತಿಯಲ್ಲಿ: (ಚಲನಚಿತ್ರದಿಂದ ತೆಗೆದುಹಾಕಲಾಗಿದೆ)***
***ಹಗಲು – ಒಳಾಂಗಣ – ಚರ್ಚ್***

(ಚರ್ಚ್‌ನಲ್ಲಿ ಅತಿಥಿಗಳೆಲ್ಲ ನೆರದಿದ್ದಾರೆ. ಮುಂದಿನ ಸಾಲಿನಲ್ಲಿ ಕ್ಲಾರಾ, ತಾಯಿ, ಸೋದರ ಕುಳಿತಿದ್ದಾರೆ. ಸುಂದರಿಯೂ ಕುಳಿತಿದ್ದಾಳೆ. ವಧೂ ವರರ ಧಿರಿಸಿನಲ್ಲಿ ರೆಗ್ಗಿ ಮತ್ತು ಕ್ಲಾರಾ ಕಾಣಿಸುತ್ತಿದ್ದಾರೆ)

ಫಾದರ್ : ನಿಂಗೆ ಕ್ಲಾರಾ ನ ಮದುವೆಯಾಗೋಕೆ ಒಪ್ಪಿಗೆ ಇದ್ಯಾ?

ರೆಗ್ಗಿ : ಇದೆ. ಐ ಲವ್ ಹರ್
(ಫಾದರ್ ಕ್ಲಾರಾ ಹತ್ತಿರ ಬರುತ್ತಾನೆ)

ಫಾದರ್ : ನಿಂಗೆ ರೆಗ್ಗಿನ ಮದ್ವೆಯಾಗೋಕೆ ಒಪ್ಗೆ ಇದ್ಯಾ?
(ಕ್ಲಾರಾ ರೆಗ್ಗಿಯನ್ನೊಮ್ಮೆ ದುರುಗುಟ್ಟಿ ನೋಡಿ..)

ಕ್ಲಾರಾ : ನೋ....

ರೆಗ್ಗಿ : ವಾಟ್ ಕ್ಲಾರಾ..!!!

ಕ್ಲಾರಾ : ಎಸ್ ಐ ಹೇಟ್ ಯೂ... ಐ ಹೇಟ್ ಯೂ.
(ಕುಳಿತಿದ್ದವರೆಲ್ಲ ಎದ್ದು ನಿಲ್ಲುತ್ತಾರೆ. ರೆಗ್ಗಿ, ಕ್ಲಾರಾ ಕೈ ಹಿಡಿದು ಎಳೆದುಕೊಂಡು..)

ರೆಗ್ಗಿ : ಏನ್ ಮಾಡ್ತಾ ಇದೀಯಾ? ಎಲ್ಲಿ ಮಾತಾಡ್ತಾ ಇದಿಯಾ ಅನ್ನೋದಾದ್ರು ಜ್ಞಾಪಕ ಇದಿಯಾ ಕ್ಲಾರಾ? ಯಾಕೆ? ಏನಾಗಿದೆ ನಿಂಗೆ?
(ಎಂದು ನಾಟಕದ ಮಾತನಾಡುತ್ತಾನೆ)

ಕ್ಲಾರಾ : ನಿನಗೆ ಬೇಕಾಗಿರೋದು ಕ್ಲಾರಾ ಅಲ್ಲ. ಒಂದು ಹೆಣ್ಣು. ಒಂದು ಭೋಗದ ವಸ್ತು. ಮಾಂಸದ ಮುದ್ದೆ ಅಲ್ಲದೆ ನೋಡು. (ಎಂದು ಕೆನ್ನೆಗೆ ಬಾರಿಸುತ್ತಾಳೆ.. ಸುಂದರಿ ತಲೆ ತಗ್ಗಿಸುತ್ತಾಳೆ. ಆಂಥೋನಿ ಅಮ್ಮನನ್ನು ದಿಗ್ಭ್ರಮೆಯಿಂದ ನೋಡುತ್ತಾನೆ)

# ದೃಶ್ಯ 36

***ಹಗಲು – ಕ್ಲಾರಾ ಮನೆಯ ಒಳಗೆ***

(ಆಂಥೋನಿ ಮತ್ತು ತಾಯಿ ಧಾವಿಸಿ ಮನೆಗೆ ಬರುತ್ತಾರೆ. ಕ್ಲಾರಾ ಮಂಚದ ಮೇಲೆ ಮಖಾಡೆ ಮಲಗಿರುವುದನ್ನು ನೋಡಿ ಆಂಥೋನಿ ಮತ್ತು ತಾಯಿ ವಿಷಸೇವಿಸಿದ್ದಾಳೇನೋ ಎಂದು ಗಾಬರಿಗೊಳ್ಳುತ್ತಾರೆ. ಅಷ್ಟರಲ್ಲಿ ಕ್ಲಾರಾ ತಿರುಗಿ ಮಲಗುತ್ತಾಳೆ. ಅವಳ ಕೈಯಲ್ಲಿ ಮತ್ತು ಸುತ್ತ ಮುತ್ತ ಮದ್ಯದ ಬಾಟಲಿಗಳು ಇರುವುದನ್ನು ನೋಡುವ ಆಂಥೋನಿ ಮತ್ತು ತಾಯಿ ದಿಗ್ಭ್ರಮೆಗೊಳ್ಳುತ್ತಾರೆ)

## ದೃಶ್ಯ 37

*ರಾತ್ರಿ – ಕಾರಿನ ಒಳಗೆ*

(ನಡೆದ ಘಟನೆಯನ್ನು ವಿವರಿಸಿದ ನಂತರ)

ಆಂಥೋನಿ : ಆವತ್ತಿಂದ ಅವಳ ಬಾಳಿನ ರೀತೀನೆ ಬದಲಾಯಿಸೋಯ್ತು. ಸ್ಥಳ ಬದಲಾವಣೆ ಆದ್ರೆ ಸರಿ ಹೋಗ್ಬಹುದು ಅಂತ ಇಲ್ಲೀಗ್ ಕರ್ಕೊಂಡ್ ಬಂದೆ. ಆದರೆ ಇಲ್ಲೂ ಏನು ಪ್ರಯೋಜನ ಆಗ್‌ಅಲ್ಲಾ ಅಂತ ಈಗ ಗೊತ್ತಾಗ್ತಾ ಇದೆ.

ಮೂರ್ತಿ : ಯಾಕ್ ಅಷ್ಟು ನಿರಾಸೆ ಪಡ್ತೀರಾ? ಕಾಲ ಕ್ರಮೇಣ ಎಲ್ಲ ಸರಿ ಹೋಗ್ಬಹುದು.

# ದೃಶ್ಯ 38

*ರಾತ್ರಿ – ಕ್ಲಾರಾ ಮನೆಯ ಒಳಗೆ*

| | | |
|---|---|---|
| | | (ಸ್ನಾನ ಮುಗಿಸಿ ಹೊರಬರುವ ಕ್ಲಾರಾಳಿಗೆ ಅತಿಯಾದ ತಲೆ ನೊವು ಕಾಣಿಸಿಕೊಳ್ಳುತ್ತದೆ) |
| ಕ್ಲಾರಾ | : | ಅಬ್ಬಾ ಡಾಮ್ನ್ ಇಟ್.<br>(ಹೊರಗಡೆ ಬಂದು ಗಾಜಿನ ಲೋಟವನ್ನು ತಗೆದು ಕೊಂಡು ಬಾಟಲಿಯಿಂದ ಮದ್ಯವನ್ನು ಸುರಿದು ಕೊಂಡು ಕುಡಿಯುತ್ತಾಳೆ. ಕುಡಿದ ನಂತರ ಸಮಾಧಾನ ಗೊಳ್ಳುತ್ತಾಳೆ. ನಂತರ ಮನೆ ಕಾಲಿಂಗ್ ಬೆಲ್ ರಿಂಗಣಿಸುತ್ತದೆ)<br>.. ಯೆಸ್.. |
| ಮೂರ್ತಿ | : | ಆಂಥೋನಿ ಇದಾರ? |
| ಕ್ಲಾರಾ | : | (ಬಾಟಲನ್ನು ಕೈಯಲ್ಲಿ ಹಿಡಿದುಕೊಂಡಿರುತ್ತಾಳೆ)<br>ಇಲ್ಲಾ ಹೊರ್ಗಡೆ ಹೋಗಿದಾರೆ. ನೀವು? |
| ಮೂರ್ತಿ | : | ನಾನು ಮೂರ್ತಿ ಅಂತ. |
| ಕ್ಲಾರಾ | : | ಮೂರ್ತಿ (ಎಂದು ಏನೋ ನೆನಪಾದಂತೆ ಅನಿಸಿ)<br>.. ಓ ಬನ್ನಿ ಒಳಗಡೆ ಬನ್ನಿ.<br>(ಮೂರ್ತಿ ಒಳಗಡೆ ಬರುತ್ತಾನೆ. ಕ್ಲಾರಾ ಹತ್ತಿರ ಬರುತ್ತಾಳೆ)<br>.. ಕೂತ್ಕೊಳ್ಳಿ. |
| ಮೂರ್ತಿ | : | ಪರ್ವಾಗಿಲ್ಲ. |
| ಕ್ಲಾರಾ | : | ನೀವೆ ಅಲ್ವಾ ಆವತ್ತು ನನ್ನ ಕರ್ಕೊಂಡ್ ಬಂದು ಮಲ್ಗ್‌ಸಿದ್ದು? |
| ಮೂರ್ತಿ | : | ಹೌದು |
| ಕ್ಲಾರಾ | : | ಸಿಟ್ ಡೌನ್ (ಮೂರ್ತಿ ಕುಳಿತುಕೊಳ್ಳದ್ದನ್ನು ನೋಡಿ)<br>.. ಐ ಸೆಡ್ ಸಿಟ್ ಡೌನ್. (ಮೂರ್ತಿ ಕುಳಿತುಕೊಂಡು..) |
| ಮೂರ್ತಿ | : | ಥ್ಯಾಂಕ್ಯೂ. (ಕ್ಲಾರಾಳೂ ಕುಳಿತುಕೊಳ್ಳುತ್ತಾಳೆ) |
| ಕ್ಲಾರಾ | : | ಆವತ್ತು ನನ್ನ ಕರ್ಕೊಂಡ್ ಬಂದಾಗ ನಾನು ಯಾವ್ ಸ್ಥಿತೀಲಿದ್ದೆ? |
| ಮೂರ್ತಿ | : | ಚೆನ್ನಾಗ್ ಕುಡ್ದ್‌ಬಿಟಿದ್ರಿ, ಮೈಮೇಲ್ ಪ್ರಜ್ಞೆ ಇರ್ಲಿಲ್ಲ. ಹ್ಯಾಗ್ ನಿಂತ್ರೆ ಹಾಗ್ ಬೀಳ್ತಾ ಇದ್ರಿ. ನಾನ್ ಹೆಗಲು ಕೊಟ್ಟು ನಿಮ್ಮನ್ನ ಕರ್ಕೊಂಡ್ ಬಂದು ಮಲ್ಗಿಸ್ದೆ. |
| ಕ್ಲಾರಾ | : | ನಂಗ್ ಪ್ರಜ್ಞೆ ಇಲ್ದೇ ಇದ್ದಾಗ ನಿಮ್ಗೇನನ್ನಿಸ್ತು? |

| | | |
|---|---|---|
| ಮೂರ್ತಿ | : | ಅಯ್ಯೋ ಪಾಪ ಅನ್ಸ್ತು. |
| ಕ್ಲಾರಾ | : | ಅಷ್ಟೇನಾ? |
| ಮೂರ್ತಿ | : | ಇನ್ನೇನ್ ಅನ್ನಿಸ್ಬೇಕಾಗಿತ್ತು? |
| ಕ್ಲಾರಾ | : | ರಾತ್ರಿ, ಏಕಾಂತ, ಒಂಟಿ ಹೆಣ್ಣು, ಆ ಸ್ಪರ್ಶ. ಏನೂ ಅನ್ನಿಸ್ಲಿಲ್ವಾ?! |
| ಮೂರ್ತಿ | : | ಹ್ಞಮ್ ಏನೂ ಅನ್ನಿಸ್ಲಿಲ್ಲ.. |
| ಕ್ಲಾರಾ | : | (ಕೋಪಗೊಂಡು) ಸುಳ್ಳು.. ನೀವೆಲ್ಲ ಸುಳ್ಳು.<br>.. ಈ ಗಂಡಸ್ರು ಬಗ್ಗೆ ನಂಗೊತ್ತು. ಒಂಟಿ ಹೆಣ್ಣು ಸಿಕ್ಕಿದ್ರೆ ಸಾಕು ಅವಳನ್ನ ಹಿಸುಕಿ, ಹೊಸಕಿ, ಕಾಲ್ಕಸ ಮಾಡಿ ಬಿಸಾಕೋವ್ರು. ಈ ಗಂಡಸ್ರು ಗುಣಾನೆ ಹೀಗೆ. ಐ ಹೇಟ್ ಮೆನ್.. ಐ ಹೇಟ್ ಮೆನ್<br>(ಬಹಳ ಕೋಪದಿಂದ ಕಿರುಚುತ್ತಾಳೆ) |
| ಮೂರ್ತಿ | : | ನೋಡಿ ಮಿಸ್. ನಿಮ್ಮ ಮನಸ್ಸಿನ ನೋವು ಏನು ಅಂತಾ ನಂಗೆ ಗೊತ್ತಾಗಿದೆ. ನಿಮ್ ಆಂಥೋನಿ ಎಲ್ಲ ಹೇಳಿದಾರೆ. ನಾನಿಷ್ಟ್ ಮಾತ್ರ ಹೇಳಬಲ್ಲೆ. ಮನುಷ್ಯನಿಗೆ ವಿವೇಕವೂ ಇರುತ್ತೆ, ವಿಕಾರವೂ ಇರುತ್ತೆ ಜೊತೆಗೆ ವಿಮರ್ಶೆ ಅನ್ನೋದು ಇರುತ್ತೆ. ಈ ಮನಸ್ಸು ಅನ್ನೋದು ಒಂದು ನೊಣ ಇದ್ದಾ್ಗೆ, ಅದು ತಿಂಡಿ ಮೇಲೂ ಕೂತ್ಕೊಳುತ್ತೆ, ತಿಪ್ಪೆ ಮೇಲೂ ಕೂತ್ಕೊಳುತ್ತೆ. ಯಾರಿಗೆ ಮನಸ್ಸಿನ್ನ ಹತೋಟಿಲಿ ಇಟ್ಕೊಳೊದಿಕ್ಕೆ ಶಕ್ತಿ ಇರೋದಿಲ್ವೋ ಅವರಿಗೂ ಮೃಗಕ್ಕೂ ಏನು ವ್ಯತ್ಯಾಸ ಇರೋದಿಲ್ಲ ಅಲ್ಲಾ |
| ಕ್ಲಾರಾ | : | ನೋಡಿ ಈ ಕಗ್ಗಾ ನಾನು ಬೇಕಾದಷ್ಟು ಕೇಳಿದಿನಿ. ನೀವು ನನ್ನಾಗೆ ಹೆಣ್ಣಾಗಿದ್ದಿದ್ದರೆ ನನ್ನ ನೋವು ಏನೂಂತ ಗೊತ್ತಾಗ್ತಿತ್ತು. (ದುಃಖಿಸುತ್ತಾಳೆ)<br>..ನಾನು ಮರೀಬೇಕು.<br>(ಕೋಪದಿಂದ ಕೂಗಿ..) ಐ ವಾಂಟು ಫರ್‌ಗೆಟ್..<br>.. ಈಗ ನಾನು ಯಾರನ್ನ ಪ್ರೀತಿಸ್ತಾ ಇದೀನಿ ಗೊತ್ತ?<br>(ಟೇಬಲ್ ಹತ್ತಿರ ಹೋಗಿ ಬಾಟಲನ್ನು ತೋರಿಸಿ)<br>.. ಇದನ್ನ, ಇದನ್ನ ಪ್ರೀತಿಸ್ತಾ ಇದೀನಿ.<br>(ಮೂರ್ತಿ ಗಂಭೀರವಾಗಿ ನೋಡುತ್ತಾನೆ)<br>.. ಯಾಕ್ ಗೊತ್ತ? ಇದು ನಂಗೆ ನೋವು ಕೊಡಲ್ಲ. ಹಳೇದೆಲ್ಲ ಜ್ಞಾಪ್ಸಲ್ಲ. ನಂಗೆ ಸುಖಕೊಡುತ್ತೆ. ದಿಸ್ ಇಸ್ ಮೈ ಲವರ್. ದಿಸ್ ಇಸ್ ಮೈ ಲೈಫ್.<br>(ಇನ್ನಷ್ಟು ಮದ್ಯವನ್ನು ಸುರಿದು ಕುಡಿಯುತ್ತಾಳೆ) |

## ದೃಶ್ಯ 39

***ಹಾಡು: ಬಾಳುವಂತ ಹೂವೆ ಬಾಡುವಾಸೆ ಏಕೆ..***



ಬಾಳುವಂತ ಹೂವೆ ಬಾಡುವಾಸೆ ಏಕೆ
ಬಾಳುವಂತ ಹೂವೆ ಬಾಡುವಾಸೆ ಏಕೆ
ಹಾಡುವಂತ ಕೋಗಿಲೆ, ಅಳುವ ಆಸೆ ಏಕೆ
ಕವಲು ದಾರಿಯಲ್ಲಿ ಬಾಳು ಸಾಧ್ಯವೇ
ಅವಳ ದೋಣಿ ಮೇಲೆ ಯಾನ ಯೋಗ್ಯವೇ
ಬಾಳುವಂತ ಹೂವೆ ಬಾಡುವಾಸೆ ಏಕೆ
ಹಾಡುವಂತ ಕೋಗಿಲೆ, ಅಳುವ ಆಸೆ ಏಕೆ...

ಯಾರಿಗಿಲ್ಲ ನೋವು ಯಾರಿಗಿಲ್ಲ ಸಾವು
ವ್ಯರ್ಥ ವ್ಯಸನದಿಂದ, ಸಿಹಿಯೂ ಕೂಡ ಬೇವು
ಬಾಳು ಒಂದು ಸಂತೆ, ಸಂತೆ ತುಂಬ ಚಿಂತೆ
ಮಧ್ಯ ಮದಗಳಿಂದ ಚಿಂತೆ ಬೆಳೆವುದಂತೆ
ಅಂಕೆ ಇರದ ಮನಸನು ದಂಡಿಸುವುದು ನ್ಯಾಯ
ಮೂಕ ಮುಗ್ಧ ಮನಸನು ಹಿಂಸಿಸುವುದು ಹೇಯ
ಸಣ್ಣ ಬಿರುಕು ಸಾಲದೆ, ತುಂಬು ದೋಣಿ ದಡ ಸೇರಲು
ಅಣುವು ಸಾಲದೇ ತುಂಬು ಬದುಕು ಬರಡಾಗಲು.

ಬಾಳುವಂತ ಹೂವೆ ಬಾಡುವಾಸೆ ಏಕೆ
ಹಾಡುವಂತ ಕೋಗಿಲೆ, ಅಳುವ ಆಸೆ ಏಕೆ...

ಬಾಳ ಕದನದಲ್ಲಿ ಭರವಸೆಗಳು ಬೇಕು
ನಾಳೆ ನನ್ನದೆನ್ನುವ ನಂಬಿಕೆಗಳು ಬೇಕು.
ಜೀವರಾಶಿಯಲ್ಲಿ ಮಾನವರಿಗೆ ಆದ್ಯತೆ
ನಾವೆ ಮೂಢರಾದರೆ ಜ್ಞಾನಕೆಲ್ಲಿ ಪೂಜ್ಯತೆ
ಇಲ್ಲಿ ಈಸಬೇಕು ಇದ್ದು ಜಯಿಸಬೇಕು
ನಾಗರೀಕರಾದಮೇಲೆ ಸುಗುಣರಾಗಬೇಕು.
ನಿನ್ನ ಹಳದಿ ಕಣ್ಣಲಿ ಜನರನೇಕೆ ನೀ ನೋಡುವೆ
ಮನದ ಡೊಂಕು ಕಾಣದೆ ಜಗವನೇಕೆ ನೀ ದೂರುವೆ...

ಬಾಳುವಂತ ಹೂವೆ ಬಾಡುವಾಸೆ ಏಕೆ
ಹಾಡುವಂತ ಕೋಗಿಲೆ, ಅಳುವ ಆಸೆ ಏಕೆ...
ಕವಲು ದಾರಿಯಲ್ಲಿ ಬಾಳು ಸಾಧ್ಯವೇ
ಅವಳ ದೋಣಿ ಮೇಲೆ ಯಾನ ಯೋಗ್ಯವೇ
ಬಾಳುವಂತ ಹೂವೆ ಬಾಡುವಾಸೆ ಏಕೆ
ಹಾಡುವಂತ ಕೋಗಿಲೆ, ಅಳುವ ಆಸೆ ಏಕೆ...

**ಗಾಯನ: ಡಾ. ರಾಜ್‌ಕುಮಾರ್**
**ರಚನೆ ಮತ್ತು ಸಂಗೀತ: ಹಂಸಲೇಖ**

**ನಿರ್ದೇಶಕರ ಟಿಪ್ಪಣಿ:**
**ಈ ದೃಶ್ಯವನ್ನು ಚಿತ್ರೀಕರಿಸಲು ಜಾಗಗಳಿಗಾಗಿ (ಲೊಕೇಷನ್) ಹಳೆಯ ಕಂಟೋನ್‌ಮೆಂಟ್ ಏರಿಯಾದ ಪಾಶ್ಚಾತ್ಯ ಸಂಸ್ಕೃತಿಯ ಮನೆಯ ಹುಡುಕಾಟದಲ್ಲಿದ್ದಾಗ ನನ್ನ ನಿರ್ಮಾಪಕರಾದ ಶ್ರೀ ಹರಿ.ಎಲ್. ಖೋಡೆಯವರ ಕಬ್ಬನ್‌ಹೌಸ್ ಸೂಕ್ತವಾಗಿ ಕಂಡು ಅವರ ಅನುಮತಿ ಪಡೆದು ಬಹಳ ಮುತುವರ್ಜಿ ವಹಿಸಿ ಕಬ್ಬನ್‌ಹೌಸ್‌ನಲ್ಲಿ ಚಿತ್ರೀಕರಿಸಿದೆವು.**

# ದೃಶ್ಯ 40

***ಹಗಲು – ಮೂರ್ತಿ ಮನೆಯ ಒಳಗೆ***

| | | |
|---|---|---|
| | | (ಮೂರ್ತಿಯ ಮನೆಯಲ್ಲಿ ಅವನ ಸ್ನೇಹಿತರು ಊಟಮಾಡುತ್ತಿದ್ದಾರೆ. ಅಮ್ಮ ಅವರಿಗೆಲ್ಲ ಬಡಿಸುತ್ತಿದ್ದಾರೆ) |
| ಶ್ರೀಕಾಂತ | : | ಅಮ್ಮ.. ಬೇಜಾರ್ ಮಾಡ್ಕೋ ಬೇಡಿ. ಪ್ರಾಯ ತುಂಬಾ ಕೆಟ್ಟದ್ದು. ಅವನ್ನ ಹೀಗೆ ಬಿಟ್ರೆ ಕಟ್ಟೊಟ್ಟೀಗ್ ಬಿಡ್ತಾನೆ. |
| ಮೂರ್ತಿ ತಾಯಿ | : | ನನ್ನ ಮಗ ಏನು ಅನ್ನೋದು ನನಿಗ್ ಗೊತ್ತು. ಮಲ್ಲಿಗೆ ಗಿಡದಲ್ಲಿ ಮಲ್ಲಿಗೆ ಹೂವೇ ಬಿಡೋದು. ಅವನ ಮನಸ್ಸು ಬಹಳ ಗಟ್ಟಿ. |
| ನಟರಾಜು | : | ಹೌದಲ್ವೇ, ಎಷ್ಟೇ ಆದ್ರೂ ತಾಯಿ ಹೃದಯ ಅಲ್ವೇ, ಏನೇ ಮಾಡುದ್ರು ಅವನ್ನ ವಹಿಸ್ಕೋತಾರೆಯೇ ಹೊರತು ನಮ್ಮ ಮಾತಾ ಕೇಳ್ತಾರೆ. ಬಂದ್ ಬಂದಾಗ ಕೊಡೋ ಉಪ್ಪಿಟ್ಟು ಕಾಫಿಗೂ ಕಲ್ಲಾ್ಟಕ್ಬೇಡಾ ಕಮಂಗಿ. ತಿಂದು ಏಳು. |
| | | (ಮೂರ್ತಿ ಬಂದು ಇವರ ಮಾತನ್ನು ಕೇಳಿಸಿ–ಕೊಳ್ಳುತ್ತಿರುತ್ತಾನೆ) |
| ಶ್ರೀಕಾಂತ | : | ಲೇ ನಾನೇನು ಅವನ್ ಮೇಲೆ ಚಾಡಿ ಹೇಳ್ತಿದಿನೇನೋ? ಅವನು ನನ್ನ ಹಾಗೆ ಚೆನ್ನಾಗಿರ್ಲೀ ಅಂತ ನನ್ನ ಆಸೆ. |
| ಮೂರ್ತಿ | : | ಆಹಹ.. ನಿನ್ನ ಹಾಗೆ ಚೆನ್ನಾಗಿರ್ಬೇಕೋ ನಾನು? ಮೊನ್ನೆ ನೆಹರು ಸರ್ಕಲ್‌ನಲ್ಲಿ ಆ ಹುಡುಗಿ ಜೊತೆ.. |
| | | (ಎಂದು ಹೇಳುತ್ತಿದ್ದಂತೆಯೇ ಶ್ರೀಕಾಂತ ಕಕ್ಕಾಬಿಕ್ಕಿ–ಯಾಗುತ್ತಾನೆ ನಂತರ ಮೂರ್ತಿ ಹತ್ತಿರ ಓಡಿಹೋಗಿ ಸುಮ್ಮನಿರುವಂತೆ ಬೇರೆಡೆಗೆ ಮಾತನ್ನು ಹೊರಳಿಸುತ್ತಾನೆ. ಇತ್ತ ನಟರಾಜು, ಶ್ರೀಧರ ನಗುತ್ತಿರುತ್ತಾರೆ) |
| ಶ್ರೀಕಾಂತ | : | ನೂರು ವರ್ಷ ಆಯಸ್ಸು ನಿನಗೆ.. |
| ಮೂರ್ತಿ | : | ಹೌದಾ? |
| ಶ್ರೀಕಾಂತ | : | ನಿನ್ನ ನಾನ್ ನೆನುಸ್ಕೊತಾ ಇದ್ದೆ. |
| ಮೂರ್ತಿ | : | ಸರ್ಕಲ್‌ನಲ್ ಜ್ಞಾಪಕ ಬರ್ಲಿಲ್ಲ ನಿನಗೆ. |
| ಶ್ರೀಕಾಂತ | : | (ಮತ್ತೆ ಬೇರೆಡೆಗೆ ಮಾತನ್ನು ಹೊರಳಿಸುವಂತೆ) ಉಪ್ಪಿಟ್ ಚೆನ್ನಾಗಿದೆ. |
| ಮೂರ್ತಿ | : | ಇರ್ಲಿ ಇರ್ಲಿ ನೀನ್ ತಿನ್ನು. |
| ಶ್ರೀಧರ | : | ಹೌದು, ಎರೆಡು ದಿವಸದಿಂದ ಪತ್ತೇನೆ ಇಲ್ಲಾ? ಎಲ್ಲಿ ಹೋಗಿದ್ಯಪ್ಪ? |

| | | |
|---|---|---|
| ಮೂರ್ತಿ | : | ನೂರೆಂಟು ಕೆಲ್ಸ ಇರುತ್ತಪ್ಪ. ಅದನ್ನೆಲ್ಲ ಹೇಳೋಕಾಗುತ್ತಾ? (ಅಮ್ಮನಿಗೆ) ಅಮ್ಮ ತಿಂಡಿ.. |
| ಶ್ರೀಕಾಂತ | : | ಅಲ್ಲಾ ಟಿಬಿ ಗೀಬಿ ಅಂತ ಏನಾದ್ರು... (ಎಂದು ಮೆಲ್ಲಗೆ ಗೊಣಗುತ್ತಾನೆ, ಮೂರ್ತಿ ಮುಖ ನೋಡುತ್ತಾನೆ) |
| ನಟರಾಜು | : | (ಪೂಸಿ ಹೊಡೆಯುತ್ತ, ತೋಳನ್ನು ಒತ್ತುತ್ತಾ) ಅಲ್ಲಾ ನಾವು ನಿನ್ನ ಸ್ನೇಹಿತ್ರು, ಗೆಳೆಯರು, ಫ್ರೆಂಡ್ಸು.. |
| ಮೂರ್ತಿ | : | ಡಿಕ್ಷನರಿ ಬರೀತಾ ಇದ್ಯಾ? |
| ನಟರಾಜು | : | ನಿನಗ್ ಅರ್ಥವಾಗ್ಲೀ ಅಂತ.. |
| ಮೂರ್ತಿ | : | ಒತ್ತುತಾ ಇದಿಯಾ? ಒತ್ತು ಒತ್ತು.. |
| ಶ್ರೀಧರ | : | ಅಲ್ಲಾ ನಮ್ ಕೈಗೂ ಸಿಕ್ಕಿಲ್ಲ? ಕಣ್ಣಿಗೂ ಕಾಣ್ಸಿಲ್ಲ. ಎಲ್ಲಿ ಮಾಯಾ ಆಗಿದ್ದೆ ಗುರೂ? |
| ಮೂರ್ತಿ | : | ಋಷಿ ಮೂಲ, ನದಿ ಮೂಲ, ಮೂರ್ತಿ ಮೂಲ ಇದನ್ನೆಲ್ಲ ಕೆದುಕ್ಬಾರ್ದು ಮರಿ. ಜೀವಕ್ಕೊಳ್ಳೇದಲ್ಲ. ತಾಕತ್ತಿದ್ದರೆ ಪತ್ತೆಮಾಡು ನಾನೆಲ್ಲಿಗ್ಹೋಗಿದ್ದೆ ಅಂತ. |



| | | |
|---|---|---|
| ನಟರಾಜು | : | ಚಾಲೆಂಜ್..? |
| ಶ್ರೀಧರ | : | ಚಾಲೆಂಜಾ? |
| ನಟರಾಜು | : | ಆಕ್ಸೆಪ್ಟೆಡ್ |
| ಮೂರ್ತಿ | : | ಹೇ ಹೊಗಲೆ.. |
| ನಟರಾಜು | : | ಎರೆಡು ದಿವ್ಸಾ ನಮ್ಮ ಕಂಪೆನಿಗೆ ಚಕ್ಕರ್ ಹೊಡ್ದಿದ್ದಕ್ಕೆ ನಿನಗೇನ್ ಪನಿಷ್‌ಮೆಂಟ್ ಅಂತ ಗೊತ್ತ? |

| | | |
|---|---|---|
| ಮೂರ್ತಿ | : | ಏನೂ? |
| ನಟರಾಜು | : | ನಾಳೆ ನಾಳಿದ್ದು ನೀನೆಲ್ಲು ಹೋಗ್ದೆ ನಮ್ಮ ಜೊತೆಲೇ ಇರ್ಬೇಕು. (ಮೂರ್ತಿ ಆಶ್ಚರ್ಯಗೊಳ್ಳುತ್ತಾನೆ, ಸ್ನೇಹಿತರೆಲ್ಲರೂ ಖುಷಿಯಾಗುತ್ತಾರೆ) |
| ಶ್ರೀಕಾಂತ | : | 48 ಹವರ್ಸ್.. |
| ಶ್ರೀಧರ | : | ಆಕ್ಸೆಪ್ಟೆಡ್? |
| ನಟರಾಜು | : | ಆಕ್ಸೆಪ್ಟೆಡ್ (ಎಂದು ಖುಷಿಗೊಳ್ಳತ್ತಾನೆ) |
| ಮೂರ್ತಿ | : | ಓ ಮೈ ಗಾಡ್ (ಎಂದು ತಲೆ ಚಚ್ಚಿಕೊಳ್ಳುತ್ತಾನೆ. ಸ್ನೇಹಿತರೆಲ್ಲರೂ ಖುಷಿಯಾಗುತ್ತಾರೆ) |

# ದೃಶ್ಯ 41

***ಹಗಲು – ಕ್ಲಾರಾ ಮನೆಯ ಒಳಗೆ***

| | | |
|---|---|---|
| | | (ಕ್ಲಾರಾ, ಮೂರ್ತಿಗಾಗಿ ಕಾಯುತ್ತಾ ಅತ್ತಿಂದಿತ್ತ ಓಡಾಡುತ್ತಿರುತ್ತಾಳೆ) |
| ಆಂಥೋನಿ | : | ಕ್ಲಾರಾ, ಹೇಯ್ ಕ್ಲಾರಾ. ಎರೆಡ್ ದಿವ್ಸದಿಂದ ನೋಡ್ತಾ ಇದೀನಿ ಒಂದೇ ಸಮನೆ ಯೋಚ್ನೆ ಮಾಡ್ತಿದೀಯಲ್ಲ? ಏನದು? |
| ಕ್ಲಾರಾ | : | ನಂಗೊತ್ತಿಲ್ಲ. |
| ಆಂಥೋನಿ | : | (ನಗುತ್ತ..) ನೀನ್ ಯೋಚ್ನೆ ಮಾಡ್ತಾ ಇರೋದು ನಿನಗೇ ಗೊತ್ತಿಲ್ವಾ? |
| ಕ್ಲಾರಾ | : | ಪ್ಲೀಸ್ ಅಣ್ಣ ಈಗ ನನ್ನನ್ನೇನೂ ಕೇಳ್ಬೇಡ. |
| ಆಂಥೋನಿ | : | ಹ್ಹಾಂ ಕಾಫಿ ತರ್ಸಿದ್ ಕೂಡ ಹಾಗೇ ಇದೆ. ನೀನ್ ಕುಡಿಲೇ ಇಲ್ವಾ? |
| ಕ್ಲಾರಾ | : | ಕುಡಿಬೇಕು ಅಂತ ನನಗನ್ನಿಸ್‌ಅಲ್ಲ ಅಷ್ಟೆ (ಎಂದು ಕೋಪದಿಂದ ನುಡಿದು ಒಳಗೆ ಹೋಗುತ್ತಾಳೆ. ಮೂರ್ತಿ ಮನೆ ಪ್ರವೇಶಿಸಿ..) |
| ಮೂರ್ತಿ | : | ಹೆಲೋ ಆಂಥೋನಿ.. (ಎಂದ ತಕ್ಷಣ ಕ್ಲಾರಾ ಅಲ್ಲೇ ನಿಂತು ಮೂರ್ತಿ ಬಂದಿರುವುದನ್ನು ನೋಡಿ ಖುಷಿಯಾಗಿ ಮೂರ್ತಿಯ ಹತ್ತಿರ ಬರುತ್ತಾಳೆ. ನಂತರ ಆಂಥೋನಿ ಮೂರ್ತಿಯ ಹತ್ತಿರ ಬಂದು) |
| ಆಂಥೋನಿ | : | ಹಲೋ ಮಿ.ಮೂರ್ತಿ. |
| ಮೂರ್ತಿ | : | ಹಲೋ |
| ಆಂಥೋನಿ | : | ನೋಡುದ್ರಾ ಅವಳ್ ಮುಖದಲ್ಲಿ ಅದೇನ್ ಕಳೆ ಬಂದಿದೆ ಅಂತ? ಇಷ್ಟು ದಿನಕ್ಕೆ ಇವತ್ತೇ ನಾನ್ ಅವಳ್ ಮುಖದಲ್ಲಿ ನಗು ನೋಡ್ತಾ ಇರೋದು. ಬೆಳಗ್ಗಿಂದ ಕಾಫಿನು ಕುಡಿದೇ, ತಿಂಡಿನೂ ತಿಂದೆ ಕೂತಿದಾಳೆ. ಬ್ರೇಕ್ಫಾಸ್ಟ್ ಅಂದ್ರೆ ಇಂಟ್ರಸ್ಟೇ ಇಲ್ಲ ಅಂತಾಳೆ. |
| ಮೂರ್ತಿ | : | ನನ್ನ ಗತಿಯೇನು. ಮನೇಲ್ ತಿಂಡಿನೂ ತಿಂದೆ ನಾನು ಇಲ್ಲಿಗೇ ಬಂದ್ಬಿಟಿದಿನಿ. |
| ಕ್ಲಾರಾ | : | (ಮೂರ್ತಿಗೆ) ಅಯ್ಯೋ ನೀವ್ ತಿಂಡಿ ತಿಂದಿಲ್ವಾ? |
| ಮೂರ್ತಿ | : | ಊಹುಂ (ಎಂದು ಸಂಜ್ಞೆ ಮಾಡುತ್ತಾನೆ) |
| ಕ್ಲಾರಾ | : | ನಾನೂ ತಿಂದಿಲ್ಲ. ಈ ಊಟ ತಿಂಡಿ ತುಂಬ ಬೇಜಾರು. |

| | | |
|---|---|---|
| | | ಎಲ್ಲಾದ್ರು ಹೊಸ ಜಾಗಕ್ ಕರ್‍ಕೊಂಡ್ಹೋಗ್ತೀರಾ? |
| ಮೂರ್ತಿ | : | ಹೋಗೋಣ, ಹೋಗೋಣ.. |
| ಕ್ಲಾರಾ | : | ಹಾಗೆ ಸುತ್ತಾಡ್ಕೊಂಡ್ ಬರೋಣ. |
| ಮೂರ್ತಿ | : | ಬನ್ನೀ.. (ಆಂಥೋನಿಯನ್ನು ಕರೆಯುತ್ತಾನೆ) |
| ಆಂಥೋನಿ | : | ಇಲ್ಲ, ನಾನೊಬ್ಬ ಫ್ರೆಂಡ್ಗೋಸ್ಕರ ವೈಟ್ ಮಾಡ್ತಾ ಇದಿನಿ. ನೀವ್ ಹೋಗ್ಬಿಟ್ ಬನ್ನಿ. ಹೋಗಿ (ಎಂದು ಕ್ಲಾರಾಳಿಗೆ ಮೂರ್ತಿಗೆ ಹೇಳುತ್ತಾನೆ) |
| ಕ್ಲಾರಾ | : | ಬರ್ತೀವಣ್ಣ (ಎಂದು ಕ್ಲಾರಾ ಮತ್ತು ಮೂರ್ತಿ ಹೊರಡುತ್ತಾರೆ. ಆಂಥೋನಿ ಅವರನ್ನು ನೋಡುತ್ತ ನಗುಮುಖದಲ್ಲಿ ನಿಂತಿದ್ದಾನೆ.) |

# ದೃಶ್ಯ 42

*ಹಗಲು – ರೈಲ್ವೆ ಗೇಟ್*

(ಮೂರ್ತಿ ಮತ್ತು ಕ್ಲಾರಾ ಕಾರಿನಲ್ಲಿ ಬರುತ್ತಿದ್ದಾರೆ. ಮೂರ್ತಿ ಗಾಡಿ ಓಡಿಸುತ್ತಿದ್ದಾನೆ. ಇಬ್ಬರೂ ಖುಷಿಯಲ್ಲಿದ್ದಾರೆ. ಅವರು ಬರುವ ಸಮಯಕ್ಕೆ ಸರಿಯಾಗಿ ಒಂದು ರೈಲ್ವೇ ಹಳಿಯ ಹತ್ತಿರ ರೈಲು ಹೋಗುವುದಕ್ಕಾಗಿ ಗೇಟನ್ನು ಹಾಕುತ್ತಾರೆ. ರೈಲು ಹೋಗುವುದನ್ನೇ ನೋಡುವ ಮೂರ್ತಿಗೆ ಬೇಸರವಾಗಿ ಇಂದಿರಾಳ ನೆನಪಾಗುತ್ತದೆ, ಹಿನ್ನಲೆಯಲ್ಲಿ ಅವಳ ಧ್ವನಿ ಕೇಳಿಸಿದಂತಾಗುತ್ತದೆ. ಅವಳನ್ನು ವ್ಯಾಸರಾಯ ಎಳೆದೊಯ್ಯುತ್ತಿರುವುದು ನೆನಪಿಗೆ ಬರುತ್ತದೆ. ಮೂರ್ತಿ ಅದನ್ನೆಲ್ಲ ನೆನೆಸಿಕೊಂಡು ಕೋಪಗೊಳ್ಳುತ್ತಾನೆ. ನಂತರ ಗಾಡಿಯನ್ನು ವೇಗವಾಗಿ ಓಡಿಸಿಕೊಂಡು ಹೋಗುತ್ತಾನೆ)

**ನಿದೇಶಕರ ಟಿಪ್ಪಣಿ:**

**16–09–1992ರಂದು ಈ ದೃಶ್ಯವನ್ನು ಯಶವಂತಪುರದ ಕಿರ್ಲೋಸ್ಕರ್ ಕಾರ್ಖಾನೆ ಮತ್ತು ಮೈಸೂರು ಲ್ಯಾಂಪ್ಸ್ ಮಧ್ಯಭಾಗದಲ್ಲಿದ್ದ ರೈಲ್ವೇ ಗೇಟಿನ ಬಳಿ ಚಿತ್ರೀಕರಿಸಲಾಯಿತು.**

# ಮಧ್ಯಂತರ

# ದೃಶ್ಯ 43

*ಹಸ್ತಪ್ರತಿಯಲ್ಲಿ: (ಚಲನಚಿತ್ರದಿಂದ ತೆಗೆಯಲಾಗಿದೆ)*
*ಹಗಲು – ರೈಲ್ವೇ ಗೇಟಿನ ಬಳಿ*

(ಮೂರ್ತಿಗೆ ಚಲಿಸುತ್ತಿರುವ ರೈಲಿನಲ್ಲಿ ವ್ಯಾಸರಾಯನನ್ನು ಕಂಡಂತೆ ಭಾಸವಾಗಿ, ಕೋಪೋದ್ರಿಕ್ತನಾಗಿ ಕುಳಿತಿದ್ದಾನೆ. ಕ್ಲಾರಾ, ಮೂರ್ತಿಯ ಅನ್ಯಮನಸ್ಕ ಸ್ಥಿತಿಯನ್ನು ಮನಗಂಡು ಆತನನ್ನು ಎಚ್ಚರಿಸಿದಾಗ ವಾಸ್ತವಕ್ಕೆ ಬಂದ ಮೂರ್ತಿ ಹಿಂದಿರುವ ವಾಹನಗಳು ದಾರಿಕೊಡುವಂತೆ ಶಬ್ದವನ್ನು ಮಾಡುತ್ತಿರುವುದು ಗಾಬರಿಯನ್ನುಂಟು ಮಾಡುತ್ತದೆ. ತನ್ನ ಮುಂದಿನ ರೈಲು ಹೋದದ್ದು, ಗೇಟು ತೆಗದದ್ದು, ವಾಹನಗಳು ಸಂಚರಿಸತೊಡಗಿದ್ದು, ತಾನು ಮರೆತು ಅವರಿಗೆಲ್ಲ ಅಡಚಣೆಯಾಗಿದ್ದು ನೆನಪಿಗೆ ಬಂದು ಸರಸರನೆ ಕಾರನ್ನು ಪ್ರಾರಂಭಿಸಿ ಚಾಲನೆ ಮಾಡುತ್ತಾನೆ)

# ದೃಶ್ಯ 44

*ಹಗಲು – ನಂದಿಬೆಟ್ಟ*

| | | |
|---|---|---|
| | | (ಅನ್ಯಮನಸ್ಕನಾಗಿ ಯೋಚಿಸುತ್ತ ನಿಂತಿರುವ ಮೂರ್ತಿಯನ್ನು ಗಮನಿಸಿ ಕ್ಲಾರಾ) |
| ಕ್ಲಾರಾ | : | ಮೂರ್ತಿ.. (ಪ್ರತಿಕ್ರಿಯೆ ನೀಡದಿದ್ದನ್ನು ಗಮನಿಸಿ ಮತ್ತೊಮ್ಮೆ ಜೋರಾಗಿ..)<br>.. ಮೂರ್ತಿ ಎಲ್ಲಿದೀರ ನೀವು? |
| ಮೂರ್ತಿ | : | (ಎಚ್ಚರಗೊಂಡು) ಹ್ಹಮ್.. ಇಲ್ಲೇ ಇದೀನಲ್ಲ. |
| ಕ್ಲಾರಾ | : | ಊಹುಂ ಲೆವೆಲ್ ಕ್ರಾಸಿಂಗ್‌ನಿಂದ ನೋಡ್ತಾ ಇದಿನಿ, ನೀವು ಅಲ್ಲಿ ಆ ಲೋಕಕ್ಕೆ ಹೋದೋರು, ಇನ್ನು ಈ ಲೋಕಕ್ಕೆ ಬಂದಿಲ್ಲಾ ಅಂತ ನನಿಗನ್ನಿಸ್ತಾ ಇದೆ. |
| ಮೂರ್ತಿ | : | ಹಮ್ ಒಬ್ಬೊಬ್ರುದು ಒಂದೊಂದು ಲೋಕ. |
| ಕ್ಲಾರಾ | : | ಓಹೋ. ಹಾಗಾದ್ರೆ ನಿಮ್ಮನ್ನ ಇಷ್ಟು ಆಳವಾಗಿ ಯೋಚ್ನೆ ಮಾಡ್ಸ್ತಾಯಿರೋ ಆ ಲೋಕ ಯಾವ್ದು? ನನಗೆ ಹೇಳ್ದೇ ಇರೋಂಥದ್ದಾ? |
| ಮೂರ್ತಿ | : | ಹಾಗೇನಿಲ್ಲ. (ಎಂದು ಒಂದು ಕಡೆ ಬಂದು ಕುಳಿತು– ಕೊಳ್ಳುತ್ತಾನೆ. ನಂತರ ಕ್ಲಾರಾಳೂ ಅಲ್ಲಿಗೆ ಬರುತ್ತಾಳೆ ಅವಳನ್ನೂ ಕುಳಿತುಕೊಳ್ಳಲು ಹೇಳುತ್ತಾನೆ) |

*ಹಸ್ತಪ್ರತಿಯಲ್ಲಿ: (ಚಲನಚಿತ್ರದಿಂದ ತೆಗೆಯಲಾಗಿದೆ)*

| | | |
|---|---|---|
| ***ಕ್ಲಾರಾ*** | *:* | ***ಮಾತಿನಲ್ಲಿ ಇಲ್ಲಾಂದ್ರು ಕಣ್ಣಲ್ಲಿ ಏನೋ ನೋವು ತುಂಬಿಕೊಂಡಿದೆ. ಅದೇನು ಅಂತ ಹೇಳ್ಬಾರ್ದಾ?*** |
| ***ಮೂರ್ತಿ*** | *:* | ***ಸುಖ ಸಂತೋಷಾನ ಇನ್ನೊಬ್ರು ಜೊತೆ ಹಂಚ್ಕೊಬೇಕೇ ಹೊರತು ಕಷ್ಟ ಕಾರ್ಪಣ್ಯಗಳನ್ನ ಅವರೇ ಅನುಭವಿಸಬೇಕಲ್ವಾ?*** |
| ***ಕ್ಲಾರಾ*** | *:* | ***ಮೂರ್ತಿ ನೀವು ನನ್ನ ಬೇರೆಯವಳು ಅಂತ ತಿಳ್ಕೊಂಡ್ರೆ ಏನೂ ಹೇಳ್ಬೇಡಿ. ನಿಮಗೆ ಬೇಕಾದವಳು ಅನ್ನೋ ಭಾವನೆ ಇದ್ರೆ ನೀವು ಖಂಡಿತಾ ಹೇಳ್ಲೇಬೇಕು.*** |

| | | |
|---|---|---|
| ಮೂರ್ತಿ | : | ಕೂತ್ಕೊಳಿ. ಹೇಳ್ಲಾ?.. |
| ಕ್ಲಾರಾ | : | ಹ್ಞೂಂ.. |
| ಮೂರ್ತಿ | : | ಅದೊಂದು ನಿರಾಸೆ ಕಥೆ. ನನ್ನ ಬಾಳಿನ ವ್ಯಥೆ. ಈಚೆಗೆ |

ಸಾಗರದತ್ರ ಒಂದು ಹಳ್ಳೀಲಿ ನನ್ನ ಸ್ನೇಹಿತನ ಮದುವೇಗೆ ಅಂತ ಹೋಗಿದ್ದೆ. ಬರೋವಾಗ ತಾಳಗುಪ್ಪ ಸ್ಟೇಷನ್ನಲ್ಲಿ ರೈಲು ಹತ್ತುದೆ.

**[ಮೂರ್ತಿಯ ಹಿಂದಿನ ಕಥೆಯನ್ನು ವಾಚ್ಯ ಮಾಡುವ ಬದಲು ಸೂಚ್ಯವಾಗಿ ಸಣ್ಣ ಸಣ್ಣ ತುಣುಕುಗಳನ್ನಾಗಿಸಿ ಸಿನಿಮ್ಯಾಟಿಕ್ ಆಗಿ ತೋರಿಸಲಾಗಿದೆ. ಈ ತಂತ್ರದಿಂದಾಗಿ ಸಿನಿಮಾದ ಓಟ ಮತ್ತಷ್ಟು ವೇಗ ಪಡೆದುಕೊಳ್ಳುತ್ತದೆ.]**

(ಫ್ಲ್ಯಾಶ್ ಬ್ಯಾಕ್ ಮುಗಿಯುತ್ತದೆ.. ಹಳೆಯದನ್ನೆಲ್ಲ ನೆನೆಸಿಕೊಂಡು ಮೂರ್ತಿ ದುಃಖತಪ್ತನಾಗುತ್ತಾನೆ)

ಮೂರ್ತಿ : ಆ ಗೇಟ್ಹತ್ರ ಟ್ರೈನ್ ನೋಡ್ತಾ ಇದ್ದಾಗೆ ಇಂದಿರಾನ ಜ್ಞಾಪಕ ಬಂದ್ಬಿಡ್ತು. ಈಗವ್ಳೆಲ್ಲಿದಾಳೊ, ಏನಾಗಿದ್ಯೋ ಅವಳ್ಗತಿ. (ಎಂದು ಕಣ್ಣೀರು ಒರೆಸಿಕೊಳ್ಳುತ್ತಾನೆ)

ಕ್ಲಾರಾ : ಮೂರ್ತಿ, ಯೂ ಅರ್ ಗ್ರೇಟ್ ರಿಯಲಿ ಗ್ರೇಟ್. ಇಂಥಾ ನೋವನ್ನ ಹೃದಯದಲ್ಲಿ ಇಟ್ಕೊಂಡು ನಗುನಗುತ್ತಾ ಇರ್ತೀರಿ. ಆ ದೇವ್ರು ನಿಮ್ಗೆ ಎಷ್ಟು ಒಳ್ಳೆ ಮನಸ್ಸ್ ಕೊಟ್ಟಿದಾನೆ. ನಿಮ್ಮನ್ನ ಹೆತ್ತ ತಾಯಿ ತುಂಬ ತುಂಬ ಪುಣ್ಯ ಮಾಡಿದ್ರು.
(ಎಂದು ಮೂರ್ತಿಯ ಕೈ ಹಿಡಿದುಕೊಳ್ಳುತ್ತಾಳೆ, ನಂತರ ಇಬ್ಬರೂ ಎದ್ದು ನಡೆದು ಹೋಗುತ್ತಾರೆ. ಅಲ್ಲಿಗೆ ನಟರಾಜು, ಶ್ರೀಧರ, ಶ್ರೀಕಾಂತ ಮೂವರು ಮೂರ್ತಿಯನ್ನು ಹಿಂಬಾಲಿಸಿಕೊಂಡು ಬಂದಿರುತ್ತಾರೆ.)

ನಟರಾಜು : ಕಳ್ಳ ಸಿಕ್ಕಿಬಿದ್ದ. ಇವನ್ಯಾಕ್ ನಮ್ ಕೈಗೆ ಸಿಗ್ತಿರ್ಲಿಲ್ಲಾಂತ ಈಗ ಗೊತ್ತಾಯ್ತು.

ಶ್ರೀಧರ : ಇಬ್ಬರಲ್ಲಿ ಒಬ್ಬರನ್ನ ಫಾಲೋ ಮಾಡಿದ್ರೆ ಸಾಕು ಒಳ್ಳೆ ಲವ್ ಸ್ಟೋರಿ ಸಿಗುತ್ತೆ.

ಶ್ರೀಕಾಂತ : ಪರ್ವಾಗಿಲ್ಲ ಇನ್ನೊಂದ್ ಹುಡ್ಗೀ ಕಂಡ್ಹಿಡ್ಕೊಂಡ್ಬಿಟಿದಾನೆ.
(ಮೂವರು ನಗುವರು)

ಮೂವರು : ಏನಾದ್ರು ಮಾಡ್ಬೇಕಲ್ಲ...

**ನಿದೇಶಕರ ಟಿಪ್ಪಣಿ:**

**ದೃಶ್ಯ 44 ಮತ್ತು 45ರಲ್ಲಿದ್ದ ಸಂಭಾಷಣೆಗಳನ್ನು ಸಂಕಲನದ ಸಮಯದಲ್ಲಿ ಸಂಕಲನಕಾರರಾದ ಪಿ.ಭಕ್ತವತ್ಸಲಂರವರು ಫ್ಲ್ಯಾಶ್ ಬ್ಯಾಕ್‌ನ ನಂತರದಲ್ಲಿ ಬರುವಂತೆ ಬದಲಾಯಿಸಿದರು. ಹಾಗಾಗಿ ಸಿನಿಮಾ ಈ ರೀತಿ ಬದಲಾವಣೆಯಾಯಿತು. ಇದು ಚಿತ್ರದ ಓಟಕ್ಕೆ ಗಮನೀಯವಾಗಿ ಪರಿಣಾಮ ಬೀರಿತು.**

# ದೃಶ್ಯ 45

***ಹಗಲು – ಮೂರ್ತಿಮನೆಯ ಒಳಗೆ***

| | | |
|---|---|---|
| | | (ಮೂರ್ತಿತಾಯಿ ಅಡುಗೆ ಮನೆಯಲ್ಲಿ ಏನೋ ಕೆಲಸ ಮಾಡುತ್ತಿರುವಾಗ ಭಿಕ್ಷೆಯವರು ಕೂಗಿದಂತಾಗುತ್ತದೆ) |
| ಮೂರ್ತಿ ತಾಯಿ | : | (ಸ್ವಗತ) ಇದೇನು ಭಿಕ್ಷುಕರ ದಂಡೇ ಬಂದ್ಹಾಗಿದೆ. (ಹೊರಗಡೆ ಬರುತ್ತಾ..) .. ಬೆಳೆಗ್ಗೆ ಇಷ್ಟೊತ್ತಿಗೆ ಬಂದ್ರೆ ಅಡುಗೆಯಾಗಿರುತ್ತ? (ಅವರೆಲ್ಲರೂ ಮೂರ್ತಿ ಸ್ನೇಹಿತರೆಂದು ತಿಳಿದು ನಗುತ್ತ) .. ಏನ್ರೋ ನಿಮ್ ಅವತಾರ? ಯಾರೋ ಭಿಕ್ಷುಕರು ಅನ್ಕೊಂಡೆ. |
| ಮೂವರು | : | ನಾವು ಭಿಕ್ಷೆ ಕೇಳೋಕೆಮ್ಮ ಬಂದಿರೋದು. |
| ಮೂರ್ತಿ ತಾಯಿ | : | ಅದೇನ್ ಭಿಕ್ಷೇನ್ರೋ? |
| ಮೂವರು | : | ಅಭಿಪ್ರಾಯ ಭಿಕ್ಷೆ |
| ಮೂರ್ತಿ ತಾಯಿ | : | ಹಾಗಂತ ಒಂದ್ ಇದ್ಯಾ? |
| ಮೂವರು | : | ಇಲ್ದಿದ್ರೆ ಸೃಷ್ಟಿ ಮಾಡ್ಕೊಂಡ್ರೆ ಆಯ್ತು |



| | | |
|---|---|---|
| ಮೂರ್ತಿ ತಾಯಿ | : | ಓಹೋ |
| ಶ್ರೀಧರ | : | ಅಮ್ಮಾ, ಪುರಂದರ ದಾಸರು ಹೇಳಿದಾರೆ. |
| ಮೂರ್ತಿ ತಾಯಿ | : | ಏನಂತ..? |
| ಶ್ರೀಧರ | : | ಹೊಲೆಯ ಹೊರಗಿಹನೇ? ಊರೊಳಗಿಲ್ಲವೇ? .. ಗುರುಹಿರಿಯರ ನಮಿಸದಾತನೇ ಹೊಲೆಯ .. ಆಸೆಮಾತನು ಕೊಟ್ಟು .. ಭಾಷೆ ತಪ್ಪುವ ಹೊಲಯ.. ಅಂತ |

| | | |
|---|---|---|
| | | .. ಅಮ್ಮ ನಿಮ್ಮ ಅಭಿಪ್ರಾಯ ಏನು? |
| ಮೂರ್ತಿ ತಾಯಿ | : | ಮಹಾತ್ಮರು, ದಾಸರು ಹೇಳಿದ ಮೇಲ್ ಮುಗೀತು. ಒಂದೊಂದ್ ಮಾತೂ ಮುತ್ತು. |
| ನಟರಾಜು | : | ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನೇನಾದರು ಬಲ್ಲಿರಾ? ಬಲ್ಲಿರಾ? ಅಂತ ಕನಕದಾಸರು ಹೇಳಿದಾರಮ್ಮ. |
| ಮೂರ್ತಿ ತಾಯಿ | : | ಆಹಹಾ ಒಂದೊಂದು ಮಾತೂ ಮಾಣಿಕ್ಯ. |
| ಶ್ರೀಕಾಂತ | : | ಸರ್ವಜ್ಞ ಏನ್ ಹೇಳಿದಾನೆ ಗೊತ್ತೇನಮ್ಮ? |
| ಮೂರ್ತಿ ತಾಯಿ | : | ಏನ್ ಹೇಳಿದಾರಪ್ಪ? |
| ಶ್ರೀಕಾಂತ | : | ಜಾತಿಹೀನ ಮನೆಯ ಜ್ಯೋತಿ ತಾ ಹೀನವೆ..<br>ಜಾತಂಗೆ ಜಾತನೆನಲೇಕೆ?<br>ಶಿವನೊಲಿದಾತನೇ ಜಾತ ಸರ್ವಜ್ಞ.. |
| ಮೂರ್ತಿ ತಾಯಿ | : | ಮಹಾತ್ಮರು ಹೇಳೋದು ಸತ್ಯ ಕಣಪ್ಪ. ಜಗತ್ತಿನಲ್ಲಿರೋದು ಎರೆಡೇ ಜಾತಿ. ಒಂದು ಗಂಡು ಒಂದು ಹೆಣ್ಣು. ಅದ್ರಲ್ಲೂ ಎರೆಡ ಜಾತಿಗಳಿವೆ ಒಳ್ಳೆಯವ್ರು, ಕೆಟ್ಟವ್ರು. |
| ಶ್ರೀಕಾಂತ | : | ಆಹಾ ಧನ್ಯರಾದೆವು |
| ಶ್ರೀಧರ | : | ನಾವು ಬಂದ ಕೆಲಸವಾಯ್ತು |
| ನಟರಾಜು | : | ವಿವಾಹ ಕಾಲೇ ಮಾತ್ರುಶ್ರೀ ಲಕ್ಷ್ಮಮ್ಮ ನಾಮಸ್ಮರಣೆ ಗೋವಿಂದಾ.. ಗೋವಿಂದ.<br>(ಮೂವರು ಮೂರ್ತಿ ತಾಯಿಯ ಕಾಲಿಗೆರಗುವರು) |
| ಮೂರ್ತಿ ತಾಯಿ | : | ಏನ್ರೋ ಏನ್ರೋ ನಿಮ್ ಕೆಲ್ಸಾ? |
| ಶ್ರೀಕಾಂತ | : | ತೆರೆಯ ಮೇಲೆ ನೋಡಿ ಆನಂದಿಸಿ. |
| ಮೂರ್ತಿ ತಾಯಿ | : | ಮೂರ್ತಿ ಎಲ್ರೋ? |
| ನಟರಾಜು | : | ನಾವು ಅವನನ್ನೇ ಹುಡುಕ್ಕೊಂಡು ಹೊರ್ಟಿದಿವಿ. |
| ಮೂವರು | : | ಮತ್ತೆ ಬರ್ತೀವಿ. |
| ಮೂರ್ತಿ ತಾಯಿ | : | ಹುಡುಗಾಟ..ಹುಡುಗಾಟ.(ನಗುತ್ತಒಳಗೆಹೋಗುತ್ತಾರೆ) |

**ನಿರ್ದೇಶಕರ ಟಿಪ್ಪಣಿ:**

**ಇದು 14-09-1992ರಲ್ಲಿ ಚಿತ್ರೀಕರಿಸಲಾದ ದೃಶ್ಯ. ಸರ್ವಜ್ಞನ ವಚನವನ್ನು ಚಿತ್ರೀಕರಣದ ಸ್ಥಳದಲ್ಲಿಯೇ ಸೇರಿಸಲಾಯಿತು.**

# ದೃಶ್ಯ 46

*ಹಗಲು – ಕ್ಲಾರಾ ಮನೆಯ ಒಳಗೆ*

*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*

*(ಕ್ಲಾರಾ ಮನೆಯ ಮುಂದೆ ನಿಂತ ಮೂರ್ತಿಯ ಮೂವರು ಗೆಳೆಯರು. ಕ್ಲಾರಾ ಬಂದು ಬಾಗಿಲನ್ನು ತೆರೆಯುತ್ತಾಳೆ)*

| | | |
|---|---|---|
| *ಶ್ರೀಧರ* | : | *ಕಾಲರಾ ಅವರಿಗೆ ನಮಸ್ಕಾರ..* |
| *ಶ್ರೀಕಾಂತ* | : | *ತಲೆ ಮೇಲೆ ಹೊಡೀತಿನಿ ನೋಡು. ಕಾಲರಾ ಅಲ್ಲ ಕಣೋ ಕಾರಾ ಅವರಿಗೆ ನಮಸ್ಕಾರ.* |
| *ನಟರಾಜು* | : | *(ತಲೆ ಮೇಲೆ ಹೊಡೆದು) ಕಾರಾ ಅಲ್ಲ ಕಣೋ ಬೆಪ್ಪು. ಕ್ಲಾರಾ ಅವರಿಗೆ ಪ್ರಣಾಮಗಳು.* |
| *ಕ್ಲಾರಾ* | : | *ಯಾರು ನೀವು? ಎಲ್ಲಿಂದ ಬಂದಿದ್ದೀರಿ? ನನ್ನಿಂದ ಏನಾಗ್ಬೇಕಾಗಿತ್ತು?* |
| *ಶ್ರೀಧರ* | : | *ನಾನು ನಾದಸ್ವರ ವಿದ್ವಾನ. ಚೆನ್ನಾಗಿ ನುಡಿಸ್ತೀನಿ.* |
| *ಶ್ರೀಕಾಂತ* | : | *ನಾನು ಚೆನ್ನಾಗಿ ತಾಳ ಹಾಕ್ತೀನಿ.* |
| *ನಟರಾಜು* | : | *ನಾನು.. ಮದ್ವೆಯಾಗೋರು ಹಿಂದುಗಳಾದ್ರೆ ಶಾಸ್ತ್ರಿಯಾಗ್ತೀನಿ. ಅವರು ಕ್ರಿಶ್ಚಿಯನ್ಸ್ ಆದರೆ ಪಾದ್ರಿಯಾಗ್ತೀನಿ. ಅವರು ಮುಸ್ಲಿಂ ಆದ್ರೆ ನಾನು ಮೌಲ್ವಿ ಆಗ್ತೀನಿ.* |
| *ಕ್ಲಾರಾ* | : | *ಅದಕ್ಕೆ ನಾನೇನ್ ಮಾಡ್ಲಿ* |
| *ಮೂವರು* | : | *ನಾವೆಲ್ಲರು ನಿರುದ್ಯೋಗಿಗಳಾಗಿದಿವಿ. ಕೆಲ್ಸ ಕೊಡ್ಬೇಕು.* |
| *ಕ್ಲಾರಾ* | : | *ಸ್ವಲ್ಪ ಇರಿ, ಹುಚ್ಚಾಸ್ಪತ್ರೆಗೆ ಫೋನ್ ಮಾಡ್ತೀನಿ. ಅಲ್ಲಿಂದ ತಪ್ಪಿಸ್ಕೊಂಡ್ ಬಂದು ತೊಂದ್ರೆ ಕೊಡ್ತಿದಿರಾ?* |
| *ನಟರಾಜು* | : | *ತಾಯಿ ಮಹಾತಾಯಿ ನಾವು ಅಲ್ಲಿಂದ ಬಂದೋರಲ್ಲ. ಮೂರ್ತಿ ಫ್ರೆಂಡ್ಸಮ್ಮ ಕೇರಾಫ್ ಮೂರ್ತಿ.* |
| *ಕ್ಲಾರಾ* | : | *ಓ ಸಾರಿ ಸಾರಿ. ಬನ್ನಿ ಬನ್ನಿ ಕೂತ್ಕೊಳಿ.* |
| *ಶ್ರೀಧರ* | : | *ಆಹಾ ಮೂರ್ತಿ ಅನ್ನೊ ಹೆಸ್ರಲ್ಲಿ ಎಷ್ಟು ವೈಟ್ ಇದೆ ನೋಡಿದ್ಯಾ?* |
| *ಶ್ರೀಕಾಂತ* | : | *ವೈಟ್ ಅಲ್ವೋ ಪೆದ್ದು ಪ್ರೀತಿ* |
| *ನಟರಾಜು* | : | *ಪ್ರೀತಿ ಅಲ್ವೋ ಪೆದ್ದು ಅನುರಾಗ* |
| *ಶ್ರೀಧರ* | : | *ಎಲ್ಲ ಒಂದೇ. ನಾವೀಗ ಬಿಸಿಯಾಗಿ ಕಾಫಿ* |

*ಕುಡಿಯೋಣ್ವೆ?*
*(ಕ್ಲಾರಾ ಕಾಫಿ ತಂದು ಕೊಡುತ್ತಾಳೆ)*

*ನಟರಾಜು : ನೋಡಮ್ಮ ಕ್ಲಾರಮ್ಮ ನಾವೀಗ ರಾಯಭಾರಿಗಳಾಗಿ ಬಂದಿದೀವಿ. ನಳ–ದಮಯಂತಿ ಮಧ್ಯೆ ಹಂಸ ಬರ್ಲಿಲ್ವೇ ಹಾಗೆ.*

*ಕ್ಲಾರಾ : ಅಂದ್ರೆ?*

*ಶ್ರೀಕಾಂತ : ನೀವಿ ಅಲ್ಲಿ–ಇಲ್ಲಿ ಒಡಾಡೋದು ನೋಡಿದ್ವಿ. ಸ್ನೇಹ ಪ್ರೀತಿಯಾಯ್ತು, ಪ್ರೀತಿ ಮಧ್ವೆವರ್ಗೂ ಬರ್ಲಿ ಅಂತ.*

ಕ್ಲಾರಾ : ಇದು ನಿಮ್ಮ ಅಭಿಪ್ರಾಯಾನ? ಅಥವಾ ಮೂರ್ತಿ ಅವರ್ದಾ?

ಶ್ರೀಧರ : ಸಧ್ಯಕ್ಕೆ ನಮ್ಮ ಅಭಿಪ್ರಾಯ ನೀವು ಎಸ್ ಅಂದ್ರೆ ಮೂರ್ತಿ ಅಭಿಪ್ರಾಯ. ನಾಲ್ಕು.. (ಚಮಚ) ಶುಗರ್..

ಕ್ಲಾರಾ : ನಾಲ್ಕ್ಯಾಕೆ ಐದು ಸ್ಪೂನ್ ತಗೊಳಿ.

ಶ್ರೀಧರ : ಥ್ಯಾಂಕ್ಯೂ.
(ಕ್ಲಾರಾ ಐದು ಚಮಚ ಸಕ್ಕರೆಯನ್ನು ಹಾಕುತ್ತಾಳೆ)

ನಟರಾಜು : ಅಲ್ಲಾ ನಿಮ್ಗೆ ನಮ್ಹತ್ರ ಹೇಳೋಕೆ ನಾಚ್ಕೆಯಾದ್ರೆ ಈ ಪತ್ರದ ಮುಖೇನ ಮೂರ್ತಿಗೆ ನಿಮ್ಮ ಅಭಿಪ್ರಾಯಾನ ಬರ್ದು ತಿಳಿಸ್ಬಹುದು. (ಪುಸ್ತಕ ಮತ್ತು ಪೆನ್ನು ಕೊಡುತ್ತಾನೆ)

ಶ್ರೀಕಾಂತ : ನಾವು ಸಂದೇಶ ತಲ್ಪುಸ್ತಿದ್ತೀವಿ.

ಶ್ರೀಧರ : ಎಸ್ ಎಸ್..
(ಕ್ಲಾರಾ ಪುಸ್ತಕವನ್ನು ತಗೆದುಕೊಂಡು ಯೋಚಿಸುತ್ತಿರುವಾಗ, ಏನು ಬರೆಯುತ್ತಾಳೋ ಎಂಬ ಕುತೂಹಲದಿಂದ ಅವಳಿಗೆ ಗೊತ್ತಾಗದ ಹಾಗೆ ಅವಳ ಹಿಂದೆ ಬಂದು ನಿಲ್ಲುತ್ತಾರೆ. ಕ್ಲಾರಾ ಬರೆಯುತ್ತಾಳೆ. ತಕ್ಷಣ ಹಿಂದಯೇ ಇದ್ದ ಮೂವರು ಖುಷಿಯಿಂದ ಕೂಗುತ್ತಾರೆ)

ಮೂವರು : ಓಕೇ...
(ಕ್ಲಾರಾ ನಾಚಿಕೊಳ್ಳುತ್ತಾಳೆ)

# ದೃಶ್ಯ 47

*ಹಗಲು – ಉದ್ಯಾನವನ*

*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*

| | | |
|---|---|---|
| *ಮೂರ್ತಿ* | *:* | *ಓಕೆ ಅಂದ್ರೆ ಒದಿತೀನಿ ನೋಡು. ಏನ್ರೋ ನಿಮಗೇನಾದ್ರು ಬುದ್ಧಿ–ಗಿದ್ಧಿ ನೆಟ್ಟಗಿದ್ಯಾ? ಏನ್ ಹುಡುಗಾಟ ಆಡ್ತಿದಿರಾ? ಮಾನ ಮರ್ಯಾದೆ ಇದ್ದೆ ಅವ್ಳತ್ರ ಹಂಸಗಳು ಅಂದು ಬಂದಿದ್ದೀರಾ? ಕಾಗೆಗಳಾ..* |
| *ಶ್ರೀಧರ* | *:* | *ನೋಡಮ್ಮ ಮೂರ್ತಿ, ನೀನು ನಮ್ಮನ್ನ ಕಾಗೆ ಅಂತಾದ್ರು ಅನ್ನು ಗೂಬೆ ಅಂತಾದ್ರು ಅನ್ನು. ಕ್ಲಾರಮ್ಮ ಅಂತೂ ನಮ್ಮ ಮಾತಿಗೆ ಬೆಲೆ ಕೊಟ್ಟು ಒಪ್ಪಿದಾಳೆ.* |
| *ಶ್ರೀಕಾಂತ* | *:* | *ಮೂರ್ತಿ.. ನಿನ್ನ ಹೆಸ್ರಿಗೆ ಎಷ್ಟು ಬೆಲೇನೋ. ನಿನ್ನೀ ಹೆಸ್ರೇಳದ ತಕ್ಷಣ ಏನು ಗೌರವ.. ಅಷ್ಟಿಲ್ದೇ ಹೇಳದಾರಾ ನೀನ್ಯಾಕೋ ನಿನ್ನ ಹಂಗ್ಯಾಕೋ, ನಿನ್ನ ನಾಮದ ಬಲವೊಂದಿದ್ದರೆ ಸಾಕೋ* |
| *ನಟರಾಜು* | *:* | *ನೋಡು ಗುರು.. ದಮಯಂತಿ ಒಪ್ಪಾಯ್ತು, ಈಗ ನಳ ಒಪ್ಪಬೇಕಾಗಿದೆ.* |
| *ಮೂರ್ತಿ* | *:* | *ನಳ ಅಂತೆ ನಳ. ನಮ್ಮಮ್ಮ ಒಪ್ಕೋಬಾರ್ದಾ?* |
| ಶ್ರೀಧರ | : | ನೋಡಿ ಪ್ರಭು.. |
| ಮೂರ್ತಿ | : | ಏನಪ್ಪ ಹನುಮಂತು.. |
| ಶ್ರೀಧರ | : | ರಾಮಚಂದ್ರ ಶ್ರೀರಾಮಚಂದ್ರ ಸೀತಾಮಾತೆ ಒಪ್ಪಿಗೆ ಕೊಟ್ಟಾಯ್ತು. ಈಗ ನಿಮ್ಮ ಒಪ್ಪಿಗೆಗಾಗಿ ಕಾದಿದ್ದೇವೆ. |
| ಮೂರ್ತಿ | : | ಅಪ್ಪಾ ಕೋತಿ ಅಮ್ಮಾ ಒಪ್ಕೋಬಾರ್ದಾ |
| ನಟರಾಜು | : | ಅಮ್ಮ 21ನೆ ಶತಮಾನಾನು ದಾಟಿ 22ನೆ ಶತಮಾನಕ್ ಕಾಲಿಟ್ಟಿದಾಳೆ. ಕ್ಲಾರಾ ಆದ್ರು ಸರಿ ಅನಾರ್ಕಲಿ ಆದ್ರು ಸರಿ ಅಂತ ಹೇಳದಾಳಪ್ಪ.<br>(ಮೂರ್ತಿ ಗೊಂದಲಮಯನಾಗಿ ತಲೆಕೆರೆದುಕೊಂಡು) |
| ಮೂರ್ತಿ | : | ಇದೂ ಸ್ವಲ್ಪ ಯೋಚನೆ ಮಾಡಬೇಕಾದ ವಿಷಯ. |
| ಶ್ರೀಕಾಂತ | : | ಯೋಚನೆ ಏನ್ ಬಂತು? ಪ್ರೇಮಯಾಚನೆ ಮಾಡ್ಬೇಕು ಅನ್ನು.<br>(ಉಳಿದಿಬ್ಬರೂ "ಹ್ಹೂ.." ಅನ್ನುವರು) |
| ಶ್ರೀಧರ | : | ಗುರೂ ಹ್ಹೂ ಅನ್ನು ಗುರು. |

ನಟರಾಜು : ಹ್ದೂ ಅನ್ನು ಗುರು.

ಮೂರ್ತಿ : ನೀವ್ಯಾರ್ ಏನೇ ಹೇಳಿದ್ರು ನಾನ್ ಮಾತ್ರ ಕ್ಲಾರಾನಾ ಮದ್ವೆ ಮಾಡ್ಕೊಳೋದಿಕ್ಕೆ..
(ಇಲ್ಲ ಎನ್ನುವಂತೆ ಸಂಜ್ಞೆಮಾಡುತ್ತಾ)
..ಇಷ್ಟ ಇದೆ
(ಸ್ನೇಹಿತರೆಲ್ಲರೂ ಖುಷಿಯಾಗಿ ಅವನನ್ನು ಎತ್ತಿಕೊಳ್ಳುತ್ತಾರೆ.)

ಶ್ರೀಕಾಂತ : ಶ್ರೀರಾಮ.. ಶ್ರೀರಾಮ.. ಶ್ರೀರಾಮ ರಾಮ ರಾಮ..
(ಎಂದು ಧ್ಯಾನ ಮಾಡುವವರ ರೀತಿ ಹಾಡುತ್ತಾ ಸಂತಸಪಡುತ್ತಾನೆ)

## ದೃಶ್ಯ 48

*ಹಗಲು – ಉದ್ಯಾನವನ*

*ಹಸ್ತಪ್ರತಿಯಲ್ಲಿ: (ಚಲನಚಿತ್ರದಿಂದ ತೆಗೆಯಲಾಗಿದೆ)*

*(ಮೂರ್ತಿ ಏಕಾಂತದಲ್ಲಿ ಕುಳಿತಿದ್ದಾನೆ. ಅವನೆಡೆಗೆ ಬಂದ ಕ್ಲಾರಾ ಅವನನ್ನೇ ದಿಟ್ಟಿಸಿ ನೋಡುತ್ತಾಳೆ. ಮೂರ್ತಿ ಅವಳನ್ನು ನೋಡಿದಾಗ ನಾಚಿ ನೀರಾಗುತ್ತಾಳೆ. ಮರದ ಬಳಿ ನಾಚಿ ನಿಂತ ಕ್ಲಾರಾಳ ಬಳಿ ಬಂದ ಮೂರ್ತಿ ನಸು ನಗುತ್ತಾನೆ. ಮರದಲ್ಲಿ ಚಿತ್ರ ಬರೆಯುತ್ತಿದ್ದ ಅವಳ ಕೈಯನ್ನ ತನ್ನ ಕೈಗಳಲ್ಲಿ ಮೂರ್ತಿ ಬೆಸೆಯುತ್ತಾನೆ. ಕ್ಲಾರಾ ಅವನ ಅಪ್ಪುಗೆಯಲ್ಲಿ ಕರಗುತ್ತಾಳೆ. ಕ್ಲಾರಾಳ ಮುಖದಲ್ಲಿ ತೃಪ್ತಿ ಕಾಣುತ್ತದೆ)*

# ದೃಶ್ಯ 49

***ಹಗಲು – ಕ್ಲಾರಾಳ ಮನೆಯ ಒಳಗೆ***

(ಕ್ಲಾರಾ ಸಿದ್ಧಗೊಂಡು ಮೂರ್ತಿಯ ಹತ್ತಿರ ಬರುತ್ತಾಳೆ)

| | | |
|---|---|---|
| ಕ್ಲಾರಾ | : | ನಾನ್ ರೆಡಿ. |
| ಮೂರ್ತಿ | : | ರೆಡಿ.. (ಕ್ಲಾರಾಳ ಉಡುಗೆ ನೋಡಿ ಗಾಬರಿಯಾಗುತ್ತಾನೆ) .. ಹೀಗಾ? |
| ಕ್ಲಾರಾ | : | ಹ್ಞಾಂ.. |
| ಮೂರ್ತಿ | : | ಈ ವೇಷದಲ್ಲಿ? |
| ಕ್ಲಾರಾ | : | ಹ್ಞೂಂ |
| ಮೂರ್ತಿ | : | ಅಲ್ಲಾ ಹೀಗ್ಹೋದ್ರೆ ನಿಂಗು ನನಗು ವ್ಯತ್ಯಾಸವೇ ಇರೋದಿಲ್ಲಾ ಅಂತ. |
| ಕ್ಲಾರಾ | : | ಓ ಪ್ಯಾಂಟಾ? ಹಾಗಾದ್ರೆ ಸ್ಕರ್ಟ್ ಅಂಡ್ ಟಾಪ್ ಹಾಕೊಳ್ಳಾ? |
| ಮೂರ್ತಿ | : | ಸ್ಕರ್ಟ್ ಅಂಡ್ ಟಾಪ್..! |
| ಕ್ಲಾರಾ | : | ಫ್ರಾಕ್.. |
| ಮೂರ್ತಿ | : | ಫ್ರಾಕ್ !! ಏನಿಲ್ಲ ನಮ್ಮಮ್ಮ ನಂಗೆ ಮಂಗಳಾರತಿ ಎತ್ತಿಬಿಡ್ತಾಳೆ ಅಷ್ಟೆ. |
| ಕ್ಲಾರಾ | : | ಅಯ್ಯಯ್ಯೋ ಇಗೇನ್ರೀ ಮಾಡೋದು? |
| ಮೂರ್ತಿ | : | ನೋಡು ಈ ಸ್ಕರ್ಟ್ ಶರ್ಟ್ ಎಲ್ಲ ಬಿಟ್ಟು ಗಂಭೀರ್ವಾಗ್ ಸೀರೆ ಉಟ್ಕೊಂಡ್ ಬಾ. |
| ಕ್ಲಾರಾ | : | ಸೀರೆನಾ? ಹ್ಞ ಹ್ಞ ಅಯ್ಯೋ ನನ್ನೃತ್ರ ಸೀರೆನೆ ಇಲ್ಲಾರೀ. |
| ಮೂರ್ತಿ | : | ನಾನ್ ತಂದಿದ್ದೀನಲ್ಲಾ ರೀ. ನನಿಗ್ ಗೊತ್ತಿತ್ತೂ ರೀ ಅದಿಕ್ಕೆ ಅಡ್ವಾನ್ಸಾಗ್ ತಗೋಬಂದಿದಿನಿ. |
| ಕ್ಲಾರಾ | : | ಓ ಥ್ಯಾಂಕ್ಸ್, ಹಾಕ್ಕೊಂಡ್ ಬರ್‍ತಿನಿ. |
| ಮೂರ್ತಿ | : | ಉಟ್ಕೊಂಡ್ ಬಾ. (ಕೆಲಸಮಯದ ನಂತರ ಕ್ಲಾರಾ ಸೀರೆಯನ್ನು ಉಟ್ಟುಕೊಂಡು ಕ್ಲಾರಾ ಬರುತ್ತಾಳೆ) |
| ಕ್ಲಾರಾ | : | ರೆಡಿ. (ಅಡ್ಡಾದಿಡ್ಡಿಯಾಗಿ ಸೀರೆ ಉಟ್ಟಿಕೊಂಡು ಬಂದಿರುವ ಕ್ಲಾರಾಳನ್ನು ನೋಡಿ ಮೂರ್ತಿ ಜೋರಾಗಿ ನಗುತ್ತಾನೆ) |

*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*

| | | |
|---|---|---|
| *ಕ್ಲಾರಾ* | *:* | *ಇಲಿಗೆ ಪ್ರಾಣ ಸಂಕಟ ಅಂದ್ರೆ ಬೆಕ್ಕಿಗೆ ಚೆಲ್ಲಾಟ ಅಂತೆ. ನಾನು ಹ್ಯಾಗ್ ಕಾಣೆಸ್ತೀನಿ ಈ ಸೀರೆನಲ್ಲಿ.* |
| *ಮೂರ್ತಿ* | *:* | *ಒಳ್ಳೆ ದನ ಮೇಯಿಸುವವರು ಕಂಬಳಿ ಹೊದ್ದುಕೊಂಡ್ಹಾಗಿದೆ. ಸೀರೆ ಉಡೋ ಅವತಾರಾನಾ ಅದು?* |
| *ಕ್ಲಾರಾ* | *:* | *ಈಗೇನು ಮಾಡೋದು. ನಂಗೆ ಸೀರೆ ಉಡೋಕೆ ಬರಲ್ಲ.* |
| *ಮೂರ್ತಿ* | *:* | *ಬಾ ನಾನುಡುಸ್ತೀನಿ.* |
| *ಕ್ಲಾರಾ* | *:* | *ನೀವಾ? ಥೂ ಹೋಗಿಯಪ್ಪ.* |
| *ಮೂರ್ತಿ* | *:* | *ನಾಚ್ಕೆ ಪಟ್ಕೊಂಡ್ರೆ ಆಗಲ್ಲ. ಹೋಗ್ಬೇಕಾಗಿರೋದು ಅಮ್ಮನ ಮುಂದೆ. ಬಾ, ಬೇಗ ಬೇಗ. ಅಲ್ಲಾ ಅಮ್ಮನ ಹತ್ರ ಹೀಗೆ ಹೋದ್ರೆ ಹ್ಯಾಗೆ.* |
| *ಕ್ಲಾರಾ* | *:* | *ಚೆನಾಗಿರುತ್ತೆ. ಪರ್ವಾಗಿಲ್ಲ ಚೆನ್ನಾಗೆ ಉಡ್ಸಿ್ತೀರ?* |
| *ಮೂರ್ತಿ* | *:* | *ಕಾಲೇಜ್ನಲ್ಲಿ ಹೆಣ್ಣು ಪಾರ್ಟ್ ಹಾಕ್ತಾ ಇದ್ದೆ.* |
| *ಕ್ಲಾರಾ* | *:* | *ಹೌದಾ. ಅದಕ್ಕೆ ಇಷ್ಟು ಮುದ್ದಾಗಿರೋದು.* |
| | | *(ಸೀರೆ ಉಡಿಸಿ ಕುಂಕುಮ ಹಾಕಿ ಕನ್ನಡಿ ಮುಂದೆ ನಿಲ್ಲಿಸಿ ತೋರಿಸುವನು)* |
| | | *.. ಹ್ಯಾಗಿದೆ ನಂಜೋಡಿ?* |
| *ಮೂರ್ತಿ* | *:* | *ಅದನ್ನ ಅಮ್ಮ ಹೇಳ್ತಾಳೆ.* |
| *ಕ್ಲಾರಾ* | *:* | *ನೀವೇನ್ಹೇಳ್ತೀರಿ.* |
| *ಮೂರ್ತಿ* | *:* | *ನಾವೇನು ಹೇಳೋ ಸ್ಥಿತೀಲಿಲ್ಲ.* |

| | | |
|---|---|---|
| ಮೂರ್ತಿ | : | ಸ್ವಲ್ಪ ಆ ಕಡೆ ತಿರುಕ್ಕೊ |
| | | (ನೋಡಿ ಮತ್ತೂ ಜೋರಾಗಿ ನಗುತ್ತಾನೆ) |
| ಕ್ಲಾರಾ | : | ಸರಿನಾ? .. ಹ್ಯಾಗಿದೆ? |
| ಮೂರ್ತಿ | : | ಬಹಳ ಚೆನ್ನಾಗಿದೆ. |
| ಕ್ಲಾರಾ | : | ಥ್ಯಾಂಕ್ಸ್ |
| ಮೂರ್ತಿ | : | ತುಂಬಾ ಚೆನ್ನಾಗಿದೆ. ನೋಡೋಕಾಗಲ್ಲ. ಒಳ್ಳೆ ದನ ಮೇಯಿಸುವವರು ಕಂಬಳಿ ಹೊದ್ದುಕೊಂಡ್ಹಾಗಿದೆ. |
| ಕ್ಲಾರಾ | : | ನಾನೇನ್ರಿ ಮಾಡೋದು, ತುಂಬಾ ಟ್ರೈ ಮಾಡ್ದೆ ಆದ್ರೆ ನಂಗೆ ಉಟ್ಕೊಳೊಕ್ ಬರ್ಲಿಲ್ಲ. |
| ಮೂರ್ತಿ | : | ನೀನ್ ಮೊದ್ಲು ಬಂದಿದ್ದಲ್ಲ ಶರ್ಟು ಪ್ಯಾಂಟಾಕ್ಕೊಂಡ್ ಬಾ. |

ಕ್ಲಾರಾ : ಥ್ಯಾಂಕ್ಸ್

ಮೂರ್ತಿ : ನಾನ್ ಸೀರೆ ಉಟ್ಕೋತಿನಿ.

ಕ್ಲಾರಾ : ಅಯ್ಯೋ ತಮಾಷೆ ಬೇಡ್ರಿ. ಈಗೇನ್ರಿ ಮಾಡೋದು.

ಮೂರ್ತಿ : ತಮಾಷೆ ಬೇಡ್ವಂತೆ. ನಾನುಡ್ಲಾ?

ಕ್ಲಾರಾ : ಹ್ಞಾ ತಗೊಳಿ.
(ಸೆರಗನ್ನು ಕೊಡುತ್ತಾಳೆ, ಮೂರ್ತಿ ಗಾಬರಿಗೊಂಡು ಮತ್ತೆ ಸೆರಗನ್ನು ಅವಳಿಗೇ ವಾಪಾಸ್ ಕೊಟ್ಟು..)

ಮೂರ್ತಿ : ನಡಿ ಒಳಗಡೆ
(ನಡೆಯುವಾಗ ಎಡವುವ ಕ್ಲಾರಾಳಿಗೆ)
.. ಮತ್ತಗೆ ಮೆತ್ತಗೆ. ಆಹಹಾ ಇದ್ಯಾವ್ ಸೀಮೆ ನಡಿಗೆ ತಕತಕಥೈ.. ಥೈ.. ತಕತಕಥೈ ಥೈ..
(ಎಂದು ರೇಗಿಸುತ್ತಾನೆ)

**ನಿರ್ದೇಶಕರ ಟಿಪ್ಪಣಿ:**

**ಈ ದೃಶ್ಯದಲ್ಲಿ ಡಾ.ರಾಜ್‌ಗೆ ಕೆಲವು ಸೀರೆ ಉಡಿಸುವ ತೊಡಕುಗಳನ್ನು ಸ್ವತಃ ಮಾಧವಿಯವರೇ ನಿವಾರಿಸಿದ್ದರು.**

# ದೃಶ್ಯ 50

*ಹಗಲು – ಮೂರ್ತಿ ಮನೆಯ ಒಳಗೆ*

*ಹಸ್ತಪ್ರತಿಯಲ್ಲಿ: (ಚಿತ್ರದಲ್ಲಿ ಇಲ್ಲ)*

| | | |
|---|---|---|
| | | *(ಸ್ನೇಹಿತರೆಲ್ಲರೂ ಕಾದಿದ್ದಾರೆ. ತಾಯಿಯೂ ಕಾಯುತ್ತಿದ್ದಾರೆ)* |
| *ಮೂರ್ತಿ ತಾಯಿ* | : | *ಎಲ್ರೋ ಬರ್ಲೇ ಇಲ್ಲ.* |
| *ನಟ* | : | *ಬರ್ತಾರೆ ಇರಮ್ಮ* |
| *ದಡಿಯ* | : | *ನೋಡಮ್ಮ ನೋಡಮ್ಮ ನೀನು ಹೀಗೆಲ್ಲಾ ಅವ್ರ ಮುಂದೆ ಇರ್ಬಾರ್ದು.. ಬನ್ನಿ* *(ಎಂದು ರೂಮಿನತ್ತ ಕರೆದೊಯ್ಯುತ್ತಾನೆ)* |
| *ಮೂರ್ತಿ ತಾಯಿ* | : | *ನೀವೆಲ್ಲ ಸೇರ್ಕೊಂಡು ಏನ್ ಮಾಡ್ಬೇಕೂಂತಿದಿರಾ ಕಾಣೆ..* |
| *ಶ್ರೀಕಾಂತ* | : | *ಅದೆಲ್ಲ ಕ್ಲೈಮ್ಯಾಕ್ಸ್‌ನಲ್ ನೋಡಿ.* *(ಅಷ್ಟರಲ್ಲಿ ಕಾಲಿಂಗ್ ಬೆಲ್ ಸದ್ದಾಗುತ್ತದೆ. ಬಾಗಿಲು ತೆರೆದಾಗ ಮೂರ್ತಿ ಮತ್ತು ಕ್ಲಾರಾ ನಿಂತಿರುತ್ತಾರೆ. ಕ್ಲಾರಾಳನ್ನು ನೋಡಿ ಆಶ್ಚರ್ಯಗೊಳ್ಳುತ್ತಾರೆ)* |
| *ಮೂರ್ತಿ* | : | *ಯಾಕ್ರೋ ಬಾಯಿ ಬಿಟ್ಕೊಂಡ್ ನಿಂತಿದ್ದೀರಿ?* |
| *ಶ್ರೀಧರ* | : | *ಕ್ಲಾರಾನ ಕರ್ಕೊಂಡ್ ಬಾರೋ ಅಂದ್ರೆ?!* |
| *ನಟ* | : | *ಇವರ್‍ಯಾರೋ ಅವರೇನಾ?* |
| *ಮೂರ್ತಿ* | : | *ಅವ್ರಲ್ಲ, ಇಕ್ಕನಳ್ಳಿ ಚನ್ನಬಸಮ್ಮನೋರು. ಹೋಗಲೇ ಕಮಂಗಿ. ಎಲ್ಲೋ ಅಮ್ಮ?* |
| *ದಡಿಯ* | : | *ಅಯ್ಯಯ್ಯೋ ಅಮ್ಮ ರೂಮೊಳಗೆ ಲಾಕು.* *(ಎಂದು ಸ್ನೇಹಿತರು ಒಳಗೆ ಓಡುತ್ತಾರೆ. ಗೆಳೆಯರು ರೂಮಿನಿಂದ ಅಮ್ಮನನ್ನು ಕಣ್ಣುಮುಚ್ಚಿ ಕರೆತರುತ್ತಾರೆ. ಕಣ್ಣು ಬಿಟ್ಟೊಡನೆ ಎದುರಿಗೆ ನಿಂತಿದ್ದ ಕ್ಲಾರಾ ಮತ್ತು ಮೂರ್ತಿಯನ್ನು ನೋಡಿ ಸಂತೋಷಗೊಂಡು ನಂತರ ಹುಸಿಮುನಿಸು ತೋರುತ್ತಾರೆ)* |
| *ಮೂರ್ತಿ* | : | *ಅಮ್ಮಾ ಇವ್ಳು ಕ್ಲಾರಾ ಅಂತ* |
| *ತಾಯಿ* | : | *(ಗಡುಸಾಗಿ) ಅದಕ್ಕೇನೀಗ?* |
| *ಮೂರ್ತಿ* | : | *ನಾವಿಬ್ರೂ ಮದ್ವೆ ಮಾಡ್ಕೊಬೇಕೂಂತ...* *(ಕ್ಲಾರಾ, ಮೂರ್ತಿ ಬಾಯಿಗೆ ಕೈ ಅಡ್ಡ ಇಟ್ಟು)* |

| | | |
|---|---|---|
| *ಕ್ಲಾರಾ* | *:* | *ನಾನೂ ಕೇಳ್ಬೇಕಾ? (ಎಂದು ಪಿಸುಗುಡುತ್ತಾಳೆ)* |
| *ಮೂರ್ತಿ* | *:* | *ನೀನು ಸುಮ್ನೆ ಇದ್ರೆ ಸಾಕು.* |
| | | *(ಕ್ಲಾರಾ, ಮೂರ್ತಿಯೊಡನೆ ಪಿಸುಗುಡುವುದನ್ನು ನೋಡುವ ತಾಯಿ.)* |
| *ಮೂರ್ತಿ ತಾಯಿ* | *:* | *ಏನ್ರೋ ಅದು ಪಿಸಿ ಪಿಸಿ.?* |
| *ಮೂರ್ತಿ* | *:* | *ಇವಳಿಗೆ ಕಸಿವಿಸಿಯಾಗಿದೆ* |
| *ಮೂರ್ತಿ ತಾಯಿ* | *:* | *ಬಿಸಿ ಬಿಸಿ ಕಷಾಯ ಬೇಕಾ ಕೇಳು?* |
| | | (ಗೆಳೆಯರು ಅಮ್ಮನನ್ನು ಕಣ್ಣುಮುಚ್ಚಿ ಕರೆತರುತ್ತಾರೆ) |
| ಮೂರ್ತಿ ತಾಯಿ | : | ಏನ್ರೋ ಇದು ಕಣ್ಣಾಮುಚ್ಚಾಲೆ ಆಟ ಆಡಿಸ್ತಿದಿರೇನ್ರೋ? |
| ಶ್ರೀಕಾಂತ | : | ಹೌದಮ್ಮ. ನಮ್ಮಯ ಹಕ್ಕಿ ನಿಮ್ಮಯ ಹಕ್ಕಿ ಬಿಟ್ಟೆವೋ ಬಿಟ್ಟೆವು |



| | | |
|---|---|---|
| | | (ಅಮ್ಮನಿಗೆ ಅಂಜುತ್ತಾ) |
| ಮೂರ್ತಿ | : | ಅಮ್ಮ ನಿನ್ನನ್ನ ಅವಳಿಗೆ ತೋರ್ಸಣಾಂತ, ಅವಳಿಗೆ ನಿನ್ನ ತೋರ್ಸಣಾಂತ.. |
| ಮೂರ್ತಿ ತಾಯಿ | : | ಇಬ್ರು ಒಬ್ಬರನ್ನೊಬ್ರು ನೋಡ್ಕೊಂಡಿದಿರಾ ತಾನೆ. |
| ಮೂರ್ತಿ | : | ನೋಡ್ಕೊಂಡಿದಿವಿ |
| ಮೂರ್ತಿ ತಾಯಿ | : | (ಸುಮ್ಮನೆ ಕೋಪಗೊಂಡವಳಂತೆ) |
| | | ಮತ್ತೆ ನನ್ನನ್ನೇನ್ ಕೇಳೋದು? ಎಲ್ಲ ತೀರ್ಮಾನ ಮಾಡ್ಕೊಂಡಿದಿರಿ. |
| ಮೂರ್ತಿ | : | (ಸಣ್ಣ ಧ್ವನಿಯಲ್ಲಿ) .. ನಿನಗಿಷ್ಟ ಇಲ್ಲಾ ಅಂದ್ರೆ.. |
| ಮೂರ್ತಿ ತಾಯಿ | : | ಬಿಟ್ಟುಬಿಡ್ತೀಯಾ..? |

| | | |
|---|---|---|
| | | (ಎಲ್ಲರೂ ಗಾಬರಿಗೊಳ್ಳುತ್ತಾರೆ) |
| | | .. ಇಷ್ಟೇನಾ ನಿನ್ನ ಪ್ರೀತಿ, ಪ್ರಪಂಚಾನೆ ಎದುರು ಬಿದ್ರು ಬಿಡಲ್ಲ ಅನ್ಬೇಕು. ಒಂದ್ ವೇಳೆ ನೀನ್ ಬಿಟ್ರು ನಾನ್ ಬಿಡ್ತೀನಾ ಈ ಲಕ್ಷ್ಮೀನಾ? |
| | | (ಎಲ್ಲರೂ ಸಂತೋಷಗೊಳ್ಳುವರು. ಸ್ನೇಹಿತರ ಸಂಭ್ರಮವನ್ನು ನೋಡಿ) |
| ಮೂರ್ತಿ ತಾಯಿ | : | ಅಬ್ಬಬ್ಬಾ ನಿಲ್ರೋ ನಿಮ್ ಕರಡಿ ಪ್ರೀತಿನಾ. |
| ಶ್ರೀಕಾಂತ | : | ಅಮ್ಮ ಇದು ಕರಡಿ ಪ್ರೀತಿಯಲ್ಲ. |
| | | (ಕೋತಿ ರೀತಿ ಶಬ್ಧಮಾಡಿ) ..ಕೋತಿ ಪ್ರೀತಿ |
| ಮೂರ್ತಿ | : | ನನಗ್ಗೊತ್ತಿಲ್ವಾ ನಮ್ಮಮ್ಮನ್ ಗುಣ. |
| | | (ಕ್ಲಾರಾಳಗೆ ಅಮ್ಮನ ಕಾಲಿಗೆ ಬೀಳುವಂತೆ ಸೂಚಿಸುತ್ತಾನೆ. ಕ್ಲಾರಾ ತಾಯಿಯ ಕಾಲಿಗೆ ಬೀಳುವಾಗ ಆಕೆಯ ಸೆರಗು ಕಳಚಿಕೊಳ್ಳುತ್ತದೆ. ಆಗ ಸ್ನೇಹಿತರೆಲ್ಲರು ಹಿಂದೆ ತಿರುಗುತ್ತಾರೆ. ಅಮ್ಮ ದೇವರಿಗೆ ಕೈ ಮುಗಿಯುತ್ತಿರುತ್ತಾರೆ. ತಕ್ಷಣ ಮೂರ್ತಿ ಸೆರಗು ಜಾರಿದೆ ಎಂದು ಸೂಚಿಸಿದಾಗ ಕ್ಲಾರಾ ಸೆರಗನ್ನು ಸರಿಮಾಡಿಕೊಳ್ಳುತ್ತಾಳೆ. ಮೂರ್ತಿ ಸಮಾಧಾನ ವಾಗುತ್ತಾನೆ. ಮತ್ತೆ ಕ್ಲಾರಾ ಎದ್ದು ನಿಂತು ಕೊಂಡಾಗ ಅವಳ ಸೀರೆ ನೆರಿಗೆ ಕಳಚಿಕೊಳ್ಳುತ್ತದೆ) |
| ಮೂರ್ತಿ | : | ಅಯ್ಯಯ್ಯೋ ಕೆಟ್ಟೇ ಕೆಟ್ಟೇ |
| | | (ತಲೆ ಮೇಲೆ ಕೈ ಹೊತ್ತುಕೊಳ್ಳುತ್ತಾನೆ) |
| ಮೂರ್ತಿ ತಾಯಿ | : | ಯಾಕಪ್ಪ ಏನಾಯ್ತೋ? |
| ಮೂರ್ತಿ | : | ಏನ್ಹೇಳ್ಳಮ್ಮ ಆಗ್ಬಾರ್ದು ಆಗ್ಹೋಯ್ತು. |
| | | (ಕ್ಲಾರಾಳ ಬಳಿ ಮಂಡಿಗಾಲಿನಲ್ಲಿ ಬಂದು ಸೀರೆ ಸರಿಮಾಡಿಕೊಳ್ಳುವಂತೆ ಸೂಚಿಸುತ್ತಾನೆ. ಕ್ಲಾರಾ ಸೆರಗನ್ನುಮಾತ್ರ ನೋಡಿ ಎಲ್ಲವೂ ಸರಿಯಾಗಿದೆಯೆಂದು ಹೇಳುತ್ತಾಳೆ.) |
| | | .. ಅದಲ್ಲ (ನೆರಿಗೆಯನ್ನು ತೋರಿಸಿ) |
| | | .. ಇದು. |
| | | (ಕ್ಲಾರಾ ತಕ್ಷಣ ಎತ್ತಿಕೊಳ್ಳುತ್ತಾಳೆ, ಮೂರ್ತಿ ತಾಯಿ ನಗುತ್ತಾರೆ) |
| ಮೂರ್ತಿ ತಾಯಿ | : | ಯಾರಮ್ಮ ಸೀರೆ ಉಡ್ಸಿದ್ದು? |
| ಮೂರ್ತಿ | : | ನಾನೇ.. (ಸ್ನೇಹಿತರು ನಗುತ್ತಾರೆ) |
| ಮೂರ್ತಿ ತಾಯಿ | : | ಅದಕ್ಕೆ ಈ ಲಕ್ಷಣ. |
| | | (ಮೂರ್ತಿಯ ಸ್ನೇಹಿತರನ್ನು ನೋಡಿ) |

|  |  |  |
| --- | --- | --- |
|  |  | .. ಅಲ್ರೋ ಅವಳಿಗೆ ಹೊಸ್ದು ಪಾಪ. ಅದಿಕ್ಕೆ ಗೇಲಿ ಮಾಡೋದಾ? |
| ಮೂರ್ತಿ | : | ನಾನು ಹೊಸಬಾ (ತಾಯಿ ಕ್ಲಾರಾಳನ್ನು ಕರೆದುಕೊಂಡು ಒಳಗೆ ಹೋಗುತ್ತಾರೆ. ಸ್ನೇಹಿತರು ಮೂರ್ತಿಯನ್ನು ಗೇಲಿಮಾಡುತ್ತಾರೆ) |
| ಮೂರ್ತಿ | : | ಏನ್ರಪ್ಪ ಅದು ಎಲ್ಲ ಕಿಸ್ಸ್ ಅಂತಾಯಿದೀರ. ಏನೋ ಭಾರಿ ಕಂಡ್ಬಿಟ್ಟಂಗೆ ಹೋಗೋ<br>(ಎಂದು ಪ್ರತಿ ಅಣಕಿಸುತ್ತಾನೆ) |

# ದೃಶ್ಯ 51

***ಹಗಲು – ಮೂರ್ತಿಯ ಮನೆ ಒಳಗೆ***

(ಹಿಂದೂ ಸಂಪ್ರದಾಯದ ಪ್ರಕಾರ ಮೂರ್ತಿ ಮತ್ತು ಕ್ಲಾರಾಳ ಮದುವೆ ನೆರವೇರುತ್ತದೆ. ನಟರಾಜು, ಶ್ರೀಕಾಂತ, ಶ್ರೀಧರ, ಮೂರ್ತಿ ತಾಯಿ ಜೊತೆಗೆ ಕ್ಲಾರಾಳ ಅಮ್ಮ ಮತ್ತು ಅಣ್ಣ ಆಂಥೋನಿ ತುಂಬ ಸಂತೋಷದಿಂದ ಅಲ್ಲಿ ನೆರೆದಿದ್ದಾರೆ)



# ದೃಶ್ಯ 52

***ಹಗಲು – ಮೂರ್ತಿ ಮನೆಯ ಹೊರಗೆ***

| | | |
|---|---|---|
| | | (ಗುಲಾಬಿ ಅಲಂಕಾರವನ್ನು ಮಾಡಿ ನಿಲ್ಲಿಸಲಾದ ಕಾರಿಗೆ ಆಂಥೋನಿ ಲಗ್ಗೇಜುಗಳನ್ನು ಇಟ್ಟು ಡಿಕ್ಕಿಯನ್ನು ಮುಚ್ಚುವಷ್ಟರಲ್ಲಿ ಎಲ್ಲರೂ ಹೊರಬರುತ್ತಾರೆ. ಕ್ಲಾರಾ ಬಂದವಳೆ ಹೊಸಕಾರನ್ನ ನೋಡಿ..) |
| ಕ್ಲಾರಾ | : | ವಾವ್. ಲುಕ್ ಅಟ್ ದಟ್. ಇಟ್ಸ್ ಬ್ಯೂಟಿಫುಲ್. ಥ್ಯಾಂಕ್ಸ್ ಅಣ್ಣ. |
| ಆಂಥೋನಿ | : | ಇಟ್ಸ್ ಓಕೆ. ಮಿ. ಮೂರ್ತಿ ಕ್ಲಾರಾ ನಿಮ್ಮ ಸೆಲಬ್ರೇಶನ್ಗೆ, ದಿಸ್ ಇಸ್ ಮೈ ಪ್ರಸೆಂಟೇಶನ್. ಸುಖವಾಗಿ ಹೋಗಿ ಸಂತೋಷವಾಗಿ ಬನ್ನಿ<br>(ಕಾರಿನ ಕೀಲಿಕೈಯನ್ನು ಮೂರ್ತಿಗೆ ಕೊಡುತ್ತಾನೆ) |
| ಮೂರ್ತಿ | : | ಥ್ಯಾಂಕ್ಯೂ. |
| ಕ್ಲಾರಾ ತಾಯಿ | : | (ಹೊರಡುವಾಗ ಆಶೀರ್ವಾದಕ್ಕಾಗಿ ಬರುವ ಕ್ಲಾರಾಗೆ) .. ದೇವ್ರು ನಿಮ್ಮಿಬ್ರನ್ನ ಚೆನ್ನಾಗಿ ಸಂತೋಷವಾಗಿಟ್ಟಿರ್ಲಿ |
| ಕ್ಲಾರಾ | : | ಥ್ಯಾಂಕ್ಸ್ ಮಮ್ಮಿ.<br>(ಮೂರ್ತಿಅಮ್ಮ ಕ್ಲಾರಾಳನ್ನು ಹತ್ತಿರ ಕರೆದು ಏನೋ ಗುಟ್ಟನ್ನು ಹೇಳಿದಾಗ ಕ್ಲಾರಾ ನಾಚುತ್ತ ಕಾರಿನತ್ತ ಓಡಿ ಹೋಗುತ್ತಾಳೆ. ನಂತರ ಮೂರ್ತಿ ಬಂದು ಅಮ್ಮನಿಗೆ ಕಿವಿಕೊಡುತ್ತಾನೆ. ಅಮ್ಮ ಅವನ ಕೆನ್ನೆಗೆ ಹೊಡೆಯುತ್ತಾರೆ) |
| ಮೂರ್ತಿ | : | ಅಲ್ಲಾ ಅವಳ್ ಕಿವಿಲಿ ಹೇಳ್ದಲ್ಲ, ನನಗೂ ಏನಾದ್ರು ಹೇಳ್ತಿಯೇನೋ ಅಂತ. |
| ಮೂರ್ತಿ ತಾಯಿ | : | ಅವ್ಳನ್ನೇ ಕೇಳು ಅವ್ಳೇ ಹೇಳ್ತಾಳೆ ಹೋಗ್ಬಾ.<br>(ಎಲ್ಲರೂ ನಗುವರು, ನಂತರ ಮೂರ್ತಿ ತಾಯಿಯ ಆಶೀರ್ವಾದ ಪಡೆದು ಹೊರಡುತ್ತಾನೆ. ಕಾರಿನ ಹತ್ತಿರ ಬಂದು ಕ್ಲಾರಾ ಮತ್ತು ಮೂರ್ತಿ ಇಬ್ಬರೂ ಎಲ್ಲರಿಗು ಕೈ ಸನ್ನೆ ಮಾಡಿ ಹೊರಡುತ್ತಾರೆ) |

***(ಚಿತ್ರದಲ್ಲಿ ಇಲ್ಲ)***

| | | |
|---|---|---|
| ***ಮೂರ್ತಿ ತಾಯಿ*** | *:* | ***ನೀವು ಬರೋ ಅಷ್ಟರಲ್ಲಿ ಒಂದು ತೊಟ್ಟಿಲು ಸಿದ್ಧಮಾಡಿಟ್ಟಿರ್ಲಾ..*** |

# ದೃಶ್ಯ 53

*ಹಗಲು – ರಸ್ತೆ*

*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*

| | | |
|---|---|---|
| *ಧ್ವನಿ* | : | *ಬಹಳ ಲೇಟಾಯ್ತು* |
| *ಕ್ಲಾರಾ* | : | *ಯಾಕ್ರಿ ನಿಮ್ಮ ಸ್ವರ ಹಾಗಾಗಿದೆ?* |
| *ಮೂರ್ತಿ* | : | *ನಾನು ನೀನು ಮಾತಾಡ್ದೆ ಅನ್ಕೊಂಡೆ (ಕ್ಲಾರಾಳ ಹತ್ತಿರ ಬರುವನು)* |
| *ಕ್ಲಾರಾ* | : | *ನಾನಲ್ಲ ಹೇಳಿದ್ದು. (ಮೂರ್ತಿ ಇನ್ನೂ ಹತ್ತಿರ ಬರುತ್ತಾನೆ)* |
| *ಧ್ವನಿ* | : | *ತುಂಬಾ ಚೆನ್ನಾಗಿದೆ.* |
| *ಮೂರ್ತಿ* | : | *ಅರೆ ಯಾರು? (ಎಂದು ಕಾರಿನ ಬ್ರೇಕ್ ಹಾಕುವನು)* |
| *ಧ್ವನಿ* | : | *ಇನ್ಯಾರು ನಾನು.. (ಎಂದು ಶ್ರೀಕಾಂತ ಹೇಳುತ್ತಾನೆ)* |
| *ಮೂರ್ತಿ* | : | *ಲೋ ಕರಡಿ. ನಿನಗೂ ಶಿವಪೂಜೆಗೂ ಏನೋ ಸಂಬಂಧ. ಯಾವಾಗ ಬಂದೆ?* |
| *ಶ್ರೀಕಾಂತ* | : | *ಅವಾಗ್ಲೆ ಬಂದೆ. ಆರಂಭ ಹೇಗಿರುತ್ತೆ ನೋಡಣಾಂತ.* |
| *ಮೂರ್ತಿ* | : | *ನಿನ್ನ ತಲೆ ಇದ್ದ್ಹಂಗ್ ಇರುತ್ತೆ. ಇಳಿಯೋ ಕೆಳಗೆ ಕಮಂಗಿ.* |
| *ಶ್ರೀಕಾಂತ* | : | *ಅಯ್ಯಯ್ಯೋ ಇಲ್ಲೇನಾ?* |
| *ಮೂರ್ತಿ* | : | *ನಿನ್ನನ್ನೇನಾದ್ರು ಬಾ ಅಂತ ಕರ್ದಿದ್ನಾ? ನಿನ್ನ ತಪ್ಪಿಗೆ ಇದೇ ಶಿಕ್ಷೆ. ಇಳಿಯೋ.. (ಅಷ್ಟರಲ್ಲಿ ಕಾರಿನಲ್ಲಿ ಇತರ ಗೆಳೆಯರು ಬರುತ್ತಾರೆ)* |
| *ನಟ* | : | *ದಡಿಯಾ, ಆರಂಭ ಹೇಗಿತ್ತೋ?* |
| *ಶ್ರೀಕಾಂತ* | : | *ಆರಂಭ ಏನ್ ಹೇಳ್ಲಿ? ಬೊಂಬಾಟಾಗಿತ್ತು.* |
| *ಮೂರ್ತಿ* | : | *ಓಹೋ ಇದೆಲ್ಲಾ ನಿಮ್ ಪ್ಲಾನ್.* |
| *ನಟರಾಜ* | : | *ಏನಮ್ಮ ಮೂರ್ತಿ, ನಾವು ಫಸ್ಟ್ ನೈಟ್‌ಗೆ ಅಶೋಕಾ ಹೋಟೆಲ್‌ನಲ್ಲಿ ಎಲ್ಲಾ ಅರೇಂಜ್‌ಮೆಂಟ್ ಮಾಡಿದೀವಿ. ನೀನು ಹನಿಮೂನಿಗೆ ಕಾಡು ಮೇಡು ಅಂತ ಬೇರೆಲ್ಲೋ ಹೊರ್ಟಿದಿಯಲ್ಲೋ.* |
| *ಮೂರ್ತಿ* | : | *ನೋಡೋ ಪ್ರಕೃತಿ ಪುರುಷನ ಮಿಲನ ಆಗ್ಬೇಕಿರೋದು ನಾಲ್ಕು ಗೋಡೆ ಮಧ್ಯೆ ಅಲ್ಲ. ಪ್ರಕೃತಿ ನಡುವೆ. ಈಗ ನೀವು ಎಲ್ಲಿವರ್ಗು ಬರ್ತೀರಾ?* |
| *ಗೆಳೆಯರು* | : | *ಕೊನೆವರ್ಗೂ..* |

| | | |
|---|---|---|
| *ಮೂರ್ತಿ* | : | *ಆಂ.. (ಎಂದು ಆಶ್ಚರ್ಯ ಸೂಚಿಸುತ್ತಾನೆ)* |
| *ನಟರಾಜ* | : | *ಸುಮ್ನೆ ಹಾಗಂದ್ವಿ, ಆರಾಮಾಗಿ ಹೋಟ್ಗನ್ನಿ. ನೋಡಿ ಕ್ಲಾರಾಮ್ಮ ನಮ್ಮ ಮೂರ್ತಿದು ಮಗುವಿನಂಥ ಮನಸ್ಸು, ಅವನ್ನ ಜೋಪಾನವಾಗಿಟ್ಟುಕೊಳಿ. ಸರಿ ಹೊರ್ಡಿ ಇನ್ನು.*<br>*(ಶ್ರೀಕಾಂತ ಇಳಯುತ್ತಾನೆ, ಕಾರು ಹೊರಡುತ್ತದೆ.)* |
| *ಗೆಳೆಯರು* | : | *ಹ್ಯಾಪಿ ಜರ್ನಿ.. (ಎಂದು ಹರಸುತ್ತಾರೆ)* |

# ದೃಶ್ಯ 54

***ಹಾಡು: ಆಗುಂಬೆಯಾ ಪ್ರೇಮ ಸಂಜೆಯಾ...***



ಅಂಬರದ ಅಂಜೂರದಿ ನೇಸರನು..
ಅಂಗೈಯಿಗೆ ಹತ್ತಿರವಿ ನೇಸರನು..
ಕಾಸಗಲ ಕುಂಕುಮದ ನೇಸರನು..
ಬಾನಗಲ ಬೀಗುವನೀ ನೇಸರನು..
ಕಣ್ಣತುಂಬ ತುಂಬಿಕೊಂಡ ಬಾಳ ತುಂಬ ಸೇರಿಕೊಂಡ
ಆಗುಂಬೆಯಾ ಪ್ರೇಮ ಸಂಜೆಯಾ..
ಆಗುಂಬೆಯಾ ಪ್ರೇಮ ಸಂಜೆಯಾ..
ಮರೆಯಲಾರೆ ನಾನು ಎಂದಿಗೂ..
ಓ ಗೆಳತಿಯೇ ಓ ಗೆಳತಿಯೇ ಓ ಗೆಳತಿಯೇ.. ಗೆಳತಿಯೇ
ಆಗುಂಬೆಯಾ ಪ್ರೇಮ ಸಂಜೆಯಾ..
ಆಗುಂಬೆಯಾ ಪ್ರೇಮ ಸಂಜೆಯಾ..
ಮರೆಯಲಾರೆ ನಾನು ಎಂದಿಗೂ
ಓ ಗೆಳೆಯನೇ ಓ ಗೆಳೆಯನೇ ಓ ಗೆಳೆಯನೇ.. ಗೆಳೆಯನೇ

ಮುಗಿಲಾ ಜೊತೆಯಲ್ಲಿ ನೆಲ ಮುದ್ದಾಡೋ ಸಮಯ.,
ಕೊಡುವೆ ಕೊಡುವೆ ನಿನಗೆ ಈ ನನ್ನ ಹೃದಯ
ನದಿಯಾ ಮೊಗದಲ್ಲಿ, ರವಿ ತಂಪಾಗೋ ಸಮಯ
ಕೊಡುವೆ ಕೊಡುವೆ ನಿನಗೆ ಈ ನನ್ನ ಹೃದಯ
ಪ್ರೀತಿ ಸೋಲದಂತೆ, ಸ್ನೇಹ ಬಾಡದಂತೆ,
ಆಸೆ ತೀರದಂತೆ ನಾ.. ಶ್....

ಹಕ್ಕಿಗಳ ಅಂತರಂಗ ಹಾಡುತಿದೆ
ಹೂವುಗಳ ವರ್ಣವೆಲ್ಲ ಮಿಂಚುತಿದೆ
ಉದ್ದಗಲ ತಂಬೆಲರು ಬೀಸುತಿದೆ
ಎಲ್ಲ ಮರ ಹಣ್ಣುಗಳು ಕೂಗುತಿವೆ
ಮೂಡಣಕೆ ಜೀವತಂದ.. ಪಶ್ಚಿಮಕೆ ಭಾವ ತಂದ.
ಆಗುಂಬೆಯಾ ಪ್ರೇಮ ಸಂಜೆಯಾ..
ಆಗುಂಬೆಯಾ ಪ್ರೇಮ ಸಂಜೆಯಾ..
ಮರೆಯಲಾರೆ ನಾನು ಎಂದಿಗೂ..
ಓ ಗೆಳತಿಯೇ ಓ ಗೆಳತಿಯೇ ಓ ಗೆಳತಿಯೇ.. ಗೆಳತಿಯೇ

ಮನದ ಇರುಳಿನಲೀ ನೀ ಸುರಿದೇ ಹೊಂಗಿರಣ
ಬದುಕೇ ಬನವಾಗಿರಲು ನಿಜ ನೀನೇ ಕಾರಣ
ಬರದಾ ನಿದಿರೆಯಲಿ ನೀ ಸುರಿದೇ ಕನಸುಗಳ
ಕನಸೇ ನನಸಾಗಿರಲು ನಿಜ ನೀನೇ ಕಾರಣ
ಸಂಜೆ ಹೆಣ್ಣು ನೀನು ನನ್ನ ಬಾಳ ಜೇನು,
ಇನ್ನು ನಾನು ನೀನು ಒಂ.. ಶ್...
ಏಳು ಬಣ್ಣ ಒಂದು ಮಾಡೋ ನೇಸರನು
ಕೊಂಬೆಗಳ ಬೇಲಿಯಲ್ಲಿ ನಿಂತಿಹನು
ನಾಳೆಗಳ ಹೊತ್ತು ತರೋ ನೇಸರನು
ಪ್ರೇಮಿಗಳ ಕದ್ದು ಕದ್ದು ನೋಡುವನು
ನನ್ನ ನಿನ್ನ ಪ್ರೀತಿ ಕಂಡ.. ಸೂರ್ಯ ಮೆಲ್ಲ ಜಾರಿಕೊಂಡ.

ಆಗುಂಬೆಯಾ ಪ್ರೇಮ ಸಂಜೆಯಾ..
ಆಗುಂಬೆಯಾ ಪ್ರೇಮ ಸಂಜೆಯಾ..
ಮರೆಯಲಾರೆ ನಾನು ಎಂದಿಗೂ..
ಓ ಗೆಳತಿಯೇ ಓ ಗೆಳತಿಯೇ ಓ ಗೆಳತಿಯೇ.. ಗೆಳತಿಯೇ

**ಗಾಯನ: ಡಾ. ರಾಜ್‌ಕುಮಾರ್ ಮತ್ತು ಮಂಜುಳಾ ಗುರುರಾಜ್**
**ರಚನೆ ಮತ್ತು ಸಂಗೀತ: ಹಂಸಲೇಖ**

# ದೃಶ್ಯ 55



***ಹಗಲು – ಹಲವು ಹಸಿರು ಪ್ರದೇಶಗಳು***

***ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)***

| | | |
|---|---|---|
| | | ***(ಹಾಡು ಮುಗಿದಿದೆ. ಕ್ಲಾರಾ ಮತ್ತು ಮೂರ್ತಿ ಇಬ್ಬರೂ ತಬ್ಬಿಕೊಂಡು ನಿಂತಿದ್ದಾರೆ)*** |
| ***ಮೂರ್ತಿ*** | : | ***ಕ್ಲಾರಾ ಹೂವಿನ ಅಂದ ಅರಳಿದಾಗ್ಲೇ ತಿಳಿಯೋದು.*** |
| ***ಕ್ಲಾರಾ*** | : | ***ಕೋಗಿಲೆ ಮಾಧುರ್ಯ ಹಾಡಿದಾಗಲೇ ಗೊತ್ತಾಗೋದು*** |
| ***ಮೂರ್ತಿ*** | : | ***ಸೂರ್ಯನ ಸೊಬಗು ಸಂಜೆ ಆದ್ಮೇಲೆ ತಿಳಿಯೋದು*** |
| ***ಮೂರ್ತಿ, ಕ್ಲಾರಾ*** | : | ***ದಾಂಪತ್ಯದ ಸುಖ ಒಲವು ಅರಳಿದಾಗ್ಲೇ ಸಿಕ್ಕೋದು.*** |
| ಕ್ಲಾರಾ | : | ಮೂರ್ತಿ, ಸುಖದ ತುತ್ತತುದಿ ಅಂದ್ರೆ ಇದೆ ಅಂತ ಕಾಣುತ್ತೆ ಅಲ್ವಾ? ಎಂಥ ರಮ್ಯ, ಅದೆಂಥಾ ರಮಣೀಯ.. ಹ್ಹಾಂ ಅಲ್ನೋಡಿ.. (ಸುತ್ತಮುತ್ತಲಿನ ಪರಿಸರವನ್ನು ತೋರಿಸುತ್ತಾಳೆ) .. ಮೂರ್ತಿ, ಜೀವನ ಪೂರಾ ನಿಮ್ಮ ಜೊತೆ ಈ ಪ್ರಕೃತಿ ಸೌಂದರ್ಯದಲ್ಲಿ ಹೀಗೆ ಬೆರೆತು ಒಂದಾಗಿ ಇರ್ಬೇಕೂ ಅಂತಾ ನನ್ನಾಸೆ. |
| ಮೂರ್ತಿ | : | ನಿನ್ನ ನನ್ನ ಹೃದಯದಲ್ಲಿ ಬಲವಾಗಿ ಬಚ್ಚಿಟ್ಕೋಬೇಕು ಅಂತ ನನ್ನಾಸೆ. (ಅಪ್ಪಿಕೊಳ್ಳುತ್ತಾನೆ) |

| | | |
|---|---|---|
| ಕ್ಲಾರಾ | : | ಎಷ್ಟು ಚಳಿಯಾಗ್ತಿದೆ ಅಲ್ವಾ? |
| ಮೂರ್ತಿ | : | ನಾನ್ ಪಕ್ಕದಲ್ಲಿ ಇದ್ರೂ ಚಳಿನಾ? |
| ಕ್ಲಾರಾ | : | ರೀ ಈ ಸೂರ್ಯಾಸ್ತಮಾನ ನೋಡ್ತಾ ಒಂದು ಬಿಸಿ ಬಿಸಿ ಕಾಫಿ ಕುಡಿಬೇಕು ಅನ್ಸಿ್ತದೆ. |
| ಮೂರ್ತಿ | : | ಬಿಸಿ ಬಿಸಿ ಕಾಫಿನಾ? ಅದೇನ್ ಮಹಾ ದೊಡ್ಡ ವಿಷಯ ಈಗ ತಂದ್ಬಿಡ್ತೀನಿ. |
| ಕ್ಲಾರಾ | : | ಮೂರ್ತಿ.. (ಮೂರ್ತಿಯನ್ನು ತಡೆದು)<br>.. ನನಗ್ ಕಾಫಿ ಬೇಡ, ನೀವ್ ಬೇಕು. ನನ್ನನ್ನ ಓಂಟಿಯಾಗಿ ಬಿಟ್ಟು ಹೋಗ್ಬೇಡಿ. |
| ಮೂರ್ತಿ | : | ನಿನ್ನ ಓಂಟಿಯಾಗಿ ಬಿಟ್ಟು ನಾನೆಲ್ಲ್ಹೋಗ್ಲಿ? ಕಾಫಿ ಕಾರಲ್ಲೇ ತಾನೆ ಇದೆ ಒಂದು ಕ್ಷಣದಲ್ಲಿ ತಂದ್ಬಿಡ್ತೀನಿ ನೋಡ್ತಾ ಇರು. |
| ಕ್ಲಾರಾ | : | ಬೇಗ್ ಬನ್ಬಿಡಿ. ಮೂರ್ತಿ ಕಮ್ ಫಾಸ್ಟ್. |
| ಮೂರ್ತಿ | : | ಯಾ. |
| ಕ್ಲಾರಾ | : | (ಸೂರ್ಯಾಸ್ತವನ್ನು ನೋಡುತ್ತ ರೋಮಾಂಚನ ಗೊಳ್ಳುತ್ತಾಳೆ)<br>.. ಮೂರ್ತಿ, ಸೂರ್ಯಾಸ್ತಮಾನ ಆಗ್ತಾ ಇದೆ ಬೇಗ ಬನ್ನಿ. |
| ಮೂರ್ತಿ | : | ಬಂದೆ.. |
| ಕ್ಲಾರಾ | : | (ಸೂರ್ಯಾಸ್ತಮಾನ ನೋಡಿ)<br>ಇಟ್ಸ್ ಬ್ಯೂಟಿಫುಲ್. ಮೂರ್ತಿ ಬೇಗ್ ಬನ್ನಿ ಬೇಗ್ ಬನ್ನಿ..<br>(ಸಂತೋಷದಿಂದ ಕುಣಿಯುತ್ತಾ)<br>.. ಯ ಆರ್ ಮಿಸ್ಸಿಂಗ್ ಸಮ್ಥಿಂಗ್. |
| ಮೂರ್ತಿ | : | ನಾನ್ ಬರ್ತಾಯಿದೀನಿ. |
| ಕ್ಲಾರಾ | : | ಮೂರ್ತಿ ಬೇಗ್ ಬನ್ನಿ ಬೇಗ್ ಬನ್ನಿ<br>(ಸೂರ್ಯ ಇನ್ನೇನು ಮುಳುಗುವುದರಲ್ಲಿರುತ್ತಾನೆ)<br>ಯು ಆರ್ ಮಿಸ್ಸಿಂಗ್ ಸಮ್ಥಿಂಗ್, ಬೇಗ್ ಬನ್ನಿ..<br>(ಜೋರಾಗಿ ಕುಣಿಯುತ್ತಿರುವಾಗ ಆಕೆ ನಿಂತಿದ್ದ ಮರದ ಛಾವಣಿ ಮುರಿಯುತ್ತದೆ. ಕ್ಲಾರಾ ಬೀಳುತ್ತಾಳೆ, ಮೂರ್ತಿ ಆತಂಕದಿಂದ ಓಡಿ ಬರುತ್ತಾನೆ.) |
| ಮೂರ್ತಿ | : | ಕ್ಲಾರಾ..<br>(ಕಿರುಚಿಕೊಂಡು ಓಡಿ ಬಂದು ಆತನೂ ಕೆಳಗೆ ಬೀಳುತ್ತಾನೆ. ಮೂರ್ತಿ ಮರದ ರೆಂಬೆಗೆ ಸಿಕ್ಕಿಹಾಕಿಕೊಳ್ಳುತ್ತಾನೆ. ಕ್ಲಾರಾ ಬಂಡೆಯ ಮೇಲೆ ಬಿದ್ದು ಪ್ರಾಣ ಬಿಟ್ಟಿರುತ್ತಾಳೆ) |

[ಮೂರ್ತಿ ಮತ್ತು ಕ್ಲಾರಾ ನಿಂತಿರುವ ಸ್ಥಳವು ಪ್ರಪಾತದ ಅಂಚಿನಲ್ಲಿದೆ. ಈ ದೃಶ್ಯದಲ್ಲಿರುವ ಶಾಟ್‌ಗಳಲ್ಲಿ ಹೆಚ್ಚಿನ ಪಾಲು ಶಾಟ್‌ಗಳನ್ನು ಲೋ ಆ್ಯಂಗಲ್ ಮತ್ತು ಟಾಪ್ ಆ್ಯಂಗಲ್ ಬಳಸಿ ತೋರಿಸಿರುವುದರ ಮೂಲಕ ಪ್ರಪಾತದ ಅಗಾಧತೆಯನ್ನು ಚಿತ್ರಿಸಲಾಗಿದೆ.]

ನಿರ್ದೇಶಕರ ಟಿಪ್ಪಣಿ:

ಈ ದೃಶ್ಯದ ಚಿತ್ರೀಕರಣವನ್ನು ಕಾದಂಬರಿಯಲ್ಲಿದ್ದಂತೆ "ಬರ್ಕಣ' ಎಂಬಲ್ಲಿ ಚಿತ್ರೀಕರಿಸಲಾಯಿತು. ಆದರೆ ಈ ಸ್ಥಳಕ್ಕೆ ಹೋಗಲು ರಸ್ತೆಯಿಲ್ಲದ ಕಾರಣ ಏನು ಮಾಡುವುದು ಎಂದು ಚಿಂತಿಸುತ್ತಿದ್ದಾಗ, ಈ ಚಲನಚಿತ್ರದ ನಿರ್ಮಾಣವನ್ನು ನೋಡಿಕೊಳ್ಳುತ್ತಿದ್ದ ವಿಕ್ರಂ ಶ್ರೀನಿವಾಸ್‌ರವರು ಎರೆಡು ದಿನ ಅವಕಾಶ ಕೊಟ್ಟರೆ ರಸ್ತೆ ಸಿದ್ಧಗೊಳಿಸುವುದಾಗಿ ತಿಳಿಸಿ ನಮ್ಮ ಚಿಂತೆಯನ್ನು ದೂರ ಮಾಡಿದರು. ಆ ಎರಡು ದಿನಗಳು ನಾವು ಬೇರೆ ದೃಶ್ಯಗಳನ್ನು ಚಿತ್ರೀಕರಿಸಿ, "ಬರ್ಕಣ"ದ ಆ ಅಟ್ಟಣಿಗೆ ಬಂದಾಗ ನಮ್ಮ ಇಡೀ ತಂಡಕ್ಕೆ ಆ ಶ್ರಮದ ಪ್ರತಿಫಲ ದೊರೆಯಿತು. ಅದ್ಭುತವಾದ ರುದ್ರ ರಮಣೀಯ ತಾಣವೊಂದನ್ನು ನಾವು ಚಿತ್ರೀಕರಿಸಿದೆವು. "ಅಣ್ಣ" ಆ ಜಾಗವನ್ನು ನೋಡಿ ಮೂಕವಿಸ್ಮಿತರಾಗಿದ್ದರು. ಅಟ್ಟಣಿಗೆ ಮುರಿದು ಬೀಳುವ ಹಾಗು ಮುರಿದ ನಂತರದ ಚಿತ್ರಿಕೆಗಳನ್ನು (ಶಾಟ್‌ಗಳು) ಮ್ಯಾಚ್ ಮಾಡಿ ಚಿತ್ರೀಕರಿಸಲಾಯಿತು.

ಸಾಹಸ ನಿರ್ದೇಶಕ ಸ್ವಾಮಿ, ಛಾಯಾಗ್ರಾಹಕ ಶ್ರೀಕಾಂತ್ ಮತ್ತು ಸಂಕಲನಕಾರ ಪಿ. ಭಕ್ತವತ್ಸಲಂ ಅವರ ಕುಸುರಿ ಕೆಲಸ ಹಾಗೂ ಸಂಗೀತ ನಿರ್ದೇಶಕ ಹಂಸಲೇಖರವರ ಹಿನ್ನಲೆ ಸಂಗೀತ ಈ ದೃಶ್ಯವು ಅದ್ಭುತವಾಗಿ ಮಾಡಿಬರುವಂತೆ ಕಳೆಕಟ್ಟಿಸಿದೆ.

# ದೃಶ್ಯ 56

***ಹಗಲು – ಆಸ್ಪತ್ರೆಯ ವಾರ್ಡ್‌ನ ಒಳಗೆ***

| | | |
|---|---|---|
| | | (ಆಸ್ಪತ್ರೆಯ ಬೆಡ್ ಮೇಲೆ ಬ್ಯಾಂಡೇಜ್ ಸುತ್ತಿಕೊಂಡು ಮಲಗಿರುವ ಮೂರ್ತಿಯ ಹತ್ತಿರ ದುಃಖ ತಪ್ತರಾಗಿ ನಿಂತಿರುವ ಮೂರ್ತಿತಾಯಿ ಮತ್ತು ಕ್ಲಾರಾಳ ತಾಯಿ, ಆಂಥೋನಿ, ನಟರಾಜು, ಶ್ರೀಕಾಂತ, ಶ್ರೀಧರ.. ಮೂರ್ತಿ, ತನ್ನ ತಾಯಿ ಅಳುತ್ತಿರುವ ಸದ್ದು ಕೇಳಿ ಎಚ್ಚರಗೊಂಡು..) |
| ಮೂರ್ತಿ | : | ಅಮ್ಮಾ.. (ಎಲ್ಲರೂ ಮೂರ್ತಿ ಬಳಿ ಬರುತ್ತಾರೆ) .. ಕ್ಲಾರಾ.. (ಆಗ ಕ್ಲಾರಾಳ ತಾಯಿ ಸೂಸಾ ಜೋರಾಗಿ ಅಳಲು ಪ್ರಾರಂಭಿಸುತ್ತಾಳೆ) |



| | | |
|---|---|---|
| ಸೂಸಾ | : | ಕ್ಲಾರಾ ನಮ್ಮನ್ನೆಲ್ಲ ಬಿಟ್ಟು ಹೊರ್ಟ್ಹೋದ್ಲಪ್ಪಾ. (ಮೂರ್ತಿ ಆ ಮಾತುಗಳನ್ನು ಕೇಳಿ ದಿಗ್ಭ್ರಾಂತನಾಗುತ್ತಾನೆ) |
| ಮೂರ್ತಿ | : | ಕ್ಲಾರಾ... (ಎಂದು ಜೋರಾಗಿ ಕಿರುಚುತ್ತಾನೆ, ತಲೆಯ ಬ್ಯಾಂಡೇಜ್‌ನಿಂದ ರಕ್ತ ಸುರಿಯುತ್ತದೆ) |

[ಮೂರ್ತಿ ಕ್ಲಾರಾ ಎಂದು ಕೂಗುವ ಸದ್ದನ್ನು ಸಸ್ಟೈನ್ ಮಾಡಿ ಮುಂದಿನ ದೃಶ್ಯದ ಮೊದಲ ಶಾಟ್‌ವರೆಗೂ ಬಳಸಿರುವುದರಿಂದ ಫ್ಲ್ಯಾಶ್‌ಬ್ಯಾಕ್‌ನಿಂದ ಲೈವ್‌ಗೆ ಮರಳಲು ಆ ಸದ್ದನ್ನು ಟೈಂ ಲ್ಯಾಪ್ಸ್ ಆಗಿ ಬಳಸಲಾಗಿದೆ]

**ನಿರ್ದೇಶಕರ ಟಿಪ್ಪಣಿ:**

ಹಸ್ತಪ್ರತಿಯಲ್ಲಿ ಬರೆದಹಾಗೆ ಹಲವಾರು ಚಿತ್ರಿಕೆಗಳ ಸಹಾಯ ಬೇಕಾಗಿರಲಿಲ್ಲ. ಈ ದೃಶ್ಯದ ಪರಿಣಾಮಕಾರಿ ಭಾವಕ್ಕೆ ರಾಜ್‌ಕುಮಾರ್‌ರವರ ಕ್ಲೋಸ್ ಶಾಟ್‌ನ ಅಭಿನಯ ಹಾಗೂ ಬ್ಯಾಂಡೇಜ್‌ನ ಒಳಗಿನಿಂದ ಒಸರುವ ರಕ್ತ ಸಾಕಾಯಿತು.

# ದೃಶ್ಯ 57

*ಹಗಲು – ಕ್ರೈಸ್ತ ಸ್ಮಶಾನ*

(ಇಲ್ಲಿಗೆ ಮೊದಲ ದೃಶ್ಯದಿಂದ ಆರಂಭವಾಗಿದ್ದ ಫ್ಲ್ಯಾಶ್‌ಬ್ಯಾಕ್ ಮುಗಿಯುತ್ತದೆ. ಮೂರ್ತಿ ಕ್ಲಾರಾಳ ಸಮಾಧಿಯನ್ನೇ ದಿಟ್ಟಿಸಿ ನೋಡುತ್ತಿದ್ದಾನೆ. ಹಿನ್ನಲೆಯಲ್ಲಿ ಹಾಡಿನ ಮೊದಲೆರಡು ಸಾಲು ಬರುತ್ತದೆ)

.. ಆಗುಂಬೆಯಾ ಪ್ರೇಮ ಸಂಜೆಯಾ
.. ಆಗುಂಬೆಯಾ ಪ್ರೇಮ ಸಂಜೆಯಾ
.. ಮರೆಯಲಾರೆ ನಾನು ಎಂದಿಗೂ..
.. ಓ ಗೆಳತಿಯೇ ಓ ಗೆಳತಿಯೇ ಓ ಗೆಳತಿಯೇ..

(ಜೀಪಿನ ಹತ್ತಿರ ನಿಂತಿರುವ ಮೂವರು ಸ್ನೇಹಿತರನ್ನು ನೋಡಿ ಅವರ ಬಳಿ ಬರುತ್ತಾನೆ)



ಮೂರ್ತಿ : ಶ್ರೀಧರ, ಭೋಜ, ಶ್ರೀಕಾಂತ, ಯಾಕ್ರೋ ಪೆಚ್ಚಾಗಿದ್ದೀರ?

ಭೋಜ : (ಸಂತಾಪದಿಂದ) ಹ್ಯಾಗಾಗೋಯ್ತು ನಿನ್ ಜೀವನ?

ಮೂರ್ತಿ : ಏನಾಯ್ತಪ್ಪ? ಏನಾಗೋಯ್ತು ಅಂತ? ಬಂದ ನೋವನ್ನೆಲ್ಲಾ ನುಂಗತಾ ಇರ್ಬೇಕು. ನಗುನಗುತ್ತ ಇರ್ಬೇಕು. ಸಾಧ್ಯ ಇಲ್ಲ ಅಂದ್ರೆ ಆಗೋದೆ ಇಲ್ಲ.

ಮನಸ್ಸನ್ನ ಕಲ್ಲ್ ಮಾಡ್ಕೋಬೇಕು ಕಣ್ರೋ ಕಲ್ಲ್ ಮಾಡ್ಕೋಬೇಕು. ಹಾಲಿನ ಸಮುದ್ರಾನ ಕಡದಾಗ ದೇವತೆಗಳೆಲ್ಲ ಅಮೃತಾನ ಕುಡುದ್ರು, ಶಿವ ಹಾಲಾಹಲ.. ವಿಷಾನೇ ಕುಡ್ದುಬಿಟ್ಟ. ಜೀರ್ಣಿಸಿಕೊಂಡ. ಅದಿಕ್ಕೆ ಅವನನ್ನ ಜನ ನೀಲಕಂಠ ಅಂತ ಪೂಜೆ ಮಾಡ್ತಾರೆ. ಅವನೆ ನಮಗೆ ಮಾದರಿ ಕಣ್ರೋ. ಜೀವನಾ ಅನ್ನೋ ಸಾಗರದಲ್ಲಿ ಉಕ್ಕಿ ಬರೋ ವಿಷಾನು ಕುಡ್ದು ಒಬ್ಬೊಬ್ಬರು ನೀಲಕಂಠರಾಗಬೇಕು. ಬಿ ಚೀರ್‌ಫುಲ್.. ಕಮಾನ್.. ನಗ್ರೊ.. ಕಮಾನ್.. ಸ್ಮೈಲ್, ಸ್ಮೈಲ್..
(ಯಾರೂ ನಗದಿದ್ದನ್ನು ನೋಡಿ ಬೇಸರಗೊಂಡು ಹೊರಟುಹೋಗುತ್ತಾನೆ)

**ನಿರ್ದೇಶಕರ ಟಿಪ್ಪಣಿ**

**ದೃಶ್ಯ 58ರ ನಂತರ ಕಾದಂಬರಿಯಲ್ಲಿನ ಸ್ವರೂಪಗಳು ಬದಲಾಗುತ್ತಾ ಹೋಗುತ್ತದೆ. ಮೂರ್ತಿಯ ಪಾತ್ರ ಪೋಷಣೆ ಹಾಗೂ ಘಟನಾವಳಿಗಳು ಕಾದಂಬರಿಗಿಂತ ಪೂರ್ತಿಯಾಗಿ ಭಿನ್ನವಾಗಿದೆ. ಕಾದಂಬರಿಯಲ್ಲಿ ಬಹುಬೇಗ ಇಂದಿರಾಳನ್ನು ಭೇಟಿಮಾಡುವ ಮೂರ್ತಿ ಚಲನಚಿತ್ರದಲ್ಲಿ ತನ್ನೆಲ್ಲ ಪೋಲೀಸ್ ಕೆಲಸಕಾರ್ಯಗಳ ಮಧ್ಯೆಯೇ ಅನಿವಾರ್ಯವಾಗಿ ಸಂಕಷ್ಟದಲ್ಲಿದ್ದ ಹೆಣ್ಣು ಇಂದಿರಾಳಿಗಾಗಿ ಹುಡುಕಾಡುತ್ತಿರುತ್ತಾನೆ. ಅದಕ್ಕಿಂತ ಹೆಚ್ಚಾಗಿ ತಲೆಹಿಡುಕ ವ್ಯಾಸರಾಯನ ಹುಡುಕಾಟದಲ್ಲಿ ರುತ್ತಾನೆ. ಇದರಿಂದಾಗಿ ತನ್ನ ಸುತ್ತ–ಮುತ್ತ ನಡೆಯುವ ಯಾವುದೇ ಸ್ತ್ರೀ ಶೋಷಣೆಯನ್ನು ಮಟ್ಟಹಾಕುತ್ತಿರುತ್ತಾನೆ.**

# ದೃಶ್ಯ 58

***ಹಗಲು – ಪೋಲೀಸ್ ಠಾಣೆಯ ಹೊರಗೆ ಮತ್ತು ಒಳಗೆ***

| | | |
|---|---|---|
| | | (ಪೋಲೀಸ್ ಠಾಣೆಯ ಮುಂದೆ ಒಂದು ಕಾರು ಬಂದು ನಿಲ್ಲುತ್ತದೆ. ಅದರಲ್ಲಿ ಇಬ್ಬರು ವ್ಯಕ್ತಿಗಳಿಳಿದು ಠಾಣೆಯೊಳಗೆ ಬರುತ್ತಾರೆ, ಬರುತ್ತ ಬಾಗಿಲ ಬಳಿಯಲ್ಲಿ ನಿಂತಿದ್ದ ಪೇದೆಯನ್ನು..) |
| ಒಬ್ಬ | : | ಏನೋ 43? |
| ಇನ್ನೊಬ್ಬ | : | ಚೆನ್ನಾಗಿದಿಯೇನೋ?<br>(ಒಳಗಡೆ ಕೂತಿದ್ದ ಪೋಲೀಸ್ ಅಧಿಕಾರಿಯನ್ನು..)<br>.. ಹಾಯ್ ಏನ್ ಗುರೂ ಇನ್ನು ಎಷ್ಟ್ ವರ್ಷ ಹೀಗೆ ಇರ್ತೀಯಾ? ಯಾವಾಗ್ ಪ್ರಮೋಷನ್ನು?<br>(ಇನ್ಸ್‌ಪೆಕ್ಟರ್ ಕೋಣೆಗೆ ಹೋಗಿ)<br>.. ಹಲ್ಲೋ ಇನ್ಸ್‌ಪೆಕ್ಟರ್<br>(ಇನ್ಸ್‌ಪೆಕ್ಟರ್ ಇಲ್ಲದ್ದನ್ನು ಗಮನಿಸಿ) |
| ಒಬ್ಬ | : | ಏನೋ ಬರೋಕ್ಹೇಳ್ಬಿಟ್ಟು ಅವರೆ ಇಲ್ವಲ್ಲೋ?<br>(ಪೇದೆಯತ್ತ ತಿರುಗಿ) |
| ಇನ್ನೊಬ್ಬ | : | ಶ್ರೀಮದ್ ರಮಾರಮಣ ಗೋವಿಂದ.. |
| ಒಬ್ಬ | : | ಗೋವಿಂದ.. |
| ಪೇದೆ | : | (ಕೋಪದಿಂದ) ಏಯ್ ಏನ್ರಿ ಇದು?<br>(ಮೂರ್ತಿಯ ಕೋಣೆಗೆ ಬಂದು) |
| ಇನ್ನೊಬ್ಬ | : | .. ಗೋವಿಂದ<br>(ಮೂರ್ತಿಯನ್ನು ನೋಡಿ) ..ಹೆಲ್ಲೋ ಇನ್ಸ್‌ಪೆಕ್ಟರ್ |
| ಮೂರ್ತಿ | : | ಹೆಲೋ |
| ಒಬ್ಬ | : | ಏನೋ ಬರಹೇಳಿದ್ರಂತೆ? |
| ಮೂರ್ತಿ | : | ನಿಮ್ಮೇಲೆ ಒಂದ್ ಕೇಸಿತ್ತು. |
| ಇನ್ನೊಬ್ಬ | : | ಏನು?! ಒಂದಾ? ಏನ್ ಸಾರ್ ನೀವು? ನೂರಾ ಒಂದಿರ್ಬೇಕು ನೋಡಿ. |
| ಒಬ್ಬ | : | ಅಲ್ಲಾ ಇನ್ಸ್‌ಪೆಕ್ಟರ್, ನಮ್ಮೇಲ್ ಕೇಸಿದೆ ಅಂತ ಹೇಳ್ತಿರಲ್ಲಾ, ನಮ್ಮ ನಿಮ್ಮ ಫ್ರೆಂಡ್‌ಶಿಪ್ಪಲ್ಲಿ ಅಡ್ಜಸ್ಟ್ ಮಾಡ್ಕೊಳೋ ಅಂತಾ ಕೇಸ್ಗಳ್ರೀ ಇವೆಲ್ಲ. |
| ಮೂರ್ತಿ | : | ಹ್ಞಾಂ, ಆ ಅಡ್ಜಸ್ಟ್‌ಮೆಂಟ್‌ಗೋಸ್ಕರಾನೆ ನಿಮ್ನ ಕರ್ಸಿದ್ದು. ಒಂದೆರೆಡು ಹುಡುಗೀರ್ನ ಕೆಣಕಿದ್ರಂತೆ ನೀವು? |
| ಒಬ್ಬ | : | ಒಂದೆರೆಡಾ? ಯಾವ್ ಏರಿಯಾ ಹೇಳಿ? |

ಮೂರ್ತಿ : ಏರಿಯಾ ಬೇರೆ ಬೇಕಾ ನಿಮ್ಗೆ?

ಇಬ್ಬರೂ : ಹ್ಞೂ

ಮೂರ್ತಿ : ಅದೇ ಮಹರಾಣಿ ಕಾಲೇಜ್ ಹತ್ರ.

ಒಬ್ಬ : ಅದು ನಮ್ಮ ಮಾಮೂಲ್ ಏರಿಯಾ ರೀ.

ಇನ್ನೊಬ್ಬ : ನೆನ್ನೆ ಏನಾಯ್ತು ಹೇಳಲ್ಲಿ?

ಒಬ್ಬ : ಅದೇ ರಾಧಾ ಕೇಸೋ.

ಇನ್ನೊಬ್ಬ : ಓ ರಾಧಾ ಕೇಸಾ? (ಮೂರ್ತಿಗೆ) ಬಹಳ ರಸವತ್ತಾಗಿದ್ದಾಳೆ ಸಾರ್. ಮುಟ್ಟುದ್ರೆ ಶಾಕ್ ಹೊಡಿಯುತ್ತೆ.

ಮೂರ್ತಿ : ಶಾಕ್ ಹೊಡೀತಾ? ಹ್ಯಾಗ್ ಹೊಡೀತು?

ಇನ್ನೊಬ್ಬ : ಅದೇ ಸಾರ್ ಮಾಮೂಲಿ ಅವಳು ಬರ್ತಾ ಇದ್ಲು, ನಾನು ಆಸ್‌ಯೂಶುಯಲ್ ವಿಸ್ಟಲ್ ಹಾಕ್ದೆ. ಪಕ್ಕಕ್ಕೆ ಬಂದು ನಿಂತ್ಕೊಂಡ್ಲು, ಅನ್ಯೂಶ್ಯುಲ್ ಆಗಿ ಬಾಸ್ಟರ್ಡ್ ಅನ್ಬಿಡೋದಾ? ಸುಮ್ನೆ ಹಾಗೇ ಅವಳ ಜುಟ್ಟಿಡ್ಕೊಂಡೆ, ಹಾಗೆ ಅವಳ ಮೈಮೇಲೆ ಕೈ ಆಡಿಸ್ತಾ ಇದ್ದೆ.

ಮೂರ್ತಿ : ಅದು ಆಸ್‌ಯೂಶುಯಲ್ಲಾ?

ಇಬ್ಬರೂ : ಯೆಸ್ ಯೆಸ್

ಇನ್ನೊಬ್ಬ : ಅದೇ ಸರ್ ಹಾಗೇ ಹಾಯ್ ಹಾಯ್.. (ಮೂರ್ತಿ ಅವನ ಕೈ ಹಿಡಿದು ಬಾರಿಸುತ್ತಾನೆ. ನಂತರ ಇನ್ನೊಬ್ಬನನ್ನು ಕೊರಳ ಪಟ್ಟಿ ಹಿಡಿದು ವಿಚಾರಿಸುವಷ್ಟರಲ್ಲಿ ಅವನ ಕಾಲ ಬಳಿ ಒದ್ದೆಯಾಗಿರುತ್ತದೆ.)

ಮೂರ್ತಿ : ಯಾವ್ ಏರಿಯಾ ಅದು? ಮಾಮೂಲಿ ಜಾಗಾನ? (ಮೂರ್ತಿಗೆ ಕೈ ತೋರಿಸಿ ನಿನಗೆ ಮಾಡಿಸುತ್ತೀನಿ ಎಂದು ಎಚ್ಚರಿಕೆ ಕೊಡುತ್ತಿರುವಾಗ ಮೂರ್ತಿ ಜಾಡಿಸಿ ಒದ್ದು ಲಾಕಪ್ಪಿಗೆ  ನೂಕುತ್ತಾನೆ. ಇನ್ನೊಬ್ಬ ತಂತಾನೆ ಹೆದರಿ ಲಾಕಪ್ಪಿನೊಳಗೆ ಓಡಿ ಕೂರುತ್ತಾನೆ. ಮೂರ್ತಿ ಅವನನ್ನು ಹುಡುಕುತ್ತಿರುವಾಗ ಅವನೇ ಜೈಲಿನೊಳಗೆ ಹೋಗಿರುವುದನ್ನು ನೋಡಿ.. (ಪೇದೆಗೆ))

.. ಎಳಕೊಂಡ್ಬಾರೋ ಇನ್ನೊಬ್ಬನ್ನ

(ಪೇದೆ ಕರೆತರಲು ಹೋಗುತ್ತಾನೆ ಆತ ಬರದೆ ಅಲ್ಲೆ ಒದ್ದಾಡುತ್ತಿರುತ್ತಾನೆ)

.. ಏನಂತೆ ಅವನ್ದು?

(ಆತ ಮಲ ವಿಸರ್ಜನೆ ಮಾಡಿರುವುದನ್ನು ಮೂರ್ತಿಗೆ ಕೈ ಸನ್ನೆಯ ಮೂಲಕ ತಿಳಿಸುತ್ತಾನೆ. ಮೂರ್ತಿ ಅಲ್ಲಿಂದ ಹೊರಡುತ್ತಾನೆ)

# ದೃಶ್ಯ 59

***ಹಗಲು – ರಸ್ತೆ ಬದಿ***

(ಮೂರ್ತಿ ಹೋಗುತ್ತಿರುವ ದಾರಿಯಲ್ಲಿ ಇಬ್ಬರು ಜಗಳವಾಡುತ್ತಿರುತ್ತಾರೆ)

| | | |
|---|---|---|
| ಸಾಲ ಪಡೆದವ | : | ರೀ ನಿಮ್ ದುಡ್ಡ್ ಕೊಡಲ್ಲ ಅಂತ ನಾನ್ಯಾವಾಗ್ರೀ ಹೇಳಿದಿನಿ? |
| ಸಾಲ ಕೊಟ್ಟವ | : | ಬಿಸಾಕೋ ಮೊದ್ಲು ಇಲ್ಲಿ. |
| ಸಾಲ ಪಡೆದವ | : | ನೀವು ನಡು ಬೀದಿಲಿ ನಿಲ್ಸ್‌ಬಿಟ್ ಈಗ್ಲೇ ಕೊಡು ಅಂದ್ರೆ ನಾನೆಲ್ಲಿಂದ ಕೊಡ್ಲಿ. |
| ಸಾಲ ಕೊಟ್ಟವ | : | ಸಾಲ ತಗೋಳೋವಾಗ ಜ್ಞಾನ ಇರ್ಲಿಲ್ವಾ ಸೂಳೆಮಗನೆ? |
| ಸಾಲ ಪಡೆದವ | : | ರೀ ಮರ್ಯಾದೆ ಕೊಟ್ಟು ಮಾತಾಡ್ರೀ, ಏನ್ರೀ ಏನ್ರೀ ಬಾಯಿಗೆ ಬಂದ್ಹಾಗೆ ಮಾತಾಡ್ತೀರಾ. |
| ಸಾಲ ಕೊಟ್ಟವ | : | ಅಷ್ಟು ಜ್ಯೂರತ್ ಇರೋನು ಮೊದಲು ನನ್ ದುಡ್ಡ್ ಮಡುಗ್ಬಿಟ್ ಮಾತಾಡೋ. |
| ಸಾಲ ಪಡೆದವ | : | ಬಿಸಾಕ್ತೀನ್ರೀ, ಮರ್ಯಾದೆ ಕೊಡಿ ಮೊದ್ಲು. |
| ಸಾಲ ಕೊಟ್ಟವ | : | ಮರ್ಯಾದೆ ಬೇರೆ ಕೇಡು ಸೂಳೆ ಮಗನಿಗೆ.<br>(ಮೂರ್ತಿ ಬಂದು ಸಾಲ ಕೊಟ್ಟವನಿಗೆ ಲಾಠಿಯಿಂದ ತಿವಿಯುತ್ತಾನೆ)<br>.. ಏನ್ ಸಾರ್? |
| ಮೂರ್ತಿ | : | ಏನಂದೆ ನೀನ್ ಅವನಿಗೆ? |
| ಸಾಲ ಕೊಟ್ಟವ | : | ಏನಂದೆ ಅವನಿಗೆ.. |
| ಮೂರ್ತಿ | : | ಏನಂದೆ ನೀನ್ ಅವನ್ನಾ? |
| ಸಾಲ ಕೊಟ್ಟವ | : | ಸೂಳೆ ಮಗನೆ ಅಂದೆ.<br>(ಮೂರ್ತಿ ಕಪಾಳಕ್ಕೆ ಹೊಡೆಯುತ್ತಾನೆ)<br>.. ಯಾಕ್ ಸಾರ್ ಹೊಡಿತೀರಾ? |
| ಮೂರ್ತಿ | : | ಇನ್ನೊಂದ್ಸಲ ಆ ಶಬ್ಧ ನಿನ್ ಬಾಯ್ನಲ್ ಬಂದ್ರೆ ಹೂತಾಕ್ ಬಿಡ್ತೀನಿ ಬಡವ. ಹೆಣ್ಣನ್ನ ಸೂಳೆ ಮಾಡ್ದವರ್ಯಾರು? ನಿನ್ನಂಥ ಚೆಂಡಾಳ ಗಂಡುಸ್ರು. ಹೆಣ್ಣು ಜನ್ಮ ಕೊಡೊ ತಾಯಿ ಕಣೋ. ಮೊದ್ಲು ಅವಳಿಗೆ ಬೆಲೆ ಕೊಡೋದ್ ಕಲ್ತ್ಕೊಳಿ ಉದ್ಧಾರ ಆಗ್ತೀರ. |

(ಮೂರ್ತಿ ಅಲ್ಲಿಂದ ಹೋದಮೇಲೆ ಅಲ್ಲಿನ ಸ್ಥಳೀಯರು)

ಒಬ್ಬ : ಯಾರ್ರೀ ಇವ್ರು?

ಇನ್ನೊಬ್ಬ : ಹೊಸ್ದಾಗ್ ಬಂದಿರೊ ಇನ್ಸ್‌ಪೆಕ್ಟ್ರ ನರಸಿಂಹ ಮೂರ್ತಿ ಅಂತ. ಹೆಂಗಸ್ರಿಗೆ ಯಾರಾದ್ರು ಅವಮಾನ ಮಾಡಿದ್ರೆ ತಿಥಿ ಮಾಡಿ ಪಿಂಡ ತಿನ್ಸ್‌ಬಿಡ್ತಾರೆ. ಬರಿ ಹೆಸ್ರಷ್ಟೇ ಅಲ್ಲ ಅವತಾರಾನು ನರಸಿಂಹಾವತಾರಾನೆ.

# ದೃಶ್ಯ ೬೦

*ರಾತ್ರಿ – ಮೂರ್ತಿ ಮನೆಯ ಒಳಗೆ*

*ಹಸ್ತಪ್ರತಿಯಲ್ಲಿ: (ಚಲನಚಿತ್ರದಿಂದ ತೆಗೆಯಲಾಗಿದೆ)*

*(ಮೂರ್ತಿ ಮನೆಯಲ್ಲಿ ಕಾಯುತ್ತಾ ಕುಳಿತ ತಾಯಿ. ಗೋಡೆ ಗಡಿಯಾರ ನೋಡಿ ನಿಟ್ಟುಸಿರು ಬಿಡುತ್ತಾಳೆ. ಬತ್ತಿ ಹೊಸೆಯುವುದನ್ನು ಮುಂದುವರೆಸುತ್ತಾರೆ.)*

# ದೃಶ್ಯ 61

*ಹಗಲು – ಪೋಲೀಸ್ ಠಾಣೆಯ ಒಳಗೆ*

*ಹಸ್ತಪ್ರತಿಯಲ್ಲಿ: ಚಲನಚಿತ್ರದಿಂದ ತೆಗೆಯಲಾಗಿದೆ.*

| | | |
|---|---|---|
| *ವಕೀಲ* | : | *ನಮಸ್ಕಾರ ಸರ್*<br>*(ಮೂರ್ತಿ ಏನು ಎನ್ನುವಂತೆ ಸನ್ನೆ ಮಾಡುತ್ತಾನೆ)*<br>*.. ಅದೇ ನಿನ್ನೆ ನಮ್ಕಡೆ ಇಬ್ರು ಹುಡುಗ್ರನ್ನ ಅರೆಸ್ಟ್ ಮಾಡಿದ್ರಂತೆ. ಅವ್ರನ್ನ ಜಾಮೀನು ಕೊಟ್ಟು ಬಿಡ್ಸ್ಕೊಂಡ್ ಹೋಗಣಾಂತ ಬಂದೆ.*<br>*(ಮೂರ್ತಿ ಜೇಲಿನಲ್ಲಿದ್ದ ಖೈದಿಗಳನ್ನು ನೋಡುತ್ತಾನೆ, ವಕೀಲ ಅವರನ್ನು ನೋಡಿ ಹೊರಗೆ ಕರೆಯುತ್ತಾನೆ)* |
| *ಮೂರ್ತಿ* | : | *ಏನ್ರೋ, ಅದು... ಬನ್ನಿ...* |
| *ಖೈದಿಗಳು* | : | *ಒಂದ್ ಸ್ವಲ್ಪ ಇದೆ ಕ್ಲೀನ್ ಮಾಡಿ ಬರ್ತೀನಿ.* |
| *ಮೂರ್ತಿ* | : | *ಇನ್ನೊಂದ್ಸಲ ಹೀಗೆಲ್ಲ ಮಾಡ್ಬೇಡಿ ಅಂತ ಬುದ್ಧಿ ಹೇಳಿ. ಇಲ್ಲಿ ಸೈನ್ ಮಾಡಿ.* |

# ದೃಶ್ಯ 62

*ಹಗಲು – ಪೋಲೀಸ್ ಠಾಣೆಯ ಒಳಗೆ*

*ಹಸ್ತಪ್ರತಿಯಲ್ಲಿ: (ಚಲನಚಿತ್ರದಿಂದ ತೆಗೆಯಲಾಗಿದೆ)*

| | | |
|---|---|---|
| *ಮೂರ್ತಿ ತಾಯಿ* | : | *ನಮಸ್ಕಾರ ಇನ್ಸ್ಪೆಕ್ಟ್ರೇ.*<br>*(ಮೂರ್ತಿ ಆ ಕಡೆ ತಿರುಗಿ ಕೂತಿದ್ದಾನೆ)* |
| *ಮೂರ್ತಿ* | : | *ನಮಸ್ಕಾರ* |
| *ತಾಯಿ* | : | *ಎರೆಡ್ ದಿನದಿಂದ ನನ್ನ ಮಗ ಮನಗೇ ಬಂದಿಲ್ಲ. ಕಂಪ್ಲೈಂಟ್ ಕೊಟ್ಬಿಟ್ ಹೋಗೋಣಾಂತ ಬಂದೆ.* |
| *ಮೂರ್ತಿ* | : | *ಲೇ ಕೃಷ್ಣಪ್ಪ ಸ್ವಲ್ಪ ನೋಟ್ ಮಾಡ್ಕೊಳಯ್ಯ.* |
| *ಕೃಷ್ಣಪ್ಪ* | : | *ಸರ್ ಸರ್ ತಾಯಿಯವರು* |
| *ಮೂರ್ತಿ* | : | *ಆಂ.. ಓಹ್ ಅಮ್ಮ ನೀನು ಇಲ್ಲಿ?! ಏನಮ್ಮ ಇದು?* |
| *ತಾಯಿ* | : | *ತಪ್ಪಿಸ್ಕೊಂಡಿರೋ ನನ್ನ ಮಗನ ಹೆಸರು ಮೂರ್ತಿ ಅಂತ.* |
| *ಮೂರ್ತಿ* | : | *ಖಂಡಿತ ಹುಡುಕಿ ಕೊಡ್ತೀವಿ. ನೀವು ಈ ಸ್ಟೇಶನ್ ಹೊಸಲು ದಾಟೋದ್ರೊಳೊಗೆ, ಆ ಮುಠ್ಠಾಳ, ನಿಮ್ಮ ಹಿಂದೇನೆ ಬರ್ತಾನೆ.* |
| *ತಾಯಿ* | : | *ನಂಗೆ ಆ ನಂಬಿಕೆ ಇಲ್ಲ. ಇನ್ಸ್‌ಪೆಕ್ಟ್ರೇ ಸ್ವಲ್ಪ ನಿಮ್ ಟೋಪಿ ತೆಗಿತಿರಾ?*<br>*(ಅಮ್ಮ ಮೂರ್ತಿಯ ಕಿವಿ ಹಿಡಿದುಕೊಳ್ಳುತ್ತಾರೆ)* |
| *ಮೂರ್ತಿ* | : | *ಅಮ್ಮಾ.. ಫೋರ್ಟಿಥ್ರೀ, ಫಿಫ್ಟಿಥ್ರೀ, ಎಲ್ಲ ನೋಡ್ತಾ ಇದಾರೆ.* |
| *ತಾಯಿ* | : | *ಸಿಕ್ಸ್ಟಿ ಥ್ರೀ, ಸವೆಂಟಿಥ್ರೀ ಕೂಡ ನೋಡ್ಲೀ. ನಡಿಯೋ.* |

# ದೃಶ್ಯ 63

***ಹಗಲು – ಮೂರ್ತಿ ಮನೆಯ ಒಳಗೆ***

(ಮೂರ್ತಿ ಕುಳಿತು ಊಟ ಮಾಡುತ್ತಿದ್ದಾನೆ, ತಾಯಿ ಪಕ್ಕದಲ್ಲಿ ಕುಳಿತು ಆತನನ್ನೇ ನೋಡುತ್ತಿದ್ದಾರೆ)

| | | |
|---|---|---|
| ಮೂರ್ತಿ | : | ಅಬ್ಬ.. ಮೂರ್ ದಿವ್ಸದ್ ಊಟ ಒಂದೇ ದಿವ್ಸದಲ್ಲಿ ತಿನ್ಸ್‌ಬಿಟ್ಟ್ಯಲ್ಲಮ್ಮ. ಅಂತೂ ಮುಗ್ದ್ಹಾಗ್ ಆಯ್ತಲ್ಲ. |
| ತಾಯಿ | : | ಎಲ್ಲ್ ಮುಗಿದ್ಹಾಗ್ ಆಯ್ತು..? |
| ಮೂರ್ತಿ | : | ಹ್ಞಾಂ, ಎಲ್ಲ ಮುಗಿದ್ಹಾಗ್ ಆಯ್ತು!! |
| ತಾಯಿ | : | ಇದನ್ನ ಯಾರ್ ತಿನ್ನೋದು? |
| ಮೂರ್ತಿ | : | ಇದನ್ನ ನೀನ್ ತಿನ್ನಬೇಕ್ ಅಷ್ಟೇ ನನ್ ಕೈಲ್ ಆಗೋದಿಲ್ಲ |
| ತಾಯಿ | : | ಹಾಗೆಲ್ಲ ಅನ್ಬೇಡಪ್ಪ |
| ಮೂರ್ತಿ | : | ಹೊಟ್ಟೇಲಿ ಜಾಗ ಇಲ್ಲಮ್ಮ. |
| ತಾಯಿ | : | ಕಷ್ಟ ಪಡಬೇಕಪ್ಪ |
| ಮೂರ್ತಿ | : | ಒಹೋ.. ಕಷ್ಟ ಪಡಬೇಕಾ.. |
| ತಾಯಿ | : | ಹ್ಞೂ |
| ಮೂರ್ತಿ | : | ಪಡ್ತೀನಿ.. ಸ್ಪೂನ್ ಯಾಕೆ? ಡ್ರೈ ಜಾಮೂನ್, ಹಾಗೆ ತಿನ್ಬಹುದು. |
| ತಾಯಿ | : | ಎಲ್ಲರೂ ತಾಯಿನೆ ದೇವ್ರು ಅಂತಾರೆ. ಆದ್ರೆ ಈಗ ನೀನೆ ನನ್ನ ಭಾಗಕ್ಕೆ ದೇವ್ರಪ್ಪ. |
| ಮೂರ್ತಿ | : | ಏನಮ್ಮ ಹೀಗಂತಿಯಾ? |
| ತಾಯಿ | : | ನೀನ್ ವರ ಕೊಟ್ರೇನೆ ಈ ಮನೆ ಬೆಳಕಾಗೋದು. |
| ಮೂರ್ತಿ | : | ಅಲ್ಲಮ್ಮ, ಹಗಲ್ಹೊತ್ತು ಸೂರ್ಯ ಇರ್ತಾನೆ, ರಾತ್ರಿ ಹೊತ್ತು ಟ್ಯೂಬ್‌ಲೈಟ್ ಇರುತ್ತೆ ಇನ್ನ ಇದಕ್ಕಿಂತ ಏನ್ ಬೆಳಕ್ ಬೇಕು? |
| ತಾಯಿ | : | ಈ ಬೆಳಕು ಕಣ್ಣಿಗೆ ಸಾಕು, ಕತ್ತಲಾಗಿರೋ ಮನಸ್ಸಿಗೆ ಬೆಳಕು ಕೊಡಲ್ಲ. ಮೂರ್ತಿ ಮನುಷ್ಯ ಜನ್ಮಕ್ಕೆ ಮಣ್ಣಿಗೆ ಹೋಗೋವರ್ಗು ಆಸೆ ತಪ್ಪಿದ್ದಲ್ಲ ಅಂತಾರೆ. ನಂಗು ವಯಸ್ಸಾಯ್ತು ಇವತ್ತೋ ನಾಳೆನೋ ಅನ್ನೋ ಜೀವ, ಪುಣ್ಯ ಇದ್ರೆ ಒಬ್ಬ ಮೊಮ್ಮಗನ್ನ ಎತ್ಕೊಬೇಕು ಅಂತ ಆಸೆ ಕಣಪ್ಪ.<br>(ಮೌನವಾಗುವ ಮೂರ್ತಿಯನ್ನು ಗಮನಿಸಿ)<br>.. ನೀನ್ಹೀಗೆ ಮಾತಾಡ್ದೆ ಇದ್ರೆ ನಾನ್ ಏನೂ ಅಂತ |

ತಿಳ್ಕೊಳ್ಳಿ?
(ಇನ್ನೂ ಮೌನವಾಗಿರುವುದನ್ನು ಗಮನಿಸಿ)
.. ಯಾಕಪ್ಪ ರಾಜ? ನಾನೇನಾದ್ರು ತಪ್ಪು ಮಾತಾಡ್ ಬಿಟ್ನಾ?

ಮೂರ್ತಿ : ಇಲ್ಲಮ್ಮ, ನನ್ನ ಬಾಳಲ್ಲಿ ಆಗ್ಲೆ ಎರೆಡು ಜೀವಗಳ್ನ ಕಳ್ಕೊಂಡಿದಿನಿ, ಇನ್ನೊಂದ್ ಬೇಕೆನಮ್ಮ? ಅಮ್ಮ.. ನಾನ್ ಈ ಕೆಲ್ಸಕ್ ಸೇರಿದ ಉದ್ದೇಶ ನಮ್ಮ ಸುತ್ತಮುತ್ತ ನಡಿತಾಯಿರೋ ಹೆಣ್ಣಿನ ಶೋಷಣೆನ ನಿಲ್ಸೋಕೆ. ಅದಕ್ಕೆ ಕಾರಣರಾದ ದುಷ್ಟ ಶಕ್ತಿಗಳ್ನ ಬಲಿ ಹಾಕೋದಿಕ್ಕೆ. ಈ ದಾರೀಲಿ ನಾನ್ ಯಶಸ್ಸನ್ನ ಕಾಣ್ತಿನೋ ಇಲ್ವೋ ಗೊತ್ತಿಲ್ಲ, ಆದ್ರೆ.. ನೆಮ್ಮದಿ ಮಾತ್ರ ಸಿಕ್ಕಿದೆ ಅಮ್ಮ. ಅಮ್ಮ ಸತ್ಯವಾಗಿ ಹೇಳ್ತಿದಿನಮ್ಮ ಇದಲ್ದೆ ಬೇರೆ ಇನ್ನಯಾವ್ ಯೋಚನೆಯೂ ನನಗಿಲ್ಲ ಅಮ್ಮ.

ತಾಯಿ : ಸರಿ ಕಂದ. ನಿನ್ನಿಷ್ಟಾನಪ್ಪ.

# ದೃಶ್ಯ 64

*ಹಗಲು – ಜೈಲಿನ ಕಾರಾಗೃಹದ ಹೊರಗೆ ಮತ್ತು ಒಳಗೆ*

| | | |
|---|---|---|
| | | (ಮೂರ್ತಿ, ಜೈಲಿನ ಬಳಿಯ ಪೋಲೀಸ್ ಅಧಿಕಾರಿಗಳಿಗೆ ಸಲ್ಯೂಟ್ ಹೊಡೆದು ಒಳಗೆ ಪ್ರವೇಶಿಸುತ್ತಾನೆ) |
| ಮೂರ್ತಿ | : | ಹೆಲೋ ಮಿ. ವಿಶ್ವನಾಥ್ |
| ವಿಶ್ವನಾಥ್ | : | ಹೆಲ್ಲೋ ಮಿ. ಮೂರ್ತಿ. ಏನ್ ಇಷ್ಟು ದೂರ? ಕೂತ್ಕೊಳಿ.. |
| ಮೂರ್ತಿ | : | ಇಲ್ಲಿ ಆನಂದಿ ಅನ್ನೋ ಹೆಂಗ್ಸು ಮೂರು ವರ್ಷದಿಂದ ಶಿಕ್ಷೆ ಅನುಭವಿಸ್ತಾ ಇದಾಳೆ. ಅವಳನ್ನ ಸ್ವಲ್ಪ ನೋಡ್ಬೇಕಾಗಿತ್ತಲ್ಲ. |
| ವಿಶ್ವನಾಥ್ | : | ಆನಂದಿ ಅಂತಾನಾ..<br>(ಜ್ಞಾಪಿಸಿಕೊಂಡು) ಹ್ಞಾ.. ಹ್ಞಾ.. ಯಾಕೆ? |
| ಮೂರ್ತಿ | : | ಅವಳಿಂದ ಒಂದೆರೆಡ್ ವಿಷ್ಯ ತಿಳ್ಕೋಬೇಕಿತ್ತು. |
| ವಿಶ್ವನಾಥ್ | : | ಮೂರು ವರ್ಷಗಳಿಂದ ನಾಲ್ಕು ಗೋಡೆಗಳ ಮಧ್ಯೆ ಜೈಲ್‌ನಲ್ಲೇ ಕೊಳಿತಾಯಿದಾಳೆ. ಅವಳಿಂದ ನಿಮ್ಗೇನ್ ಮಾಹಿತಿ ಸಿಗುತ್ತೆ? |
| ಮೂರ್ತಿ | : | ಸಿಕ್ಕೋದು ಬಿಡೋದು ಬೇರೆ ವಿಷ್ಯ. ಪ್ರಯತ್ನ ಅಂತು ಪಡ್ಲೇ ಬೇಕಲ್ಲ.<br>(ಎಂದು ಸ್ವಲ್ಪ ಖಾರವಾಗಿ ನುಡಿಯುತ್ತಾನೆ) |
| ವಿಶ್ವನಾಥ್ | : | ನೀವು ಅವಳನ್ನ ನೋಡೋ ಹಾಗಿಲ್ಲ |
| ಮೂರ್ತಿ | : | ಯಾಕೆ? |
| ವಿಶ್ವನಾಥ್ | : | ಅವ್ಳು ಆಸ್ಪತ್ರೇಲಿದಾಳೆ. ಶಿ ಇಸ್ ಆನ್ ಹರ್ ಡೆತ್ ಬೆಡ್.<br>(ಮೂರ್ತಿ ಎದ್ದು ನಿಲ್ಲುತ್ತಾನೆ) |

**ನಿರ್ದೇಶಕರ ಟಿಪ್ಪಣಿ**

**ಈ ದೃಶ್ಯದ ನಂತರ ಚಲನಚಿತ್ರ ಒಂದು ಮುಖ್ಯವಾದ ತಿರುವನ್ನು ಪಡೆಯುತ್ತದೆ. ಮೂರ್ತಿಯ ದೃಢನಿಲುವು ಹಾಗು ಅವನ ಪರಿಶ್ರಮ ನಿಧಾನವಾಗಿ ವ್ಯಾಸರಾಯನತ್ತ ಗುರಿಯಿಡುತ್ತದೆ. ಅದಕ್ಕಾಗಿ ಆತ ಆನಂದಿಗಾಗಿ ಹುಡುಕುತ್ತಾನೆ.**

# ದೃಶ್ಯ 65

*ಹಗಲು – ಆಸ್ಪತ್ರೆಯ ಒಳಗೆ*

(ಮೂರ್ತಿ ಆನಂದಿ ದಾಖಲಾಗಿರುವ ಆಸ್ಪತ್ರೆಗೆ ಬರುತ್ತಾನೆ.)

ಆನಂದಿ : (ಆನಂದಿ ಮೂರ್ತಿಯನ್ನು ನೋಡಿ)
ಈ ವಯಸ್ನಲ್ಲು ಪೋಲೀಸ್ನೋರ್ ಕಾಟಾನ? ಒಳ್ಳೆ ರಸ ಹೀರ್ ಬಿಸಾಕಿರೋ ಸಿಪ್ಪೆ ಥರ ಇದೀನ್ ನಾನು. ಈ ಸಿಪ್ಪೆನ ಕುಕ್ಕುದ್ರೆ ನಿಮಗೇನ್ ಸಿಗುತ್ತೆ.

ಮೂರ್ತಿ : ನೀನೆಷ್ಟ್ ಜನ ಹೆಣ್ಣ್ ಮಕ್ಳನ್ನ ಸಿಪ್ಪೆ ಮಾಡಿ ಬಿಸಾಕಿದ್ದೀಯ, ಒಂದೇ ಎರಡೇ. ಹೆಣ್ಣ್ ಮಕ್ಳಿಗ್ ನೀನ್ ತೋರ್ಸಿರೊ ದಾರಿ, ಮಾಡಿರೋ ಪುಣ್ಯ ಕೆಲಸ. ಇಂದ್ರ ಅನ್ನೊ ಹುಡುಗಿನ ನಾಟಕದ ಕಂಪೆನಿಗೆ ಕಳ್ಸಿದ್ಯಲ್ಲ ಜ್ಞಾಪಕ ಇದಿಯಾ ನಿನಗೆ. ವೃದ್ಧನಾರೀ ಪತಿವೃತಾ ಅಂತ ಈಗ ಕೈಲಾಗ್ದೆ ಇರೋವಾಗ ಸಿಪ್ಪೆ ಅಂತ ಹೇಳ್ತಿದಿಯಾ?

ಆನಂದಿ : ನೀವ್ಹೇಳಿದ್ದೆಲ್ಲ ನಿಜ. ನಾನ್ ಹೆಣ್ಣಾಗ್ ಹುಟ್ಟಿ ಹೆಣ್ಣಿಗೆ ಶತ್ರು ಆಗ್ಬಿಟ್ಟೆ. ಮಾಡ್ಬಾರ್ದು ಮಾಡಿದ್ದಕ್ಕೆ.. ಆಗ್ಬಾರ್ದು ಆಗ್ಹೋಯ್ತು. ನಾನ್ ಹೆತ್ತ ಮಗಳೆ ನನ್ನ ಕಸುಬನ್ನ ಕಂಡು ನನ್ನಿಂದ ದೂರ ಹೊರ್ಟೋದ್ಲು.

ಮೂರ್ತಿ : ಈಗ್ಲಾದ್ರು ಕಿಂಚಿತ್ ಪಾಪ ಕಳ್ಕೋಬೇಕು ಅಂತಿದ್ರೆ ಆವತ್ತು ನೀನ್ ನಡ್ಸ್ತಾಯಿದ್ದ ವೇಷ್ಯಾಗೃಹಕ್ಕೆ ನಿನ್ನಹತ್ರ ಹೆಣ್ಣು ಮಕ್ಳನ್ನ ತಂದು ಬಿಡ್ತಾ ಇದ್ದವರು ಯಾರು? ಅವ್ರೆಲ್ಲಿದಾರೆ ಅಂತ ಹೇಳು.

ಆನಂದಿ : ಹೇಳ್ತಿನಿ. ಆದರೆ...

ಮೂರ್ತಿ : ಏನ್ ಆದ್ರೆ?

***ಹಸ್ತಪ್ರತಿಯಲ್ಲಿ: (ಚಲನಚಿತ್ರದಿಂದ ತೆಗೆಯಲಾಗಿದೆ)***

***ಆನಂದಿ : ಏನೂ ಅಂದ್ಕೋಬೇಡಿ, ಖಾಕಿ ಬಟ್ಟೆಯವ್ರನ್ನ ನಾನು ನಂಬಲ್ಲ, ಮೊದ್ಲು ನನ್ನ ಕೆಲ್ಸ, ಆಮೇಲೆ ನಿನ್ನ ಕೆಲ್ಸ.***

***ಮೂರ್ತಿ : ನಿನ್ನ ನಂಬಬಹುದಲ್ವಾ? ಆಯ್ತು. ಏನಾಗ್ಬೇಕು ಹೇಳು.***

ಆನಂದಿ : ನೀವ್ ನಂಗೊಂದ್ ಸಹಾಯ ಮಾಡಿದ್ರೆ ಖಂಡಿತ ಅವ್ರ

ಹೆಸ್ರೇಳ್ತಿನಿ.

ಮೂರ್ತಿ : ಮೊದ್ಲು ಹೇಳು ಅಮೇಲ್ ಸಹಾಯದ ಮಾತು

ಆನಂದಿ : ನನ್ನ ಮಗಳು ಸರಳಾಂತ ಬಾಂಬೆನಲ್ಲಿ ಡಾಕ್ಟ್ರಾಗಿದಾಳೆ.

ಮೂರ್ತಿ : ನಿನ್ನ ಮಗಳು? ಡಾಕ್ಟರ್ರು?

ಆನಂದಿ : ಹ್ಞಾಂ ನನ್ನ ಸ್ವಂತ ಮಗಳು, ನನ್ನ ಹೊಟ್ಟೇಲ್ ಹುಟ್ಟಿದ ಮಗಳು. ಸಾಯೋಕ್ ಮುಂಚೆ ಅವಳ್ನ ಒಂದೇ ಒಂದ್ಸಲ ನೋಡ್ಬೇಕು ಅಂತ ಆಸೆ. ಕರ್ಕೊಂಡ್ ಬಂದು ಪುಣ್ಯ ಕಟ್ಕೋತಿರಾ?

*ಹಸ್ತಪ್ರತಿಯಲ್ಲಿ: ಚಲನಚಿತ್ರದಿಂದ ತೆಗೆಯಲಾಗಿದೆ*

***ಆನಂದಿ*** *:* ***ನೀರು.. ನೀರು..***

***(ಮೂರ್ತಿ ಅವಳಿಗೆ ನೀರು ಕುಡಿಸುತ್ತಾನೆ)***

***.. ನಾನು ನನ್ನ ಮಗ್ಳನ್ನ ನೋಡ್ಬೇಕು. ಒಂದ್ಸಲ ಅವಳ ಮುಖ ತೋರ್ಸಿ.***

***ಮೂರ್ತಿ*** *:* ***ಆಗಲಿ. ಎಲ್ಲಿದಾಳೆ ಅವ್ಳು ಹೇಳು.***

ಮೂರ್ತಿ : ಆಯ್ತು. ಎಲ್ಲಿದಾರೆ ಆಕೆ.

ಆನಂದಿ : ಡಾಕ್ಟರ್ ಸರಳ.. ಬಾಂಬೆ ಸರ್ಸಿಂಗ್ ಹೋಮ್, ಮಾಹಿಮ್. ಬಾಂಬೆ.

# ದೃಶ್ಯ 66

*ಹಗಲು – ಬಾಂಬೆಯ ರಸ್ತೆ*

**[ಬಾಂಬೆಯ ಜನನಿಬಿಡ ರಸ್ತೆಯೊಂದನ್ನು ವೈಡ್ ಶಾಟ್ ಮೂಲಕ ಮುಂದಿನ ದೃಶ್ಯ ಬಾಂಬೆಯಲ್ಲಿ ನಡೆಯುವುದೆಂದು ಪ್ರೇಕ್ಷಕರನ್ನು ಆ ಪರಿಸರಕ್ಕೆ ಕೊಂಡೊಯ್ಯಲಾಗಿದೆ.]**



# ದೃಶ್ಯ 66ಅ

*ಹಗಲು – ಬಾಂಬೆ ಆಸ್ಪತ್ರೆಯ ಒಳಗೆ*

(ಮೂರ್ತಿ, ಸರಳಾ ಇರುವ ಆಸ್ಪತ್ರೆಗೆ ಬಂದಿದ್ದಾನೆ)

ಮೂರ್ತಿ : ಮೇ ಐ ಕಮ್ ಇನ್?

ಸರಳ : ಯೆಸ್

ಮೂರ್ತಿ : ನಮಸ್ಕಾರ

ಸರಳ : ನಮಸ್ಕಾರ

ಮೂರ್ತಿ : ನಾನು ಬೆಂಗಳೂರಿನಿಂದ ಬರ್ತಾ ಇದಿನಿ, ನಿಮ್ನ ನೋಡ್ಬೇಕು ಅಂತ.

ಸರಳ : ಕುತ್ಕೊಳಿ

ಮೂರ್ತಿ : ಥ್ಯಾಂಕ್ಸ್

ಸರಳ : ಯಾರಾದ್ರು ಪೇಷೆಂಟ್‌ನ ಕರ್ಕೊಂಡ್ ಬಂದಿದಿರೇನು?

ಮೂರ್ತಿ : ಅವ್ರು ಬರೋ ಸ್ಥಿತಿನಲ್ಲಿಲ್ಲ. ಅವ್ರು ಬೆಂಗ್ಳೂರ್ನಲ್ಲಿ ವಿಕ್ಟೋರಿಯಾ ಆಸ್ಪತ್ರೆನಲ್ಲಿದ್ದಾರೆ.

ಸರಳ : ಆ ಆಸ್ಪತ್ರೆಗು ನನಗೂ ಏನ್ ಸಂಬಂಧ?

ಮೂರ್ತಿ : ಇದೆ, ಸಂಬಂಧ ಇದೆ. ಕೊನೆ ಉಸಿರೆಳಿತಾ ಇರೋ ಆಕೆ ಬೇರೆ ಯಾರೂ ಅಲ್ಲ ನಿಮ್ಮ ತಾಯಿ ಆನಂದಿ.

ಸರಳ : (ದಿಗ್ಭ್ರಾಂತಿಗೊಂಡು..)
ನೋ. ಮಿಸ್ಟರ್ ನೀವು ದಾರಿ ತಪ್ಪಿ ಬಂದಿದ್ದೀರ. ನನ್ನ ತಾಯಿ ಸತ್ತು ಎಷ್ಟೋ ವರ್ಷಗಳಾಯ್ತು. ನನಿಗ್ ತಾಯಿ ಇಲ್ಲ ತಾಯಿ ಇಲ್ಲ.

ಮೂರ್ತಿ : ನೀವಿದೇ ಮಾತ್ಹೇಳ್ತೀರಿ ಅಂತ ನಂಗೊತ್ತಿತ್ತು.

*ಹಸ್ತಪ್ರತಿಯಲ್ಲಿ: (ಚಲನಚಿತ್ರದಿಂದ ತೆಗೆಯಲಾಗಿದೆ)*

*ಸರಳ : ಭವಿಷ್ಯ ಹೇಳ್ತೀರೇನು?*

*ಮೂರ್ತಿ : ಭವಿಷ್ಯಾನ ಯಾರೂ ಹೇಳೋಕೆ ಆಗೋಲ್ಲ. ನಂಗೆ ಅದ್ರಲ್ಲಿ ನಂಬಿಕೇನು ಇಲ್ಲ. ನಾಳೆ ಏನು ಅನ್ನೋದನ್ನ ದೇವರು ಗುಟ್ಟಾಗಿ ಇಟ್ಟಿರೋದ್ರಿಂದಾನೆ ಆಕಸ್ಮಿಕಗಳು ಜರುಗ್ತಾ ಇವೆ. ಈಗ ನೋಡಿ, ನಾನ್ ಬಂದಿರೋದು ನಿಮಗೆ ಆಕಸ್ಮಿಕ, ನಾನು ಯಾರೂಂತ ಗೊತ್ತಾದ್ರೆ ಬಹುಶಃ ನೀವು ನನಗೆ ಸಹಾಯ ಮಾಡ್ಬಹುದು.*

*ಸರಳ : ನೀವು ಯಾರಾದ್ರೆ ನಂಗೇನು? ನಂಗೆ ತಾಯಿ ಇಲ್ಲ.*

*ನಾನು ಬೆಂಗಳೂರಿಗೆ ಬರೋಲ್ಲ.*

*ಮೂರ್ತಿ : ಸುಮ್ನೆ ಯಾಕ್ ಆವೇಷ ಪಡ್ತೀರ? ನಿಮ್ಮನ್ನ ಕರ್‍ಕೊಂಡ್ ಬರ್ತೀನಂತ ನಿಮ್ಮ ತಾಯಿಗೆ ಮಾತ್ ಕೊಟ್ಟಿದ್ದಿನಿ.*

ಮೂರ್ತಿ : ನಿಮ್ಮ ತಾಯಿ ತಪ್ಪ್ ಮಾಡಿದಾರೆ ನಿಜ
(ಡಾ. ರಾವ್ (ಸರಳಳ ಗಂಡ) ಬಂದು ಬಾಗಿಲ ಬಳಿ ನಿಲ್ಲುತ್ತಾನೆ)
.. ಆದ್ರೆ ಪಶ್ಚಾತಾಪ ಪಟ್ಟು ನೊಂದು ನಿಮಿಷಗಳ್ನ ಎಣಿಸ್ತಾ ಇರೋ ಒಂದು ಹೆಣ್ಣಿನ ಮೇಲೆ ಅನುಕಂಪ ತೋರ್‍ಸ್‌ಬೇಕಾದ್ದು ಮಗಳ ಧರ್ಮ. ನೀವೀಗ ಬರ್ತೀರೊ ಇಲ್ವೋ?

ಡಾ. ರಾವ್ : (ಒಳಗೆ ಬರುತ್ತ..)
ಬರ್ತಾಳೆ ಖಂಡಿತ ಬರ್ತಾಳೆ. ಐ ಆಮ್ ಡಾ. ರಾವ್. ಸರಳಾಸ್ ಹಸ್ಬೆಂಡ್.

ಮೂರ್ತಿ : ನೈಸ್ ಟು ಮೀಟ್ ಯು.

ಡಾ. ರಾವ್ : ಸರಳ, ಏನೇ ಆದ್ರು ತಾಯಿ ತಾಯಿನೆ. ಜನ್ಮ ಕೊಟ್ಟೋಳು. ನೀನ್ ಮನಸನ್ನ ಇಷ್ಟೊಂದು ಕಠಿಣ ಮಾಡ್ಕೊಬಾರ್‍ದು. ನಾನೂ ಬರ್ತೀನಿ ನಡಿ ಹೋಗೋಣ.

**[ಈ ದೃಶ್ಯದ ನಂತರ ಕಥೆಯು ಬೆಂಗಳೂರಿನಲ್ಲಿ ನಡೆಯುವುದರಿಂದ ಟೈಂ ಲ್ಯಾಪ್ಸ್‌ಗಾಗಿ ಸರಳಾಳ ಮುಖದಿಂದ ಮುಂದಿನ ದೃಶ್ಯಕ್ಕೆ ಡಿಸಾಲ್ವ್ ಎಫೆಕ್ಟ್ ಬಳಸಲಾಗಿದೆ]**

# ದೃಶ್ಯ 67

***ಹಗಲು – ಆಸ್ಪತ್ರೆಯ ಒಳಗೆ***

| | | |
|---|---|---|
| | | (ಮೂರ್ತಿ, ಸರಳ, ಡಾ. ರಾವ್ ಮೂವರು ಒಳಗಡೆ ಬರುತ್ತಾರೆ) |
| ಮೂರ್ತಿ | : | ನಿಮ್ಮ ತಾಯಿ.. ಕರಿರಿ. |
| ಸರಳ | : | ಅಮ್ಮಾ.. ಅಮ್ಮಾ.. ಇಲ್ನೋಡು.<br>(ಆನಂದಿ ತನ್ನ ಮಗಳನ್ನು ನೋಡಿ ತುಂಬಾ ಸಂತೋಷಗೊಳ್ಳುತ್ತಾಳೆ) |
| ಆನಂದಿ | : | ಸರಳಾ |
| ಸರಳಾ | : | ಹೌದಮ್ಮ, ನಾನೆ ಸರಳ<br>(ಆನಂದಿ ಏಳಲು ಪ್ರಯತ್ನಿಸುತ್ತಿರುತ್ತಾಳೆ)<br>ಅಮ್ಮ.. ಅಮ್ಮ.. ಅಮ್ಮ.. |
| ಆನಂದಿ | : | ನನ್ನನ್ನ ಕ್ಷಮ್ಸಿದಿಯಾ ಸರಳ? |
| ಸರಳ | : | ಯಾಕಮ್ಮ ಹಾಗೆಲ್ಲ ಅಂತಯಾ? |
| ಆನಂದಿ | : | ಸರಿ. (ಎಂದು ಏನನ್ನೋ ಹೇಳಲು ಪ್ರಯತ್ನಿಸುತ್ತಾಳೆ) |
| ಸರಳ | : | ಹೇಳಮ್ಮ..<br>(ಕೇಳುತ್ತಿರುವಾಗಲೆ ಆನಂದಿ, ನಿಧಾನವಾಗಿ ಹಿಂದೆ ಬೀಳುತ್ತ ಪ್ರಾಣ ಬಿಡುತ್ತಾಳೆ)<br>ಅಮ್ಮಾ.. ಅಮ್ಮಾ.. ಅಮ್ಮಾ..<br>(ದುಃಖದಿಂದ ಕಿರುಚಿಕೊಳ್ಳುತ್ತಾಳೆ.) |
| ಡಾ. ರಾವ್ | : | ಸಮಾಧಾನ ಮಾಡ್ಕೋ ಸರಳ |



| | | |
|---|---|---|
| ಸರಳ | : | (ಮೂರ್ತಿಗೆ) ಎಲ್ಲಾ ಮರ್ತು, ಎಲ್ಲೋ ಇದ್ದೋಳ್ನ ಕರ್ಕೊಂಡ್ ಬಂದು ಈ ದುಃಖಕ್ ನೂಕಿದ್ರಿ. ನನ್ನನ್ನ ನೋಡಿದ್ರೆ ಏನೋ ಹೇಳ್ತಾಳೆ, ಅದ್ರಿಂದ ಏನೋ ಉದ್ಧಾರ ಆಗುತ್ತೆ ಅಂದ್ರಲ್ಲ ಏನಾಯ್ತು, ನಮ್ಮಮ್ಮ ಏನ್ ಹೇಳಿದ್ಲು? |
| ಮೂರ್ತಿ | : | ನನಗೇನ್ ಹೇಳ್ದಿದ್ರು ಪರ್ವಾಗಿಲ್ಲಾ ರೀ, ಕಡೆಗಾಲ್ದಲ್ಲಾದ್ರು ನೀವು ಅವರನ್ನ ಬಾಯಿ ತುಂಬ ಅಮ್ಮಾ ಅಂದ್ರಲ್ಲ ಸಾಕು ಬಿಡಿ ಅವರ್ ಆತ್ಮಕ್ಕೆ ಶಾಂತಿ ಸಿಗುತ್ತೆ.<br>(ಡಾ. ರಾವ್‌ಗೆ ಸಮಾಧಾನ ಹೇಳಿ ಅಲ್ಲಿಂದ ಹೊರಡುತ್ತಾನೆ. ಸರಳ ಅಲ್ಲೇ ದುಃಖಿಸುತ್ತಿರುತ್ತಾಳೆ) |

# ದೃಶ್ಯ 68

***ರಾತ್ರಿ – ಮೂರ್ತಿ ಮನೆಯ ಒಳಗೆ***

(ಮೂರ್ತಿ ಒಬ್ಬನೇ ಕುಳಿತು ಯೋಚಿಸುತ್ತಿದ್ದಾನೆ. ಅವನ ಕಣ್ಣ ಮುಂದೆ ಆನಂದಿ ಸಾಯುತ್ತಿರುವ ದೃಶ್ಯ. ಹಾಗೇ ಯೋಚಿಸುತ್ತ ಅಲ್ಲೇ ಕೂತಿದ್ದಾನೆ)

# ದೃಶ್ಯ 69

***ಹಗಲು – ಮೂರ್ತಿ ಮನೆಯ ಒಳಗೆ***

| | | |
|---|---|---|
| | | (ಮೂರ್ತಿ ಹಾಗೆ ಯೋಚಿಸುತ್ತ ಅಲ್ಲೇ ನಿದ್ರಿಸಿದ್ದಾನೆ. ಬೆಳಗಿನ ಜಾವ ತಾಯಿ ಬಂದು ಅವನನ್ನು ನೋಡುತ್ತಾರೆ) |
| ತಾಯಿ | : | (ತಲೆ ನೇವರಿಸುತ್ತ..)<br>ಮೂರ್ತಿ, ಇಲ್ಲ್ಯಾಕಪ್ಪ ಮಲ್ಗಿದ್ದೀಯ? ಒಳಗೆ ನಿದ್ರೆ ಬರ್ಲಿಲ್ವಾ? |
| ಮೂರ್ತಿ | : | ಇಲ್ಲಮ್ಮ. |
| ತಾಯಿ | : | ಇದೇನಪ್ಪ ಚಿಂತೆ ಮಾಡ್ತಿದೀಯ? |



| | | |
|---|---|---|
| ಮೂರ್ತಿ | : | ಅಮ್ಮ, ಜೀವನ ಅನ್ನೋ ಮೂರು ಅಕ್ಷರಕ್ಕಿರೋ ಅರ್ಥನೇ, ನಿರಾಸೆ, ನೋವು, ಚಿಂತೆ ಅಂತ. ನಿತ್ಯ ಅದನ್ನ ಎದ್ರುಸೋದ್ ತಾನೆಮ್ಮ ನಮ್ಮ ಕರ್ತವ್ಯ.<br>(ಮನೆಯ ಕಾಲಿಂಗ್ ಬೆಲ್ಲಿನ ಸದ್ದಾಗುತ್ತದೆ.ಮೂರ್ತಿಯ ತಾಯಿ ಬಾಗಿಲು ತೆಗೆಯುತ್ತಾರೆ. ಬಾಗಿಲ ಬಳಿ ಒರ್ವ ನರ್ಸ್ ಬಂದು ನಿಂತಿರುತ್ತಾಳೆ.) |
| ನರ್ಸ್ | : | ನಮಸ್ಕಾರಮ್ಮ. |
| ತಾಯಿ | : | ಯಾರಮ್ಮ? |
| ನರ್ಸ್ | : | ಸ್ವಲ್ಪ ಮೂರ್ತಿಯವರ್ನ ನೋಡ್ಬೇಕಾಗಿತ್ತು.. |
| ತಾಯಿ | : | ಮೂರ್ತಿ, ಯಾರೋ ಹೆಣ್ಣ್ ಮಗಳು ನಿನ್ನ ನೋಡೋಕ್ ಬಂದಿದಾರಪ್ಪ.<br>(ತಾಯಿ, ನರ್ಸ್‌ನ್ನು ಒಳಗೆ ಕರೆತರುತ್ತಾರೆ.) |

ತಾಯಿ : ಬಾಮ್ಮ ಒಳಗೆ.

ನರ್ಸ್ : ಗುಡ್ ಮಾರ್ನಿಂಗ್ ಸರ್

ಮೂರ್ತಿ : ಗುಡ್ ಮಾರ್ನಿಂಗ್

ನರ್ಸ್ : ಸರ್ ಆನಂದಿ ಅನ್ನೋ ಪೇಷೆಂಟ್ ನಿಮ್ಗೊಂದ್ ಕಾಗದ ಕೊಟ್ಟಿದ್ಲು.

ಮೂರ್ತಿ : ಹ್ಞಾಂ.. ಹ್ಞಾಂ..
(ತಕ್ಷಣ ಮೂರ್ತಿ ಆ ಪತ್ರವನ್ನು ತೆಗೆದುಕೊಳ್ಳುತ್ತಾನೆ)

ನರ್ಸ್ : ನೀವು ಊರಿಂದ ಬರೋದ್ರೊಳಗೆ ಅಕಸ್ಮಾತ್ ನಾನ್ ಸತ್ಹೋದ್ರೆ ಇದನ್ನ ನಿಮ್ಗೆ ಕೊಡು ಅಂತ ಹೇಳಿದ್ಲು. ಆದ್ರೆ ನಾನ್ ನೆನ್ನೆ ರಜಾ ಇದ್ದದ್ರಿಂದ ನಾನ್ ಬರೋಕಾಗ್ಲಿಲ್ಲ.

ಮೂರ್ತಿ : ಕೂತ್ಕೊಳಿ.

ನರ್ಸ್ : ಥ್ಯಾಂಕ್ಯೂ ಸರ್

ಮೂರ್ತಿ : ಅಮ್ಮಾ, ಅವ್ರಿಗೆ ಸ್ವಲ್ಪ ಕಾಫಿ ಕೊಡು.

ತಾಯಿ : ಸರೀಪಾ.
(ಮೂರ್ತಿ ಕಾಗದವನ್ನು ಒಡೆದು ಓದಲು ಪ್ರಾರಂಭಿಸುತ್ತಾನೆ. ಅದರಲ್ಲಿ ಆನಂದಿ ಹೀಗೆಂದು ಬರೆದಿರುತ್ತಾಳೆ. "ಕಾಟಯ್ಯ, ತಿಪ್ಪರಾಜು, ವ್ಯಾಸರಾಯ ನನ್ನ ಜೊತೆ ಪಾಪದ ಸಮುದ್ರದಲ್ಲಿ ಈಜುತ್ತಾ ಇದ್ದ ಪಾಪಿಗಳು. ನನ್ನ ಮಗಳ ಮೇಲಾಣೆ ಅವ್ರೆಲ್ಲಿದಾರೆ ಅಂತ ನಂಗೊತ್ತಿಲ್ಲ")

ಮೂರ್ತಿ : (ಸ್ವಗತ) ಕಾಟಯ್ಯ, ತಿಪ್ಪರಾಜು, ವ್ಯಾಸರಾಯ

**ನಿರ್ದೇಶಕರ ಟಿಪ್ಪಣಿ:**

**ನರ್ಸ್ ತಂದುಕೊಡುವ ಆನಂದಿಯ ಪತ್ರದಲ್ಲಿ ಮೂರು ಹೆಸರುಗಳು ಮೂರ್ತಿಗೆ ಸಿಕ್ಕು ಆತನ ನಿರ್ದಿಷ್ಟ ಗುರಿಗಳು ಗೋಚರವಾಗುತ್ತವೆ.**

# ದೃಶ್ಯ 70

***ಹಗಲು – ಪೋಲೀಸ್ ಠಾಣೆಯ ಒಳಗೆ***

***(ಚಲನಚಿತ್ರದಲ್ಲಿ ಸೇರಿಸಲಾಗಿದೆ– ಹಸ್ತಪ್ರತಿಯಲ್ಲಿ ಇಲ್ಲ)***

| | | |
|---|---|---|
| | | (ಎಲ್ಲ ಪೋಲೀಸ್ ಪೇದೆಗಳು ನಿಂತಿದ್ದಾರೆ ಮೂರ್ತಿ ಅವರ ಮಧ್ಯ ಬಂದು) |
| ಮೂರ್ತಿ | : | ಈ ಸುತ್ತಮುತ್ತ ವ್ಯಾಸರಾಯ, ಕಾಟಯ್ಯ, ತಿಪ್ಪರಾಜು ಅನ್ನೋ ಅನುಮಾನಾಸ್ಪದವಾದ ವ್ಯಕ್ತಿಗಳು ಸಿಕ್ಕುದ್ರೆ ತಕ್ಷಣ ಹಿಡ್ಕೊಂಡ್ ಬನ್ನಿ. ಸಿಕ್ಕದೇ ಇದ್ರೆ ಆ ಹೆಸರಿನವರ್ಯಾರಾದ್ರು ಇದಾರ, ಅವರ ವ್ಯವಹಾರ ಏನು. ವ್ಯಾಪಾರ ಏನು ಅಂತ ಡೀಟೈಲ್ ಆಗಿ ತಿಳ್ಕೊಂಡ್ ಬಂದು ಹೇಳಿ. |
| ಎಲ್ಲ ಪೇದೆಗಳು | : | ಯೆಸ್ ಸರ್. |

# ದೃಶ್ಯ 71

***ಹಗಲು – ಜೈಲರ್ ಕೋಣೆಯ ಒಳಗೆ***

| | | |
|---|---|---|
| | | (ಜೈಲಿನಲ್ಲಿ ಆನಂದಿಗೆ ಸಂಬಂಧಪಟ್ಟ ವಸ್ತುಗಳನ್ನು ಪರಿಶೀಲಿಸಲಾಗುತ್ತಿದೆ) |
| ಜೈಲರ್ ವಿಶ್ವನಾಥ್ | : | ಇಷ್ಟೆ ಆಕೆ ಆಸ್ತಿಗಳು, ಈ ಚಿನ್ನದ ಸರ, ನಾಲ್ಕು ಬಳೆಗಳು, ಈ ಜರಿ ಸೀರೆ. ಒಂದೆರೆಡು ಪತ್ರಗಳು.<br>(ತಾಯಿಯ ವಸ್ತುಗಳನ್ನು ನೋಡಿ ಸರಳ ದುಃಖಿಸುತ್ತಾಳೆ) |



ಡಾ.ರಾಜ್‌ಕುಮಾರ್‌ರವರಿಗೆ ನಾಗಾಭರಣರಿಂದ ದೃಶ್ಯದ ವಿವರಣೆ

| | | |
|---|---|---|
| ಡಾ. ರಾವ್ | : | (ಸರಳಾಗೆ) ಸರಳ.. ಬಿ ಬ್ರೇವ್.<br>(ಮೂರ್ತಿಗೆ ಒಂದು ಪತ್ರದಲ್ಲಿ ಕಾಟಯ್ಯ ಎಂಬ ಸಹಿ ಇರುವ ಪತ್ರ ಸಿಗುತ್ತದೆ) |
| ಮೂರ್ತಿ | : | (ವಿಶ್ವನಾಥ್‌ಗೆ) ಈ ಲೆಟರ್ಸ್ ನನ್ನ ಹತ್ರ ಇರ್ಲಿ. |
| ವಿಶ್ವನಾಥ್ | : | ಇಟ್ಸ್ ಆಲ್ ರೈಟ್ |

***ಹಸ್ತಪ್ರತಿಯಲ್ಲಿ : (ಚಲನಚಿತ್ರದಿಂದ ತೆಗೆಯಲಾಗಿದೆ)***

| | | |
|---|---|---|
| ***ಸರಳ*** | : | ***ಇನ್ಸ್‌ಪೆಕ್ಟ್ರೆ, ಈ ಬಳೆ, ಸರಾನ ಮಾರ್ಸಿ ಬರೋ ಹಣಾನ ನಮ್ಮಮ್ಮನ ಹೆಸ್ರಲ್ಲಿ ಯಾವ್ದಾದ್ರು ಅನಾಥಾಶ್ರಮಕ್ಕೆ ಕೊಟ್ಟುಬಿಡಿ*** |

# ದೃಶ್ಯ 72

*ಹಗಲು – ದೇವಸ್ಥಾನ (ಹೊರಗೆ)*

*ಹಸ್ತಪ್ರತಿಯಲ್ಲಿ : (ಚಲನಚಿತ್ರದಿಂದ ತೆಗೆಯಲಾಗಿದೆ)*

| | | |
|---|---|---|
| | | *(ಇಂದಿರಾಳ ಇಬ್ಬರು ತಂಗಿಯರ ಮದುವೆ ನಡೆಯುತ್ತಿದೆ. ತಾಯಿ ಆ ಸಂಭ್ರಮದಲ್ಲಿ ಬೇರೆ ಯಾರದೋ ಬರುವಿಕೆಯನ್ನು ಕಾಯುತ್ತಿದ್ದಾಳೆ)* |
| *ಪುರೋಹಿತ* | : | *ತಾಯಿ, ಮಹೂರ್ತ ಮೀರ್ತಾ ಇದೆ.* |
| *ತಾಯಿ* | : | *ಒಂದ್ನಿಮ್ಷ ನಿಧಾನ್ಸಿ ಸ್ವಾಮಿ. ಬೇಕಾದವರೊಬ್ರು ಬರ್ಬೇಕಿತ್ತು. ಬರ್ತಾರೆ.* |
| | | *(ಜನಗಳ ಮಧ್ಯ ಮಾತನಾಡಿಕೊಳ್ಳುತ್ತಾರೆ)* |
| *ಒಬ್ಬ* | : | *ಇನ್ನು ಯಾರ್ ಬರ್ಬೇಕಂತೆ* |
| *ಇನ್ನೊಬ್ಬ* | : | *ಯಾರೋ ಪುಣ್ಯಾತ್ಮ. ಈ ಕುಟುಂಬಕ್ಕೆ ತುಂಬ ಬೇಕಾದವರಂತೆ. ಈ ಮದ್ವೆಗೆ ಸಹಾಯ ಮಾಡಿರೋರಂತೆ.* |
| | | *(ಅಷ್ಟರಲ್ಲಿ ಮೂರ್ತಿ ಅಲ್ಲಿಗೆ ಜೀಪಿನಿಂದ ಇಳಿದು ಬರುತ್ತಾನೆ. ರಾಜೀವಿ ಮುಂದಿನ ಕಾರ್ಯ ನಡೆಯಲಿ ಎನ್ನುವ ಸೂಚನೆಯನ್ನು ನೀಡುತ್ತಾಳೆ)* |

# ದೃಶ್ಯ 73

*ಹಗಲು – ದೇವಸ್ಥಾನ (ಹೊರಗೆ)*

*ಹಸ್ತಪ್ರತಿಯಲ್ಲಿ : (ಚಲನಚಿತ್ರದಿಂದ ತೆಗೆಯಲಾಗಿದೆ)*

| | | |
|---|---|---|
| | | *(ತಾಳಿ ಕಟ್ಟಿ ಆದಮೇಲೆ, ಇಬ್ಬರು ಜೋಡಿಗಳು ತಾಯಿಗೆ ನಮಸ್ಕರಿಸಲು ಬರುವರು)* |
| *ರಾಜೀವಿ* | : | *ಬೇಡಮ್ಮ..* <br> *(ಎಂದು ಒಂದು ಹೆಜ್ಜೆ ಹಿಂದೆ ಹೋಗುವಳು)* <br> *.. ಬೇಡಮ್ಮ.. ಮೊದಲು ನಮಸ್ಕಾರ ಮಾಡಬೇಕಾದ್ದು ನಮ್ಮ ಮನೆ ದೇವರಿಗೆ. ಬನ್ನಿ* <br> *(ಎಂದು ಮೂರ್ತಿ ಹತ್ತಿರ ಕರೆತರುತ್ತಾಳೆ)* <br> *.. ಮೊದಲು ಇವರ ಆಶೀರ್ವಾದ ತಗೊಳಿ..* |
| *ಮೂರ್ತಿ* | : | *ತಾಯಿ ಆಶೀರ್ವಾದ ಮುಖ್ಯಾಮ್ಮ.* |
| *ರಾಜೀವಿ* | : | *ದಿಕ್ಕಿಲ್ಲದ ನಮಗೆ ತಾಯಿ, ತಂದೆ, ದೈವ ಎಲ್ಲಾ ನೀವೆ. ಆಶೀರ್ವಾದ ಮಾಡಿ* <br> *(ಎರೆಡು ಜೋಡಿ ಮೂರ್ತಿಗೆ ಕೈ ಮುಗಿಯುವರು)* |

# ದೃಶ್ಯ 74

***ಹಗಲು – ಪೋಲೀಸ್ ಠಾಣೆಯ ಒಳಗೆ***

| | | |
|---|---|---|
| | | (ಪೋಲಿಸ್ ಠಾಣೆಯಲ್ಲಿ ಮೂರ್ತಿ ಏನನ್ನೋ ಪರಿಶೀಲಿಸುತ್ತಿರುವಾಗ ಒಬ್ಬ ಪೇದೆ ಬಂದು) |
| ಮೂರ್ತಿ | : | ಯೆಸ್..? |
| ಪೇದೆ | : | ನೀವ್ ಹೇಳಿದ್ ಕೆಲ್ಸ ಮಾಡ್ಕೊಂಡ್ ಬಂದಿದಿನಿ ಸರ್. ವ್ಯಾಸರಾಯ ಅನ್ನೋ ಹೆಸ್ರಲ್ಲಿ ಒಬ್ಬರೆ ಇದಾರೆ ಸರ್ ಆದ್ರೆ ಅವ್ರೊಬ್ಬ ದೊಡ್ಡ ಸಂಸ್ಕೃತ ಪಂಡಿತರು ಸರ್. |
| ಪೇದೆ1 | : | ಸರ್ ತಿಪ್ಪರಾಜು ಅನ್ನೋರು ಇಬ್ಬರಿದ್ದಾರೆ. ಒಬ್ಬರು ಮೈನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಪ್ಯೂನ್ ಆಗಿ ಕೆಲ್ಸ ಮಾಡ್ತಿದಾರೆ. ಇನ್ನೊಬ್ರು ಮಡ್ರಾಸ್‌ನವ್ರು ಸರ್. ಇಲ್ಲಿ ಬಂದು ಮೂವತ್ತು ವರ್ಷಗಳಾಗಿವೆ ಆದ್ರೆ ಬಹಳ ಒಳ್ಳೆ ಜನ ಅವ್ರು. |
| ಪೇದೆ | : | ಕಾಟಯ್ಯ ಅನ್ನೋ ಹೆಸ್ರಿನಲ್ಲಿ ಮೂರ್ ಜನ ಇದಾರೆ ಸರ್. ಒಬ್ರು ಮೃದಂಗ ವಿದ್ವಾನ, ಇನ್ನೊಬ್ರು ಕಂಟ್ರ್ಯಾಕ್ಟರ್, ಮೂರ್ನೇವ್ರು ಮೆಡಿಕಲ್ ರಪ್ರೆಸೆಂಟೇಟಿವ್ ಸರ್.. |
| ಮೂರ್ತಿ | : | ಆ ಮೆಡಿಕಲ್ ರಪ್ರೆಸೆಂಟೇಟಿವ್‌ಗೆ ಎಷ್ಟು ವಯಸ್ಸು? |
| ಪೇದೆ | : | ಇಪ್ಪತೆರೆಡೋ ಇಪ್ಪತ್ಮೂರೋ ಇರ್ಬಹುದು ಸರ್. (ಮೂರ್ತಿ ಹತಾಷನಾಗುತ್ತಾನೆ) |
| ಮೂರ್ತಿ | : | ಅಂದ್ರೆ ನಾನ್ಹೇಳಿದ್ ವ್ಯಕ್ತಿಗಳ್ಯಾರು ಸಿಗ್ಲಿಲ್ಲ. |
| ಪೇದೆ | : | ಆದ್ರೆ ಕಾಟೆಶ್ ಅನ್ನೋ ವ್ಯಕ್ತಿನಾ ಫಾಲೋ ಮಾಡ್ದೆ ಸಾರ್. |
| ಮೂರ್ತಿ | : | ಎಲ್ಲಿ? |
| ಪೇದೆ | : | ಮೂರು ವರ್ಷದ ಕೆಳಗೆ ಸಾಧಾರಣವಾಗಿದ್ದ ಮನುಷ್ಯ, ಇವತ್ತು ಕಾಟೇಶ್ ಸ್ಟ್ಯಾರಿ ಅಂತ ಒಂದು ದೊಡ್ಡ ಅಂಗಡಿ ಇಟ್ಕೊಂಡಿದಾನೆ ಸರ್. ಕಾರಿದೆ ಬಂಗಲೆ ಇದೆ. ಸಾರ್ ಅವನ ವಿಷ್ಯದಲ್ಲಿ ಒಳ್ಳೆ ಅಭಿಪ್ರಾಯ ಕೇಳ್ಳಿಲ್ಲ ಸಾರ್. |
| ಮೂರ್ತಿ | : | ಅವನ ಫೋನ್ ನಂಬರ್ ಇದ್ಯಾ? |
| ಪೇದೆ | : | ತಂದಿದಿನಿ ಸರ್<br>.. ತಗೊಳಿ ಸಾರ್. (ನಂಬರ್ ಕೊಡುತ್ತಾನೆ) |

# ದೃಶ್ಯ 75

***ಹಗಲು – ಕಾಟೇಶ್ ಮನೆಯ ಒಳಗೆ***

| | | |
|---|---|---|
| | | (ಫೋನ್ ರಿಂಗಾಗುತ್ತದೆ, ಕಾಟೇಶ್‌ನ ಮಗಳು ಫೋನ್ ರಿಸೀವ್ ಮಾಡುತ್ತಾಳೆ.) |
| ಹುಡುಗಿ | : | ಹಲೋ ಯಾರು? |
| ಮೂರ್ತಿ | : | ಹಲೋ, ಇದು ಕಾಟೇಶ್ ಅವರ ಮನೆನಾ? |
| ಹುಡುಗಿ | : | ಹೌದು ಇದು ಕಾಟೇಶ್ ಅವರ ಮನೆನೆ. ಡ್ಯಾಡಿ ನಿಮಗೆ ಫೋನ್.. (ತಂದೆಯ ಕೈಗೆ ಫೋನ್ ಕೊಡುತ್ತಾಳೆ) |
| ಕಾಟೇಶ್ | : | ಯಾರ್ದಮ್ಮ ಅದು? |
| ಹುಡುಗಿ | : | ಯಾರೋ? |
| ಕಾಟೇಶ್ | : | ಹಲೋ, ಕಾಟೇಶ್ ಹಿಯರ್. |
| ಮೂರ್ತಿ | : | ಮಿ. ಕಾಟೇಶ್ ಅವ್ರೆ, ನಿಮ್ಮನೆ ಬೆಳ್ಳಿ ಪಾತ್ರೆಗಳನ್ನ ಕದ್ದಿರೋ ಕಳ್ಳ ಸಿಕ್ಕಿದಾನೆ, ತಕ್ಷಣ ನೀವ್ ಬಂದು ಗುರುತಿಸ್ದ್ರೆ, ನಿಮ್ ಪಾತ್ರೆಗಳ್ನ ನೀವ್ ತಗೊಂಡ್ ಹೋಗ್ಬಹುದು. |
| ಕಾಟೇಶ್ | : | ನಮ್ಮನೆಲ್ ಯಾವ್ ಬೆಳ್ಳಿ ಪಾತ್ರೆನು ಕಳುವಾಗಿಲ್ಲ. ನಾನ್ ಕಂಪ್ಲೇಂಟು ಕೊಟ್ಟಿಲ್ಲ. |
| ಮೂರ್ತಿ | : | ತಾವು ಶ್ರೀಮಂತರು, ನೋಡ್ಕೊಳ್ದೇ ಇರ್ಬಹುದು. ಪಾತ್ರೆಗಳ ಮೇಲೆ ನಿಮ್ಮ ಹೆಸರಿದೆ. ಕಳ್ಳ ನಿಮ್ಮನೆಲೆ ಕದ್ದಾ ಅಂತ ಹೇಳ್ತಿದಾನೆ. ನೀವೊಂದ್ಸಲ ಬಂದು ನಿಮ್ದು ಹೌದೊ ಅಲ್ವೋ ಅಂತ ಹೇಳದ್ರೆ ಸಾಕು. |
| ಕಾಟೇಶ್ | : | ನಮ್ದಲ್ಲ ಅಂತ ಹೇಳ್ತಿದಿನಲ್ಲ ಸ್ವಾಮಿ. |
| ಮೂರ್ತಿ | : | (ಗಂಭೀರವಾಗಿ) ಇದು ಪೋಲೀಸ್ ಸ್ಟೇಶನ್. ಖಾಲಿ ಮಾತಲ್ಲಿ ವ್ಯವಹಾರ ಮುಗಿಯೋಲ್ಲ. ಸ್ವಲ್ಪ ಕಷ್ಟ ಆದ್ರು ಪರ್ವಾಗಿಲ್ಲ ಒಂದ್ ಸಲ ಬಂದ್ಬಿಟ್ಹೋಗಿ. ತೀರ ಆಗೋದೆ ಇಲ್ಲಾ ಅಂತ ಹೇಳುದ್ರೆ ನಾನೆ ಬೇಕಾದ್ರು ಬರ್ತಿನಿ. |

*ಹಸ್ತಪ್ರತಿಯಲ್ಲಿ : (ಚಲನಚಿತ್ರದಿಂದ ತೆಗೆಯಲಾಗಿದೆ)*

| | | |
|---|---|---|
| ***ಕಾಟೇಶ್*** | *:* | ***ವ್ಯಾಪಾರದ ಸಮಯ, ಅಂಗಡಿ ಬಿಟ್ಟು ಬಿಟ್ಟು ಬರೋದು ಕಷ್ಟ ಆಗುತ್ತೆ.*** |
| ***ಮೂರ್ತಿ*** | *:* | ***ಈಗ್ಲೇ ಬನ್ನೀ ಅಂತ ನಾನ್ ಹೇಳ್ಲಿಲ್ಲ. ಸಂಜೆ*** |

*ನಿಧಾನವಾಗಿ ಬಂದ್ರೆ ಸಾಕು.*

| | | |
|---|---|---|
| *ಮಗಳು* | *:* | *ಏನಪ್ಪ ಅದು?* |
| *ಕಾಟೇಶ್* | *:* | *ನಮ್ಮನೆ ಬೆಳ್ಳಿ ಪಾತ್ರೆಗಳೇನಾದ್ರು ಕಳುವಾಗಿದಾವಾಮ್ಮ?* |
| *ಮಗಳು* | *:* | *ಇಲ್ವಲ್ಲ* |
| ಕಾಟೇಶ್ | : | (ಗಾಬರಿಯಿಂದ) ಬೆ.. ಬೆ.. ಬೇಡಿ.. ನನ.. ನಾನೆ ಬರ್ತಿನಿ. (ಫೋನ್ ಕಟ್ ಮಾಡುತ್ತಾನೆ) |

# ದೃಶ್ಯ 76

***ಹಗಲು – ಪೋಲೀಸ್ ಠಾಣೆಯ ಒಳಗೆ***

(ಪೋಲೀಸ್ ಠಾಣೆಯಲ್ಲಿ ಕಾಟೇಶ್ ಬೆಳ್ಳಿ ಪಾತ್ರೆಗಳನ್ನು ಪರೀಕ್ಷಿಸುತ್ತಿದ್ದಾನೆ)

ಕಾಟೇಶ್ : (ಪಾತ್ರಗಳನ್ನು ನೋಡುತ್ತಾ..)
ನಮ್ಮನೆಲ್ ಈ ಥರ ಪಾತ್ರೆಗಳೆ ಇಲ್ಲ. ಇವು ಯಾವ್ದೊ ಪುರಾತನ ಕಾಲದೋರ್ ಮನೆ ಪಾತ್ರೆ ಇದ್ದಾ್ಗ್ ಇದೆ.

ಮೂರ್ತಿ : ಮತ್ತೆ ಎಲ್ಲಾ ಪಾತ್ರೆಗಳ್ ಮೇಲು ಕಾಟೇಶ್ ಕಾಟೇಶ್ ಅಂತ ಇದ್ಯಲ್ರಿ?

ಕಾಟೇಶ್ : ಸಾರ್ ನಮ್ಮನೆ ಪಾತ್ರೆಗಳ್ ಮೇಲೆ ಕಾಟೇಶ್ ಅಂತ ಇರಲ್ಲ. ಕಾಟೇಯ್ಯ ಅಂತ ಇರುತ್ತೆ.

ಮೂರ್ತಿ : ಹಾಗಾದ್ರೆ ನೀವು ಕಾಟೇಶ್ ಅಲ್ವೊ?

ಕಾಟೇಶ್ : ನಮ್ಮಮ್ಮ ಪ್ರೀತಿಯಿಂದ ಕಾಟಯ್ಯ ಅಂತ ಹೆಸರಿಟ್ಟಿದಾರೆ. ಕಾಲಕ್ಕೆ ತಕ್ಕನಾಗಿ ರಜನೀಶ್, ಸಂತೋಷ್, ಗಿರೀಶ್ ಅಂತ ಬದಲಾಯಿಸ್ಕೊಳೊಲ್ವೆ? ಹಾಗೆ ನಾನು ಮಾಡ್ರನ್ನಾಗಿ ಕಾಟೇಶ್ ಅಂತ ಹೆಸ್ರು ಬದ್ಲಾಯಿಸ್ಕೊಂಡಿದಿನಿ.

ಮೂರ್ತಿ : ಹಾಗಾದ್ರೆ ಕಾಟೇಶ ಅವ್ರೆ ಈ ಬೆಳ್ಳಿ ಪಾತ್ರೆಗಳ್ ನಿಮ್ದಲ್ಲ.

ಕಾಟೇಶ್ : ಛೀ.. ಛೀ.. ಛೀ.. ಖಂಡಿತ ಅಲ್ಲ.

ಮೂರ್ತಿ : ಈ ಕಾಲ್‌ದಲ್ಲಿ ನಿಮ್ಮಂಥವರು ಲಕ್ಷಕ್ಕ್ ಒಬ್ರು ಸಿಗಲ್ಲ.

*ಹಸ್ತಪ್ರತಿಯಲ್ಲಿ : (ಚಲನಚಿತ್ರದಿಂದ ತೆಗೆಯಲಾಗಿದೆ)*

***ಕಾಟೇಶ್*** : ***ನಮ್ಮ ವಂಶದ ಗುಣಾನೆ ಅದೂ ಸರ್. ಕಂಡೋರ ಸಾಮಾನು ಅಂದ್ರೆ ಹೇಸಿಗೆ ಇದ್ದಹಾಗೆ. ನಂಗೆ ದೇವ್ರು ಏನು ಕಡಿಮೆ ಮಾಡಿಲ್ಲ.***

ಪೇದೆ : ಮಿ. ಕಾಟೇಶ್ ಈ ಪಾತ್ರೆಗಳು ನನ್ನದಲ್ಲ ಅಂತ ಒಂದು ಡಿಕ್ಲರೇಶನ್ ಕೊಡಿ.

ಕಾಟೇಶ್ : ನಂದಲ್ಲ ಅಂದ್ಮೇಲೆ ಈ ತರ್ಲೆಯೆಲ್ಲ ಯಾಕ್ರಿ?

ಮೂರ್ತಿ : ಇದು ಪ್ರೊಸಿಜರ್. ಮಿ.ಕಾಟೇಶ್ ನೀವು ಬಾಯ್ನಲ್ಲಿ ಅಲ್ಲ ಅಂತ ಹೇಳಿದ್ಮೇಲೆ ಬರ್ಕೊಡೋಕೇನ್ ಕಷ್ಟ? ನೀವ್ ಹಾಗ್ ಬರ್ಕೊಟ್ರೆ ನಾವು ಕಳ್ಳನ್ ಬಾಯಿಂದ ಸುಲಭವಾಗಿ

| | | |
|---|---|---|
| | | ನಿಜಾನ ಬಾಯಿ ಬಿಡಿಸ್ಬಹುದು. ಪ್ಲೀಸ್.. |
| | | (ಕಾಟೇಶ್ ಸಹಿ ಹಾಕುತ್ತಾನೆ. ಮೂರ್ತಿ ಮತ್ತು ಪೇದೆ ಇಬ್ಬರು ಕರುನಗೆ ಬೀರುತ್ತಾರೆ) |
| ಕಾಟೇಶ್ | : | ತಗೊಳ.. |
| ಮೂರ್ತಿ | : | ಥ್ಯಾಂಕ್ಯೂ ವೆರಿ ಮಚ್, ಫ್ರೆಂಡ್ ನಿಮ್ಗೆ ತುಂಬಾ ತೊಂದ್ರೆ ಕೊಟ್ಟೆ ಅಂತ ಕಾಣ್ಸುತ್ತೆ. |
| ಕಾಟೇಶ್ | : | ಪರ್ವಾಗಿಲ್ಲ. ಬರ್ತಿನಿ. (ಹೊರಡುತ್ತಾನೆ) |
| ಮೂರ್ತಿ | : | ಥ್ಯಾಂಕ್ಯೂ. (ಪೇದೆಗೆ) ಮಿ. ವಿಶ್ವನಾಥ್ |
| ವಿಶ್ವನಾಥ್ (ಪೇದೆ) | : | ಯೆಸ್ ಸರ್ |
| ಮೂರ್ತಿ | : | (ಕಾಟೇಶ್ ಸಹಿ ಮಾಡಿದ ಮತ್ತು ಆಸ್ಪತ್ರೆಯಲ್ಲಿ ಸಿಕ್ಕಿದ್ದ ಪತ್ರವೆರಡನ್ನೂ ಕೊಟ್ಟು..) |
| | | ಇದನ್ನ ಎಕ್ಸ್‌ಪರ್ಟ್ ಹತ್ರ ಕೊಟ್ಟು ಈ ಎರೆಡೂ ಹ್ಯಾಂಡ್ ರೈಟಿಂಗ್ ಒಬ್ಬಂದೇನಾ ಅಂತ ಟೆಸ್ಟ್ ಮಾಡ್ಸಿ ತಕ್ಷಣ ರಿಪೋರ್ಟ್ ತಗೊಬನ್ನಿ. |
| ವಿಶ್ವನಾಥ್ (ಪೇದೆ) | : | ಓಕೆ ಸರ್. |
| ಮೂರ್ತಿ | : | ಅರ್ಜೆಂಟ್ |
| | | (ಪೇದೆ ಹೊರಡುವನು) |

# ದೃಶ್ಯ 77

***ಹಗಲು – ಮೂರ್ತಿ ಮನೆಯ ಒಳಗೆ***

| | | |
|---|---|---|
| | | (ಫೋನ್ ರಿಂಗಣಿಸುತ್ತದೆ. ಮೂರ್ತಿ ತಾಯಿ ಫೋನ್ ತೆಗೆಯುತ್ತಾರೆ) |
| ತಾಯಿ | : | ಹಲೋ.. |
| ವಿಶ್ವನಾಥ್ (ಪೇದೆ) | : | ಸಾಹೇಬ್ರಿದಾರಮ್ಮ |
| ತಾಯಿ | : | ಹಾ ಇದಾರೆ. ಸ್ವಲ್ಪ ಇರಿ ಕರಿತಿನಿ. ಮೂರ್ತಿ.. (ಕರೆಯುತ್ತಾರೆ) |
| ಮೂರ್ತಿ | : | ಅಮ್ಮಾ |
| ತಾಯಿ | : | ಫೋನ್ ಬಂದಿದೆಪಾ. |
| ಮೂರ್ತಿ | : | ಬಂದೆ.. ಬಂದೆ.. (ಫೋನ್ ತಗೆದುಕೊಳ್ಳುತ್ತಾನೆ) .. ಹಲೋ |
| ವಿಶ್ವನಾಥ್ (ಪೇದೆ) | : | ನಾನ್ ಸರ್ ವಿಶ್ವನಾಥ್.. |
| ಮೂರ್ತಿ | : | ಹಾ ಹೇಳಿ ವಿಶ್ವನಾಥ್ |
| ವಿಶ್ವನಾಥ್ (ಪೇದೆ) | : | ಸರ್ ಫೋರೆನ್ಸಿಕ್ ರಿಪೋರ್ಟ್ ಬಂದಿದೆ ಸರ್. |
| ಮೂರ್ತಿ | : | ರಿಪೋರ್ಟ್ ಬಂದ್ಬಿಡ್ತಾ? |
| ವಿಶ್ವನಾಥ್ (ಪೇದೆ) | : | ಹೌದು ಸರ್. ಎರೆಡ್ ಹ್ಯಾಂಡ್ ರೈಟಿಂಗ್ ಒಂದೇನೆ. |
| ಮೂರ್ತಿ | : | ಒಬ್ಬಂದೇನಾ ಹ್ಯಾಂಡ್ ರೈಟಿಂಗು..!! |
| ವಿಶ್ವನಾಥ್ (ಪೇದೆ) | : | ಹೌದು ಸರ್ |
| ಮೂರ್ತಿ | : | ವರಿಗುಡ್. ಈಗ್ ಬಂದ್ಬಿಡ್ತಿನಿ. |

# ದೃಶ್ಯ 78

***ಹಗಲು – ಪೋಲೀಸ್ ಠಾಣೆಯ ಒಳಗೆ***

| | | |
|---|---|---|
| | | (ಕಾಟೇಶ್ ಗಾಬರಿಯಿಂದ ಪೋಲೀಸ್ ಠಾಣೆಗೆ ಓಡಿಬರುತ್ತಾನೆ) |
| ಕಾಟೇಶ್ | : | ಸಾರ್.. ಸಾರ್.. |
| ಮೂರ್ತಿ | : | ಯಾಕೆ.. ಯಾಕೆ.. ಮಿ. ಕಾಟೇಶ್ ಇಷ್ಟ್ ಗಾಬರಿಯಾಗಿದಿರಾ? |
| ಕಾಟೇಶ್ | : | ಅನ್ಯಾಯ ಆಗ್ಹೋಯ್ತು ಸರ್ ಅನ್ಯಾಯ ಆಗ್ಹೋಯ್ತು. ನಾನ್ ಮುಳುಗ್ಹೋದೆ. |
| ಮೂರ್ತಿ | : | ಅನ್ಯಾಯ? ಕುತ್ಕೊಳಿ, ಸಮಾಧಾನ ಮಾಡ್ಕೊಳಿಪಾ. ಪಾಫಿ ಕುಡಿತಿರಾ? |
| ಕಾಟೇಶ್ | : | ಬೇಡಿ ಸರ್ |
| ಮೂರ್ತಿ | : | ನೀರು..? |
| ಕಾಟೇಶ್ | : | ಯಾವ್ದು ಬೇಡಿ ಸರ್. |
| ಮೂರ್ತಿ | : | ಕೂತ್ಕೊಳಿ, ಸಮಾಧಾನ |
| ಕಾಟೇಶ್ | : | ಸಮಾಧಾನ, ಇನ್ನೆಲ್ಲಿ ಸಮಾಧಾನ ಸರ್. ನೆನ್ನೆ ಕಾಲೇಜ್ಗೆ ಅಂತ ಹೋದ ನನ್ನಿಬ್ರು ಹೆಣ್ಣ್ ಮಕ್ಳು ಮನೆಗೆ ಬರ್ಲಿಲ್ಲ ಸಾರ್. ಎಲ್ಲಿದಾರೊ ಏನೋ ಗೊತ್ತಿಲ್ಲ ಸಾರ್. |
| ಮೂರ್ತಿ | : | ಈ ಪ್ರದೇಶ್‌ದಲ್ಲಿ ಒಂದು ದೊಡ್ಡ ಗ್ಯಾಂಗೇ ಇದೆ. ಪ್ರಾಯಕ್ಕೆ ಬಂದಿರೋ ಹೆಣ್ಣು ಮಕ್ಳು ಸಿಕ್ಕುದ್ರೆ ಸಾಕು ಕಿಡ್ನ್ಯಾಪ್ ಮಾಡಿ ಮಾರಿ ಬಿಡ್ತಾರೆ. |
| ಕಾಟೇಶ್ | : | ಅಯ್ಯೋ ಖಂಡಿತ ಅಂಥೋರ್ ಕೈಗೆ ಸಿಕ್ಕಿಲ್ಲ ಸಾರ್. (ಮೂರ್ತಿ ಅನುಮಾನದಿಂದ ನೋಡುತ್ತಾನೆ. ಎಚ್ಚರಗೊಂಡ ಕಾಟೇಶ್ ನಾಟಕೀಯವಾಗಿ..) .. ಅಂಥೋರ್ ಕೈಗೆ ಸಿಕ್ಹಾಕೊಂಡ್ರೆ ಗತಿಯೇನ್ ಸಾರ್. |
| ಮೂರ್ತಿ | : | ನೀವ್ ಹಾಗ್ಹೇಳಿದ್ರೆ ನಾನೇನ್ ಸಾರ್ ಮಾಡ್ಲಿ. ಹೋಗ್ಲಿ ಹೆಣ್ಣ್ ಮಕ್ಳು ಫೋಟೊ ತಂದಿದಿರ? |
| ಕಾಟೇಶ್ | : | ಹ್ಞಾಂ.. (ಫೋಟೊ ಕೊಡುತ್ತಾನೆ) .. ತಗೊಳಿ ಸಾರ್.. (ಮನಸ್ಸಿನಲ್ಲೇ "ದೇವ್ರೇ ನಮಪ್ಪ.. ಕಾಪಾಡಪ್ಪ" ಎಂದು ಬೇಡಿಕೊಳ್ಳುತ್ತಾನೆ. ಇದನ್ನು ಗಮನಿಸಿದ ಮೂರ್ತಿ ಕಣ್ಣ ಸನ್ನೆಯಲ್ಲಿ ಏನು ಎಂದು ಕೇಳುತ್ತಾನೆ) .. ಸರ್ ನನ್ನ ಜೀವನ್ದಲ್ಲಿ ಇಬ್ರು ಹೆಣ್ಣ್ ಮಕ್ಳು ಬಿಟ್ರೆ ಬೇರೆ ಯಾರು ಇಲ್ಲ ಸಾರ್. ಇವ್ರಿಗೇನಾದ್ರು ಹೆಚ್ಚು ಕಡಿಮೆ |

| | | |
|---|---|---|
| | | ಆದ್ರೆ ಖಂಡಿತ ನಾನ್ ಬದುಕಿರೋಲ್ಲಾ ಸಾರ್. ಬದುಕಿರೋಲ್ಲ. (ಗೋಳಾಡುತ್ತಾನೆ) |
| ಮೂರ್ತಿ | : | ಅಳ್ಬೇಡಿ, ಅಳ್ಬೇಡಿ ಮಿ. ಕಾಟೇಶ್. ಹೆಣ್ಣು ಹೆತ್ತವರ ಸಂಕಟ ಏನೂಂತ ನಿಮಗೆ ಇವತ್ತು ಗೊತ್ತಾಗ್ತಾ ಇದೆ. ನಂಗೆ ಯಾವತ್ತೋ ಗೊತ್ತು. ಇನ್ನು ಜವಾಬ್ದಾರಿ ನನಗೆ ವಹಿಸಿ ನೀವು ನಿಶ್ಚಿಂತೆಯಿಂದ ಇರಿ. ಹೋಗ್ಬನ್ನಿ. |
| ಕಾಟೇಶ್ | : | ಸಾರ್.. (ಮೂರ್ತಿಯ ಕೈ ಹಿಡಿದುಕೊಂಡು) .. ಇದು ನಿಮ್ ಕೈಯಲ್ಲ ಸಾರ್ ಕಾಲು ಅನ್ಕೊಳಿ ಸಾರ್. ದಯವಿಟ್ಟು ಹುಡುಕ್ಸ್‌ಕೊಡಿ ಸಾರ್. |
| ಮೂರ್ತಿ | : | ನೋ ವರಿ. |

# ದೃಶ್ಯ 79

*ರಾತ್ರಿ – ಕಾಟೇಶ್ ಮನೆಯ ಒಳಗೆ*

*ಹಸ್ತಪ್ರತಿಯಲ್ಲಿ : (ಚಲನಚಿತ್ರದಿಂದ ತೆಗೆಯಲಾಗಿದೆ)*

| | | |
|---|---|---|
| | | *(ಫೋನ್ ರಿಂಗಣಿಸುತ್ತದೆ. ಮನೆ ಕೆಲಸದವನು ತಗೆದುಕೊಂಡು ಮಾತನಾಡುವನು)* |
| *ಜವಾನ* | : | *ಹಲೋ..* |
| *ಮೂರ್ತಿ* | : | *ಹಲೋ, ಪೋಲೀಸ್ ಸ್ಟೇಷನ್‌ನಿಂದ ಫೋನ್ ಮಾಡ್ತಾ ಇರೋದು. ಅರ್ಜೆಂಟಾಗಿ ಕಾಟೇಶ್ ಅವರ್ಹತ್ರ ಮಾತಾಡ್ಬೇಕಿತ್ತಲ್ಲ.* |
| *ಜವಾನ* | : | *ಯಜಮಾನ್ರು ಮನೇಲಿಲ್ಲ.* |
| *ಮೂರ್ತಿ* | : | *ಅರ್ಜೆಂಟ್ ನೋಡ್ಬೇಕಲ್ಲಯ್ಯ* |
| *ಜವಾನ* | : | *ಅರ್ಜೆಂಟ್ ನೋಡ್ಬೇಕು ಅಂದ್ರೆ ಹೆಂಗಾಗುತ್ತೆ ಬುದ್ಧಿ. ಅದೇನಿದ್ಯೋ ನಂಗ್ಹೇಳಿ, ನಾನ್ ಹೇಳ್ತಿನಿ ಅವ್ರಿಗೆ.* |
| *ಮೂರ್ತಿ* | : | *ಹಾಗೆಲ್ಲ ಹೇಳೋಕಾಗಲ್ಲ. ಇದು ಅವರ ಹೆಣ್ಣು ಮಕ್ಕಳ ವಿಚಾರ. ಅವರ ಹತ್ರಾನೆ ಹೇಳ್ಬೇಕು.* |
| *ಜವಾನ* | : | *ಯಾವ್ ವಿಚಾರ ಆದ್ರು ನಾನ್ ಹೇಳ್ತೀನಿ.* |
| *ಮೂರ್ತಿ* | : | *ನೀನ್ ಹ್ಯಾಗಯ್ಯ ಹೇಳ್ತಿ. ಅವ್ರೆಲ್ಲಿದ್ದಾರೇಂತ ಹೇಳು. ಅಲ್ಲಿಗೇ ಹೋಗಿ ನೋಡ್ತೀನಿ.* |
| *ಜವಾನ* | : | *ಅದೆಲ್ಲ ನಂಗೊತ್ತಿಲ್ಲ.* |
| *ಮೂರ್ತಿ* | : | *ಗೊತ್ತಿಲ್ದೆ ಇದ್ರೆ ಹಾಳಾಗು. ಅವರಿಬ್ಬರು ಹೆಣ್ಣು ಮಕ್ಳು ಅಪಾಯದಲ್ಲಿದಾರೆ. ಅರ್ಧಘಂಟೆ ತಡ ಆದ್ರೆ ಗಲ್ಫ್ ಕಂಟ್ರಿಗೆ ಪಾರ್ಸೆಲ್ ಆಗ್ಬಿಡ್ತಾರೆ. ಈಗ ಅವ್ರು ಸಿಕ್ಕದೇ ಹೋದ್ರೆ ಇನ್ನ್ಯಾವತ್ತು ನೋಡೋಕಾಗಲ್ಲ.* |
| *ಜವಾನ* | : | *ಸಾರ್. ಒಂದು ಫೋನ್ ನಂಬರ್ ಯೇಳ್ತೀನಿ ಅಲ್ಲಿರ್ತಾರೆ ಮಾತಾಡಿ.* |
| | | *(ಎಂದು ಫೋನ್ ನಂಬರ್ ಕೊಡುತ್ತಾನೆ)* |

# ದೃಶ್ಯ ೮೦

*ಹಗಲು – ಪೋಲೀಸ್ ಸ್ಟೇಷನ್‌ನ ಒಳಗೆ*

*ಹಸ್ತಪ್ರತಿಯಲ್ಲಿ : (ಚಲನಚಿತ್ರದಿಂದ ತೆಗೆಯಲಾಗಿದೆ)*

*ಮೂರ್ತಿ : (ಪಕ್ಕದಲ್ಲಿರುವ ಪೇದೆಗೆ)*
*ಕಾನ್ಸ್ಟೆಬಲ್..*
*(ಒಂದು ನಂಬರ್ ಕೊಟ್ಟು)*
*.. ಈ ಫೋನ್ ನಂಬರ್ ಯಾವ ಅಡ್ರೆಸ್‌ನಲ್ಲಿದೇಂತ ತಿಳ್ಕೊಳಿ.*

# ದೃಶ್ಯ 81

*ಹಗಲು – ಕಾಟೇಶನ ಮನೆಯ ಒಳಗೆ*

ಕಾಟೇಶ್ : (ಎದುರಿಗೆ ನಿಂತ ನಾಲ್ಕು ಮಂದಿಗೆ..)
ಈ ದಂಧೆ ಮಾಡ್ತಾ ಇರೋದ್ ನಾವ್ ಮೂರೇ ಜನ. ವ್ಯಾಸರಾಯ, ನಾನು, ತಿಪ್ಪರಾಜು. ನನ್ನ ಹೆಣ್ಣು ಮಕ್ಕಳನ್ನ ಕಿಡ್ನ್ಯಾಪ್ ಮಾಡೋ ಧೈರ್ಯ ಯಾರ್ಗೋ ಇದೆ. ನಿಜ ಹೇಳಿ. ನಿಮ್ಮಲ್ಲೆ.. ಯಾರಾದ್ರು.. ಏನಾದ್ರು..?
(ಒಬ್ಬನಿಗೆ ಹೊಡೆಯುತ್ತಾನೆ)

ಒಬ್ಬ : ಇಲ್ಲ ಸಾರ್, ನಮ್ಮವ್ರ್ಯಾರು ಅಲ್ಲ ಸಾರ್.

ಕಾಟೇಶ್ : ನೀವಲ್ವಾ? ಮತ್ತ್ಯಾರು? ಅವರ ಕರುಳ್ನಾ ಬಗೆದುಬಿಡ್ತೀನಿ.
(ಮೂರ್ತಿ ಅಲ್ಲಿಗೆ ಬಂದು)

ಮೂರ್ತಿ : ಹ್ಹಾ ಬೇಷ್ ಬೇಷ್..
(ಹಾಗೆಂದೊಡನೆ ಕಾಟೇಶ್ ಗಾಬರಿಯಿಂದ ಗೋಡೆಗೆ ಒರಗಿ ನಿಲ್ಲುತ್ತಾನೆ. ಮೂರ್ತಿ ಚಪ್ಪಾಳೆ ಹೊಡೆಯುತ್ತಾನೆ)

ಕಾಟೇಶ್ : ಇನ್ಸ್‌ಪೆಕ್ಟ್ರ, ಇದೇನು? ತಾವು? ಇಲ್ಲಿ?

ಮೂರ್ತಿ : ತಾವೆಲ್ಲಿದ್ರೆ.. ನಾನಲ್ಲಿ.

ಕಾಟೇಶ್ : ನನ್ನ ಹೆಣ್ಣು ಮಕ್ಳ ಬಗ್ಗೆ ವಿಚಾರ್‍ಸ್ತಾ ಇದ್ದೆ.

ಮೂರ್ತಿ : ನಾನು ಅದನ್ನೇ ತಮ್ಮನ್ನ ವಿಚಾರ್‍ಸ್ಕೊಂಡ್ ಹೋಗಣಾಂತ ಬಂದಿದಿನಿ. ತಾವ್ ಏನ್ ವಿಚಾರ್‍ಸ್ತಾ ಇದ್ರಿ, ಯಾರ್‍ನ ವಿಚಾರ್‍ಸ್ತಾ ಇದ್ರಿ ಎಲ್ಲ ನನಿಗ್ ಗೊತ್ತಾಗಿದೆ. ನೀವ್ ಮೂರ್ ಜನ ಸೇರ್‍ಕೊಂಡ್ ಈ ದಂಧೆ ನಡಸ್ತಾಯಿದ್ರಿ ಅಲ್ಲಾ, ರ‍್ಯಾಸ್ಕಲ್ಸ್.
(ಎಂದು ತನ್ನ ಪಿಸ್ತೂಲ್ ತೆಗೆಯುತ್ತಾನೆ)
.. ಎಲ್ಲಿ ಆ ತಿಪ್ಪರಾಜು? ಎಲ್ಲಿ ಆ ವ್ಯಾಸರಾಯ? ಎಲ್ಲಿ ತಿಪ್ಪರಾಜು..? (ಎನ್ನುತ್ತಿದ್ದಂತೆಯೆ ರೌಡಿಗಳು ಮೂರ್ತಿ ಮೇಲೆ ಆಕ್ರಮಣ ಮಾಡುತ್ತಾರೆ. ಹೊಡೆದಾಟವಾಗುತ್ತದೆ. ನಂತರ ಮೂರ್ತಿ ಕಾಟೇಶ್‌ನನ್ನು ಜೈಲಿಗೆ ಕರೆತರುತ್ತಾನೆ)

# ದೃಶ್ಯ 82

***ಹಗಲು – ಪೋಲೀಸ್ ಠಾಣೆಯ ಒಳಗೆ***

| | | |
|---|---|---|
| | | (ಕಾಟೇಶ್‌ನನ್ನು ಜೈಲಿನಲ್ಲಿ ಕಟ್ಟಿಹಾಕಿ ಪೋಲೀಸ್ ಟ್ರೀಟ್‌ಮೆಂಟ್ ನೀಡಲಾಗುತ್ತಿದೆ) |
| ಮೂರ್ತಿ | : | ಬೊಗಳು.. ಎಲ್ಲಿದಾರೆ? |
| ಕಾಟೇಶ್ | : | ಇಲ್ಲ, ನನಿಗ್ ಗೊತ್ತಿಲ್ಲ. ನಂಗು ಇದಕ್ಕು ಸಂಬಂಧ ಇಲ್ಲ. ನಾನ್ ಇಂಥಾ ಕೆಲ್ಸ ಮಾಡ್ತಿರ್ಲಿಲ್ಲ. |
| ಮೂರ್ತಿ | : | ಮಾಡ್ತಿರ್ಲಿಲ್ಲ..? ಆನಂದಿಗೆ ನೀನ್ ಬರ್ದಿರೋ ಪತ್ರ ನಮಗೆ ಸಿಕ್ಕಿದೆ. ರೌಡಿಗಳ್ ಹತ್ರ ನೀನ್ ಮಾತಾಡಿದ್ದನ್ನ ನಾನ್ ಕೇಳ್ಸ್‌ಕೊಂಡಿದಿನಿ. ಸುಳ್ಳ್ ಬೊಗುಳ್ತಿಯಾ ಬಡವ. ಎಲ್ಲಿ ತಿಪ್ಪರಾಜು? ಎಲ್ಲಿ ವ್ಯಾಸರಾಯ? ಬೊಗಳು ಎಲ್ಲಿದಾನೆ ಅಂತ ಬೊಗಳು. ಬೊಗಳು.. ಬೊಗಳು. (ಕಪಾಳಕ್ಕೆ ಹೊಡೆಯುತ್ತಾನೆ) |
| ಕಾಟೇಶ್ | : | ಹೇಳ್ತಿನಿ.. ಹೇಳ್ತಿನಿ.. ನನ್ ಹೆಣ್ಣು ಮಕ್ಳನ್ನ ಹುಡುಕಿ ಕೊಟ್ಬಿಡಿ ಹೇಳ್ತಿನಿ. |
| ಮೂರ್ತಿ | : | ಹೇಯ್ ನಿನ್ನ ಹೆಣ್ಣು ಮಕ್ಳು ನನ್ ಹತ್ರಾನೆ ಇದಾರೆ ಕಣೋ. ನಾನೆ ಅವ್ರುಗಳ್ನ ಕರ್ಕೊಂಡ್ ಹೋಗಿರೋದು. |
| ಕಾಟೇಶ್ | : | (ಆಶ್ಚರ್ಯದಿಂದ..) ಏನು ನನ್ನ ಹೆಣ್ಣು ಮಕ್ಳು ನಿಮ್ ಹತ್ರ ಇದಾರ? ನಿಜವಾಗ್ಲು? ಸತ್ಯವಾಗ್ಲು? |
| ಮೂರ್ತಿ | : | ಸತ್ಯವಾಗ್ಲು. ಆದ್ರೆ ಅವ್ರನ್ನ ನೋಡ್ಬೇಕು ಅನ್ನೋ ಆಸೆ ನಿನಗಿದ್ರೆ ಆ ವ್ಯಾಸರಾಯ, ತಿಪ್ಪರಾಜು ಎಲ್ಲಿದಾರೆ ಅಂತ ಹೇಳು. |
| ಕಾಟೇಶ್ | : | ಹೇಳ್ತಿನಿ. ತಿಪ್ಪರಾಜು ಸತ್ಹೋದ. ವ್ಯಾಸರಾಯ ಹುಬ್ಬಳ್ಳೀಲಿದಾನೆ. |
| ಮೂರ್ತಿ | : | ಎಲ್ಲಿ? |
| ಕಾಟೇಶ್ | : | ಹುಬ್ಬಳ್ಳಿಲಿ, ಈಗ್ಲಾದ್ರು ನನ್ನ ಮಕ್ಳು ಮುಖ ತೋರ್ಸಿ. (ಅಂಗಲಾಚುತ್ತಾನೆ) |
| ಮೂರ್ತಿ | : | (ಪೇದೆಗೆ..) ಅವನ ಮಕ್ಳನ್ನ ಕರ್ಕೊಂಡ್ ಬಂದು ತೋರ್ಸು. (ಮೂರ್ತಿ ವಿಷಯ ತಿಳಿದುದರ ಬಗ್ಗೆ ಅಲ್ಲೆ ಯೋಚಿಸುತ್ತ ನಿಲ್ಲುತ್ತಾನೆ) |

**ನಿರ್ದೇಶಕರ ಟಿಪ್ಪಣಿ**

**ಮೂರ್ತಿಯ ಚಾಣಾಕ್ಷತನದಿಂದ ಕಾಟಯ್ಯ ಸಿಕ್ಕಿಹಾಕಿಕೊಳ್ಳುತ್ತಾನೆ ಮತ್ತು ತನ್ನ ಹೆಣ್ಣು ಮಕ್ಕಳ ಸಲುವಾಗಿ ಸತ್ಯವನ್ನು ಬಾಯಿಬಿಡುತ್ತಾನೆ. ಮೂರ್ತಿಯ ಉಪಾಯ ಫಲಿಸುತ್ತದೆ. ಆದರೆ ಖದೀಮ ವ್ಯಾಸರಾಯನನ್ನು ಹುಬ್ಬಳ್ಳಿಯಲ್ಲಿ ಹೇಗೆ ಹುಡುಕುವುದು ಎಂದು ಚಿಂತಿತನಾಗುತ್ತಾನೆ**

# ದೃಶ್ಯ 83

***ಹಾಡು: ಹುಟ್ಟಿದರೆ ಕನ್ನಡನಾಡಲ್ ಹುಟ್ಟಬೇಕು***

ಏಹೇ.. ಬಾಜು.. ಲಾಲ ಟಕಟಕಟ.. ಲಾಲ ಟಕಟಕಟ.. ಲಾಲ ಟಕಟಕಟ.. ಹೇ.. ಹೇ..
ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು..
ಮೆಟ್ಟಿದರೆ ಕನ್ನಡ ಮಣ್ಣಲ್ಲಿ ಮೆಟ್ಟಬೇಕು
ಬದುಕಿದು ಜಟಕ ಬಂಡಿ.. ಇದು ವಿಧಿಯೋಡಿಸುವ ಬಂಡಿ
ಬದುಕಿದು ಜಟಕ ಬಂಡಿ.. ವಿಧಿ ಅಲೆದಾಡಿಸುವ ಬಂಡಿ
ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು..
ಮೆಟ್ಟಿದರೆ ಕನ್ನಡ ಮಣ್ಣಲ್ಲಿ ಮೆಟ್ಟಬೇಕು

ಕಾಶೀಲಿ ಸ್ನಾನ ಮಾಡು.. ಕಾಶ್ಮೀರ ಸುತ್ತಿ ನೋಡು..
ಜೋಗದ ಗುಂಡಿ ಒಡೆಯ ನಾನೆಂದು ಕೂಗಿ ಹಾಡು..
ಅಜಂತ ಎಲ್ಲೋರನ ಬಾಳಲ್ಲಿ ಒಮ್ಮೆ ನೋಡು..
ಬಾದಾಮಿ ಐಹೊಳೆಯ ಚೆಂದಾನ ತೂಕ ಮಾಡು..
ಕಲಿಯೋಕೆ ಕೋಟಿ ಭಾಷೆ.. ಆಡೋಕೆ ಒಂದೆ ಭಾಷೆ..
ಕನ್ನಡ.. ಕನ್ನಡ.. ಕಸ್ತೂರಿ ಕನ್ನಡ..

ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು..
ಮೆಟ್ಟಿದರೆ ಕನ್ನಡ ಮಣ್ಣಲ್ಲಿ ಮೆಟ್ಟಬೇಕು
ಬದುಕಿದು ಜಟಕ ಬಂಡಿ.. ಇದು ವಿಧಿಯೋಡಿಸುವ ಬಂಡಿ
ಬದುಕಿದು ಜಟಕ ಬಂಡಿ.. ವಿಧಿ ಗುರಿ ತೋರಿಸುವ ಬಂಡಿ

ಧ್ಯಾನಕ್ಕೆ ಭೂಮಿ ಇದು.. ಪ್ರೇಮಕ್ಕೆ ಸ್ವರ್ಗ ಇದು..
ಸ್ನೇಹಕ್ಕೆ ಶಾಲೆ ಇದು.. ಜ್ಞಾನಕ್ಕೆ ಪೀಠ ಇದು..
ಕಾವ್ಯಕ್ಕೆ ಕಲ್ಪ ಇದು.. ಶಿಲ್ಪಕ್ಕೆ ತಲ್ಪವಿದು..
ನಾಟ್ಯಕ್ಕೆ ನಾಡಿ ಇದು.. ನಾದಾಂತರಂಗವಿದು..
ಕುವೆಂಪು ಬೇಂದ್ರೆಯಿಂದ ಕಾರಂತ ಮಾಸ್ತಿಯಿಂದ
ಧನ್ಯವೀ ಕನ್ನಡ.. ಗೋಕಾಕಿನ ಕನ್ನಡ..
ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು..
ಮೆಟ್ಟಿದರೆ ಕನ್ನಡ ಮಣ್ಣಲ್ಲಿ ಮೆಟ್ಟಬೇಕು
ಬದುಕಿದು ಜಟಕ ಬಂಡಿ.. ಇದು ವಿಧಿಯೋಡಿಸುವ ಬಂಡಿ
ಬದುಕಿದು ಜಟಕ ಬಂಡಿ.. ವಿಧಿ ದಡ ಸೇರಿಸುವ ಬಂಡಿ

ಬಾಳಿನ ಬೆನ್ನು ಹತ್ತಿ ನೂರಾರು ಊರು ಸುತ್ತಿ
ಏನೇನೊ ಕಂಡ ಮೇಲೂ ನಮ್ಮೂರೆ ನಮಗೆ ಮೇಲು..
ಕೈಲಾಸಂ ಕಂಡ ನಮಗೆ ಕೈಲಾಸ ಯಾಕೆ ಬೇಕು..
ದಾಸರ ಕಂಡ ನಮಗೆ ವೈಕುಂಠ ಯಾಕೆ ಬೇಕು..
ಮುಂದಿನ ನನ್ನ ಜನ್ಮ ಬರೆದಿಟ್ಟನಂತೆ ಬ್ರಹ್ಮ
ಇಲ್ಲಿಯೇ ಇಲ್ಲಿಯೇ.. ಎಂದಿಗೂ ನಾನಿಲ್ಲಿಯೇ..

ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು..
ಮೆಟ್ಟಿದರೆ ಕನ್ನಡ ಮಣ್ಣಲ್ಲಿ ಮೆಟ್ಟಬೇಕು
ಬದುಕಿದು ಜಟಕ ಬಂಡಿ.. ಇದು ವಿಧಿಯೋಡಿಸುವ ಬಂಡಿ
ಬದುಕಿದು ಜಟಕ ಬಂಡಿ.. ವಿಧಿ ದಡ ಸೇರಿಸುವ ಬಂಡಿ

**ಗಾಯನ: ಡಾ. ರಾಜ್‌ಕುಮಾರ್**
**ರಚನೆ ಮತ್ತು ಸಂಗೀತ: ಹಂಸಲೇಖ**

(ಹಾಡಿನ ಮುಕ್ತಾಯದ ನಂತರ ಮೂರ್ತಿಗೆ, ಒಂದು ಮೂಲೆಯ ಗುಂಪಿನಲ್ಲಿ ವ್ಯಾಸರಾಯನನ್ನು ಕಂಡಂತೆ ಭಾಸವಾಗಿ ಅವನನ್ನು ಹುಡುಕತೊಡಗುತ್ತಾನೆ. ಆ ವ್ಯಕ್ತಿ ಕಾಣದಂತೆ ಮಾಯವಾಗುತ್ತಾನೆ. ಅವನ ಜೊತೆ ಮಾತನಾಡುತ್ತ ಇದ್ದ ಮಹಿಳೆಯರೂ ಮೂರ್ತಿ ನೋಡುತ್ತಿರುವುದನ್ನು ಗಮನಿಸಿ ಪಲಾಯನ ಮಾಡುತ್ತಾರೆ)

**[ಸಾಮಾನ್ಯವಾಗಿ ಚಲನಚಿತ್ರ ಗೀತೆಗಳು ನಾಲ್ಕರಿಂದ ಐದು ನಿಮಿಷಗಳಷ್ಟು ಉದ್ದವಿರುತ್ತದೆ ಹಾಗು ಈ ಹಾಡುಗಳಲ್ಲಿ ಒಂದು ಪಲ್ಲವಿ ಮತ್ತು ಎರಡು ಚರಣಗಳಿರುತ್ತವೆ. ಅಪರೂಪಕ್ಕೆಬಂತೆ ಈ ಹಾಡಿನಲ್ಲಿ ಒಂದು ಪಲ್ಲವಿ ಹಾಗು ಮೂರು ಚರಣಗಳಿವೆ. ಕನ್ನಡ ನಾಡು, ನುಡಿಯ ಮಹತ್ವವನ್ನು ಸಾರಲು ಸಂಗೀತ ನಿರ್ದೇಶಕ ಹಂಸಲೇಖರವರು ಹಾಡಿನಲ್ಲಿ ಬಿ.ಜಿ.ಎಂ (ವಾದ್ಯಸಂಗೀತ) ಅನ್ನು ಚುಟುಕುಗೊಳಿಸಿ ಸಾಹಿತ್ಯವನ್ನು ಹೆಚ್ಚಿಸಿ ಅಷ್ಟೇ ಅವಧಿಯಲ್ಲಿ ಬಹಳ ಸಮಂಜಸವಾಗಿ ಹಾಗು ಸೊಗಸಾಗಿ ಹಾಡನ್ನು ಕಟ್ಟಿಕೊಟ್ಟಿದ್ದಾರೆ]**

**ನಿರ್ದೇಶಕರ ಟಿಪ್ಪಣಿ:**

ಈ ಹಾಡಿನ ಪರಿಕಲ್ಪನೆಯನ್ನು ವರದಣ್ಣ ಬೇಕೆಂದಾಗ ನನಗೆ ಕ್ಲೈಮಾಕ್ಸ್‌ಗೆ ಹತ್ತಿರವಿರುವ ಸಮಯದಲ್ಲಿ ಹಾಡು ಆ ಓಟವನ್ನು ಕುಂಠಿತಗೊಳಿಸಬಹುದು ಎಂಬ ಭಯವಿತ್ತು. ಆದರೆ ವರದಣ್ಣದವರು ತಮ್ಮ ಅನುಭವದ ದೂರದೃಷ್ಟಿಯಲ್ಲಿ ಹೇಗೆ ಪ್ರೇಕ್ಷಕರನ್ನು ಚಿತ್ರಕಥೆಯಲ್ಲಿ ಖುಷಿಪಡಿಸಿ, ದಾರಿತಪ್ಪಿಸಿ ಮತ್ತೆ ಹಿಡಿದಿಡಲು ಸಾಧ್ಯ ಎಂದು ವಿವರಿಸಿದರು. ನಂತರ ಯಾವ ರೀತಿಯ ಹಾಡಾಗಬೇಕು ಎಂಬ ಚರ್ಚೆಯಲ್ಲಿ ಇಡೀ ಚಿತ್ರದಲ್ಲಿದ್ದ ಉಳಿದ ಹಾಡುಗಳನ್ನು ಗಮನಿಸಿ ಮೂರ್ತಿ ಪಾತ್ರ ಅನ್ವೇಷಣೆಗೆ ಹೋಗುವ ಹುಬ್ಬಳ್ಳಿಯ ಜಾಗವನ್ನು ಬಳಸಿಕೊಂಡು ಹಾಗೂ ಬಹಳ ದಿನಗಳ ನಂತರ ಡಾ.ರಾಜ್‌ರವರು ಕನ್ನಡದ ಭಾಷೆ, ನೆಲ, ಜಲ, ಕವಿಕೋವಿದರ ಬಗ್ಗೆ ಹಾಡಿಲ್ಲದಿದ್ದರಿಂದ ಆ ರೀತಿಯ ಸಾಹಿತ್ಯವನ್ನು ಬಳಸುವುದು ಎಂದಾಯಿತು. ಹಂಸಲೇಖರಿಗೆ ಈ ಸವಾಲನ್ನು ಒಡ್ಡಲಾಯಿತು. ಅವರು ಬಹಳ ಸಮರ್ಥವಾಗಿ ನಿಭಾಯಿಸಿರುವುದು ಇಂದು ಇತಿಹಾಸ.

ಕನ್ನಡನಾಡಿನ ಅಘೋಷಿತ ನಾಡಗೀತೆಯಾಗಿ "ಹುಟ್ಟಿದರೆ ಕನ್ನಡನಾಡಲ್ ಹುಟ್ಟಬೇಕು" ಗೀತೆ ಇಂದಿಗೂ ಜನಜನಿತ. ಹುಬ್ಬಳ್ಳಿಯ ರಾಣಿ ಚೆನ್ನಮ್ಮ ವೃತ್ತದಿಂದ ಸಿದ್ಧಾರೂಢ ಆಶ್ರಮದವರೆಗೆ ಲಕ್ಷಾಂತರ ಅಭಿಮಾನಿ ದೇವರುಗಳ ಸಮ್ಮುಖದಲ್ಲಿ ನಡೆದ ಈ ಹಾಡಿನ ಚಿತ್ರೀಕರಣ ಒಂದು ಅವಿಸ್ಮರಣೀಯ ಸಿನಿಮಾ ದಾಖಲೆ.

# ದೃಶ್ಯ 84

*ಹಗಲು – ಹುಬ್ಬಳಿಯ ರಸ್ತೆ*

*ಹಸ್ತಪ್ರತಿಯಲ್ಲಿ : (ಚಲನಚಿತ್ರದಿಂದ ತೆಗೆಯಲಾಗಿದೆ)*

*(ಚಲಿಸುತ್ತಿರುವ ಟಾಂಗಾ ಗಾಡಿಗಳು. ಒಂದು ಟಾಂಗಾ ಗಾಡಿಯಲ್ಲಿ ಸುಂದರಿಯರು ಕುಳಿತಿದ್ದಾರೆ. ಮತ್ತೊಂದು ಟಾಂಗಾ ಅದನ್ನು ಹಿಂಬಾಲಿಸುತ್ತಿದೆ. ಅದರಲ್ಲಿ ಮೂರ್ತಿ ಮುಸ್ಲಿಂ ವೇಷಧಾರಿಯಾಗಿ ಕುಳಿತಿದ್ದಾನೆ. ಮುಂದಿನ ಟಾಂಗಾ ಹಳೆಯ ಕಾಲದ ಮನೆಯ ಮುಂದೆ ಬಂದು ನಿಲ್ಲುತ್ತದೆ.)*

# ದೃಶ್ಯ 85

*ಹಗಲು – ವೇಶ್ಯಾಗೃಹದ ಒಳಗೆ*

(ಇಬ್ಬರು ಮಹಿಳೆಯರು ವೇಶ್ಯಾಗ್ರಹಕ್ಕೆ ಬರುತ್ತಾರೆ. ಆಗ ಅವರ ಯಜಮಾನಿ)

ಯಜಮಾನಿ : ಆಹಹಾ ಈಗ ಬರ್ತಿದಿರೇನು ಡ್ಯೂಟಿಗೆ, ಹೋಗ್ರೇ ಮ್ಯಾಗ್ ಕಾಯ್ತಾವ್ರೆ.
(ಇಬ್ಬರೂ ಒಂದೊಂದು ದಿಕ್ಕಿಗೆ ಚಲಿಸುವರು. ಮೂರ್ತಿ ಮುಸ್ಲಿಂ ವೇಷಧಾರಿಯಾಗಿ ಅಲ್ಲಿಗೆ ಬಂದು ಅಲ್ಲಿನ ಸನ್ನಿವೇಷವನ್ನು ನೋಡುತ್ತಾನೆ)

ಒಬ್ಬಾಕೆ : (ಮೂರ್ತಿಯನ್ನು ನೋಡಿ) ಮ್ಯಾಲ್ ಬರ್ರಿ ಸಾಹೇಬ್ರಾ..
(ಮೂರ್ತಿ ಮುಖ್ಯಸ್ಥೆಯ ಹತ್ತಿರ ಬರುತ್ತಾನೆ. ಅಷ್ಟರಲ್ಲಿ ಒಬ್ಬಾಕೆ ಒಬ್ಬ ವ್ಯಕ್ತಿಯನ್ನು ಅಟ್ಟಿಸಿಕೊಂಡು ಬಂದು ದುಡ್ಡಿಗಾಗಿ ಬಯ್ಯುತ್ತಾಳೆ. ಇದನ್ನು ಮೂರ್ತಿ ಗಮನಿಸುತ್ತಾನೆ. ಮುಖ್ಯಸ್ಥೆ ಮೂರ್ತಿಯ ಹತ್ತಿರ ಹತ್ತಿರ ಬರುತ್ತಿರುತ್ತಾಳೆ ಅವಳನ್ನು ತಡೆದು..)

ಮೂರ್ತಿ : ಊಪರ್ ಕೌನ್ ಹೈ?

ಯಜಮಾನಿ : ಯಾಕೆ ನಾನ್ ಬ್ಯಾಡ್ವಾ?

ಮೂರ್ತಿ : (ಕೋಪದಿಂದ) ಕೌನ್ ಹೈ ಊಪರ್..?

ಯಜಮಾನಿ : ಜಾಕೆ ದೇಖೊ..
(ಅವಳೂ ಕೋಪದಿಂದ ಹೇಳುತ್ತಾಳೆ. ಮೂರ್ತಿ ಮೇಲೆ ಬರುತ್ತಾನೆ, ಬಂದು ಅಲ್ಲಿ ನಡೆಯುತ್ತಿರುವ ನೃತ್ಯ ಕಾರ್ಯಕ್ರಮವನ್ನು ನೋಡಿ, ಅಲ್ಲಿದ್ದ ಒಬ್ಬನಿಗೆ)

ಮೂರ್ತಿ : ಇದಕ್ಕೆಲ್ಲ ಯಜಮಾನ ಯಾರು?

ಮುಖ್ಯಸ್ಥ : ನಾನೆ ಇರ್ಬಹುದು. ಏನ್ ಬೇಕ್ ನಿಂಗೆ
.. ಏನು? ಏನಯ್ಯ ಬೇಕ್ ನಿಂಗೆ?
(ಮೂರ್ತಿ ಅವನಿಗೆ ಜಾಡಿಸಿ ಒದೆಯುತ್ತಾನೆ)

ಮೂರ್ತಿ : (ಮುಖ್ಯಸ್ಥನಿಗೆ) ಎಲ್ಲಿ ವ್ಯಾಸರಾಯ?

ಮುಖ್ಯಸ್ಥ : ಯಾವ್ ವ್ಯಾಸರಾಯ?
(ಎಂದಾಗ ಮೂರ್ತಿ ಅವನಿಗೆ ಮತ್ತೆ ಹೊಡೆಯುತ್ತಾನೆ)

ಮೂರ್ತಿ : (ಅಲ್ಲೆ ಕಿಟಕಿಗೆ ಹಾಕಿದ್ದ ವೇಲನ್ನ ಆತನ ಕೊರಳಿಗೆ ಸುತ್ತಿ) ..ಏನ್ ನಿನ್ ಹೆಸ್ರು?

ಮುಖ್ಯಸ್ಥ : ವೈಕುಂಠಯ್ಯ

ಮೂರ್ತಿ : ವ್ಯಾಸರಾಯ ಗೊತ್ತಿಲ್ಲ ನಿಂಗೆ?

ಮುಖ್ಯಸ್ಥ : ಗೊತ್ತಿಲ್ಲ.

ಮೂರ್ತಿ : ಗೊತ್ತಿಲ್ಲ.. (ಪ್ರಶ್ನಾರ್ಥಕವಾಗಿ ಕೇಳುತ್ತಾನೆ)
.. ಗೊತ್ತಿಲ್ಲ?
(ವೇಲನ್ನ ಕೊರಳಿಗೆ ಬಿಗಿಯಾಗಿ ಸುತ್ತುತ್ತಾನೆ)

ಮುಖ್ಯಸ್ಥ : ಗೊತ್ತು.. ಗೊತ್ತು..

ಮೂರ್ತಿ : ಎಲ್ಲಿ?

ಮುಖ್ಯಸ್ಥ : ಈಗ್ತಾನೆ ಬೆಂಗ್ಳೂರ್ಗೆ ಹೋಗ್ಬೇಕಂತ ರೈಲಿಗ್ ಹೋದ.

ಮೂರ್ತಿ : ಎಷ್ಟು ಘಂಟೆ ರೈಲಿಗೆ?

ಮುಖ್ಯಸ್ಥ : ಆರೂ ಮೂವತ್ತು..

## ದೃಶ್ಯ 86

*ಹಗಲು – ರಸ್ತೆ*

(ರೈಲನ್ನು ಹಿಂಬಾಲಿಸಿಕೊಂಡು ಮೂರ್ತಿ ಜೀಪನ್ನ ಓಡಿಸಿಕೊಂಡು ಬರುತ್ತಿದ್ದಾನೆ.)

## ದೃಶ್ಯ 87

*ರಾತ್ರಿ – ರೈಲು ನಿಲ್ದಾಣ (ಚಲಗೇರಿ ಸ್ಟೇಷನ್)*

(‘ಚಲಗೇರಿ’ ಎನ್ನುವ ನಿಲ್ದಾಣದಲ್ಲಿ ರೈಲು ನಿಲ್ಲುತ್ತದೆ. ಮೂರ್ತಿ ರೈಲನ್ನು ಹತ್ತಿಕೊಳ್ಳುತ್ತಾನೆ. ಹತ್ತಿಬಂದು ರೈಲಿನಲ್ಲಿ ಮಲಗಿರುವ, ಕುಳಿತಿರುವ ಪ್ರಯಾಣಿಕರನ್ನು ವ್ಯಾಸರಾಯನಿಗಾಗಿ ಪರಿಶೀಲಿಸುತ್ತಾನೆ. ಹಲವು ಬೋಗಿಗಳನ್ನು ಹುಡುಕಿ ಎಲ್ಲಿಯೂ ಸಿಗದಿದ್ದಾಗ ಮೂರ್ತಿ ಯೋಚಿಸುತ್ತ ಒಂದು ಆಸನದ ಮೇಲೆ ಕುಳಿತುಕೊಳ್ಳುತ್ತಾನೆ)

# ದೃಶ್ಯ ೮೮

***ರಾತ್ರಿ– ರೈಲು ಬೋಗಿಯ ಒಳಗೆ ಮತ್ತು ಹೊರಗೆ***




(ರೈಲು ಒಂದೆಡೆ ನಿಲ್ಲುತ್ತದೆ. ತಕ್ಷಣ ಒಂದು ಧ್ವನಿ..)

ಧ್ವನಿ : ಹಿಡಿರಿ, ಹಿಡಿರಿ.

(ಮೂರ್ತಿ ಹೊರಗೆ ಬಂದು ನೋಡುತ್ತಾನೆ. ಒಬ್ಬ ಹುಡುಗಿಯನ್ನು ನಾಲ್ಕು ಮಂದಿ ಅಟ್ಟಿಸಿಕೊಂಡು ಹೋಗುತ್ತಿರುವುದು ಕಾಣಿಸಿ ಅವರನ್ನು ಹಿಂಬಾಲಿಸುತ್ತಾನೆ)

.. ಬಿಡ್ಬೇಡಿ, ಹಿಡಿರಿ..

(ಅಟ್ಟಿಸಿಕೊಂಡು ಹೋಗುತ್ತಿರುವವರಿಗಿಂತ ಮುಂಚೆ ಮೂರ್ತಿ ಹೋಗಿ ಆ ಹುಡುಗಿಯನ್ನು ಹಿಡಿಯುತ್ತಾನೆ)

ಇಂದಿರಾ : ಬಿಡು.. ಬಿಡು..

.. ನನ್ನ ಬಿಡು, ಬಿಟ್ಬಿಡು ನನ್ನ..

(ಬಿಡಿಸಿಕೊಂಡು ಚಾಕುವನ್ನು ಬೀಸುತ್ತಾಳೆ. ಮೂರ್ತಿ ತಪ್ಪಿಸಿಕೊಂಡು ನಂತರ ಆಕೆ ಇಂದಿರಾ ಎಂದು ತಿಳಿದು ಅವಳ ಹತ್ತಿರ ಹೋಗುತ್ತಾನೆ)

.. ಬೇಡ, ಹತ್ರ ಬರ್ಬೇಡ. ದೂರ ನಿಂತ್ಕೊ. ಒಂದ ಹೆಜ್ಜೆ ಮುಂದಿಟ್ರು ನಿನ್ನ ಬಗೆದ್ಬಿಡ್ತೀನಿ.

(ಮೂರ್ತಿ ಮುಂದೆ ಬರುತ್ತಲೇ ಇರುತ್ತಾನೆ.)

.. ನನ್ನ ಹತ್ರ ಬರ್ಬೇಡ. ನನ್ನ ಮಾತ್ಕೇಳು. ನನ್ನ ಹತ್ರ ಬರ್ಬೇಡ..

(ಮೂರ್ತಿ ಇಂದಿರಾಳನ್ನು ತಬ್ಬಿ ಹಿಡಿಯುತ್ತಾನೆ.)
.. ಬಿಡೋ ನನ್ನ.. ಬಿಡೋ..
(ಮೂರ್ತಿ ಅವಳನ್ನು ಬಿಗಿಯಾಗಿ ಹಿಡಿದು)

ಮೂರ್ತಿ : ನನ್ನ ಜ್ಞಾಪಕ ಇಲ್ಲ ನಿನಗೆ?
(ಇಂದಿರಾ ನೋಡುತ್ತಲೇ ಇರುತ್ತಾಳೆ)
.. ನನ್ನ ನೋಡಿದ್ ನೆನಪಿಲ್ಲ ನಿನಗೆ? ನೋಡು, ನನ್ನ ಕಣ್ಣಲ್ಲಿ ಕಣ್ಣಟ್ಟು ನೋಡು.. ಚೆನ್ನಾಗ್ ನೋಡು. ನಾನ್ ಮೂರ್ತಿ..
(ಇಂದಿರಾಳಿಗೆ ಹಳೆಯದೆಲ್ಲ ನೆನಪಾಗುತ್ತದೆ)

ಇಂದಿರಾ : (ಸಂತೋಷಗೊಂಡು)
ಮೂರ್ತಿ.. ಮೂರ್ತಿ..
(ಎಂದು ಕೆಳಗೆ ಕೂರುತ್ತಾಳೆ. ಮೂರ್ತಿ ಅವಳನ್ನು ಎಬ್ಬಿಸಿ)

ಮೂರ್ತಿ : ಇಂದಿರಾ, ನೀನಿಲ್ಲಿಗೆ ಹ್ಯಾಗ್ ಬಂದೆ? ಎಲ್ಲಿಂದ ಬಂದೆ? ನಿನ್ನನ್ನ ಅಟ್ಟಿಸ್ಕೊಂಡ್ ಬಂದ್ರಲ್ಲ ಅವ್ರ್ಯಾರು? ಜೀವಮಾನದಲ್ಲಿ ನಾನು ನಿನ್ನನ್ನ ಮತ್ತೆ ನೋಡ್ತಿನಿ ಅನ್ಕೊಂಡಿರ್ಲಿಲ್ಲ. ಇದು ಹ್ಯಾಗೆ?

ಇಂದಿರಾ : ನಾನು ಅಮ್ಮನ್ನ ನೋಡ್ಬೇಕು ಅಂತಾನೆ ಇಷ್ಟು ದಿವಸ ಬದುಕಿದ್ದು. ನಿಮ್ಮ ಧ್ವನಿ ಕೇಳ್ಬೇಕು ಅಂತಾನೆ ಹಾತೊರಿತಿದ್ದದ್ದು. ನಿಮ್ಮನ್ನ ಸೇರ್ಬೇಕು ಅಂತಾನೆ ಕೊಲೆಗಳನ್ನ ಮಾಡಿ, ನನ್ನ ಶೀಲ ಉಳ್ಸ್ಕೊಂಡು ಓಡ್ ಬಂದಿದ್ದು.
(ಎಂದು ಬಿಕ್ಕಳಿಸಿ ಅಳುತ್ತಾಳೆ)
.. ಆವತ್ತು ಆ ಪಾಪಿ ನನ್ನನ್ನ ಎಳ್ಕೊಂಡ್ಹೋಗಿ..

**(ಆಕೆಯ ಫ್ಲ್ಯಾಷ್ ಬ್ಯಾಕ್..)**

(ಇಂದಿರಾಳನ್ನು ಒಂದು ಕೋಣೆಯಲ್ಲಿ ಕೂಡಿಹಾಕಿ, ವ್ಯಾಸರಾಯ ಒಬ್ಬ ವ್ಯಕ್ತಿಯನ್ನು ತಂದು ಅಲ್ಲಿಗೆ ಬಿಡುತ್ತಾನೆ. ಅವಳನ್ನು ಅನುಭವಿಸಲು ಬರುವ ಆತನನ್ನು ಇಂದಿರಾ ಕೊಲೆಮಾಡಿ ಅಲ್ಲಿಂದ ತಪ್ಪಿಸಿಕೊಳ್ಳುತ್ತಾಳೆ. ಸಲ್ಪ ಸಮಯದ ನಂತರ ಅಲ್ಲಿಗೆ ಬರುವ ವ್ಯಾಸರಾಯ ಅಲ್ಲಿ ಬಿದ್ದಿರುವ ಹೆಣವನ್ನು ನೋಡಿ ದಿಗ್ಭ್ರಮೆಗೊಳ್ಳುತ್ತಾನೆ)

**(ಫ್ಲ್ಯಾಷ್ ಬ್ಯಾಕ್ ಮುಗಿಯುತ್ತದೆ)**

ಇಂದಿರಾ : ಆವತ್ತು ಅಲ್ಲಿಂದ ತಪ್ಪಿಸ್ಕೊಂಡ್ಹೋಡ್ದೆ. ಹೊಟ್ಟೆ ಪಾಡಿಗೋಸ್ಕರ ಏನೇನೋ ಕಷ್ಟಪಟ್ಟು ಕೆಲಸಮಾಡ್ದೆ. ಮಾನ ಮುಕ್ಕಾಗದ ಹಾಗೆ ಬದುಕ್ತಾ, ವಾರಗಳನ್ನ, ವರ್ಷಗಳನ್ನ ಕಳೆದೆ. ಆದ್ರೆ ಎಲ್ಲ್ಹೋದ್ರು ಬೇತಾಳದ ಹಾಗೆ ಆ ವ್ಯಾಸರಾಯ, ನನ್ನ ಹಿಂದೆ ಹಿಂದೆನೆ ಇದ್ದ.

**(ಮತ್ತೊಂದು ಪ್ಲ್ಯಾಷ್ ಬ್ಯಾಕ್)**

(ರೈಲು ಬೋಗಿಯಲ್ಲಿ ವ್ಯಾಸರಾಯ ಮತ್ತು ಅವನ ಸಂಗಡಿಗ ಬಂದು ಕೂರುತ್ತಾರೆ. ಎದುರಿಗೆ ಮುಸ್ಲಿಂ ಬುರ್ಖಾ ಧರಿಸಿ ಕುಳಿತಿರುವ ಇಂದಿರಾ ವ್ಯಾಸರಾಯನನ್ನು ಕಂಡು ಹೆದರಿ ಶೌಚಾಲಯದಲ್ಲಿ ಅಡಗುತ್ತಾಳೆ. ವ್ಯಾಸರಾಯನ ಹಿಂಬಾಲಕ ಅವಳನ್ನು ಹಿಂಬಾಲಿಸುತ್ತಾನೆ. ಇಂದಿರಾ ಅವನನ್ನು ಎಳೆದು ಶೌಚಾಲಯದಲ್ಲಿ ಚಾಕುವಿನಿಂದ ಇರಿದು ನಂತರ ರೈಲನ್ನು ಇಳಿದು ಓಡುತ್ತಾಳೆ)

**(ಫ್ಲ್ಯಾಷ್‌ಬ್ಯಾಕ್ ಮುಗಿಯುತ್ತದೆ)**

ಇಂದಿರಾ : ಓಡ್ತಾ ಇದ್ದೆ ಓಡ್ತಾ ಇದ್ದೆ. ಹಗಲೆನ್ನದೆ, ರಾತ್ರಿಯೆನ್ನದೆ, ಹತ್ರಬಂದೋರ್ನೆಲ್ಲ ಅನುಮಾನಿಸ್ತಾ, ಹೇಗಾದ್ರು ಬದುಕ್ಬೇಕು ಅನ್ನೋ ಆಸೆಯಿಂದ ಓಡ್ತಾನೆ ಇದ್ದೆ. ಇದುವರೆಗು ಬದುಕಿದ್ದಕ್ಕೆ ಇವತ್ತು ನನ್ನ ಜನ್ಮ ಸಾರ್ಥಕವಾಯ್ತು. ಇನ್ನು ನಾನ್ ಸತ್ರು ಪರ್ವಾಗಿಲ್ಲ. ತೃಪ್ತಿಯಿಂದ ಪ್ರಾಣ ಬಿಡ್ತೀನಿ ತೃಪ್ತಿಯಿಂದ ಪ್ರಾಣ ಬಿಡ್ತೀನಿ.
(ಎಂದು ಮೂರ್ತಿಯ ಕೈ ಹಿಡಿದುಕೊಳ್ಳುತ್ತಾಳೆ. ಮೂರ್ತಿ ಅವಳ ಕೈಯನ್ನು ಹಿಡಿದುಕೊಳ್ಳುತ್ತಾನೆ. ಅಷ್ಟರಲ್ಲಿ ವ್ಯಾಸರಾಯ ಬರುತ್ತಾನೆ)

ವ್ಯಾಸರಾಯ : ಮಲ್ಲೆ ಮಲ್ಲಿಗೆ ಜಾಜಿ ಬಳ್ಳಿಗಳೆಲ್ಲವೂ..
ಮಲ್ಲೆ ಮಲ್ಲಿಗೆ ಜಾಜಿ.. ಫುಲ್ಲಾ ಪುಷ್ಪವ ಚೆಲ್ಲಿರೇ. ವಾ.. ವಾ.. ವಾ.. ಪ್ರಪಂಚ ಗುಂಡಗಿದೆ ಅಂತ ಇವತ್ ಗೊತ್ತಾಯ್ತು. ಎಲ್ಲಿ ಎಲ್ಲಿ ಹೋದ್ರು ಮತ್ತೆ ಹೀಗೆ ಸೇರ್ಬೇಕಾ? ಏನ್ ಮೂರ್ತಿ ರಾಯರೆ, ಪ್ರತಿಸಲ ನಿಮ್ಮಿಬ್ರನ್ನ ಬೇರೆ ಮಾಡೊ ಪಾಪ ನಾನೆ

ಕಟ್ಕೋಬೇಕಾ?

ಮೂರ್ತಿ : ಇಷ್ಟು ದಿವ್ಸ ಹುಡುಕ್ತಾ ಇದ್ದ ಮಿಕ, ತಾನಾಗೇ ಸಿಕ್ಹಾಕ್ಕೋ ಬೇಕಾ?

ವ್ಯಾಸರಾಯ : ಅದ್ರಲ್ಲೇ ಪಾ ಇರೋದು ಸುಖ.

ಮೂರ್ತಿ : ಎಮ್ಮೆಗೆ ಕೊಚ್ಚೇಲ್ ಸುಖ, ಕತ್ತೆಗೆ ಬೂದಿಲ್ ಸುಖ, ನೊಣಕ್ಕೆ ತಿಪ್ಪೇಲ್ ಸುಖ. ನಿನ್ನಂಥ ತಲೆಹಿಡುಕರಿಗೆ ನರಕದಲ್ಲೇ ಕಣೋ ಸುಖ..

(ಹೊಡೆದಾಟ ಪ್ರಾರಂಭವಾಗಿ ಮೂರ್ತಿ ವ್ಯಾಸರಾಯನ ಕಡೆಯವರ ಜೊತೆ ಕಾಳಗವಾಡುತ್ತಿರುವಾಗ ವ್ಯಾಸರಾಯ ತಪ್ಪಿಸಿಕೊಳ್ಳಲು ಓಡುತ್ತಿರುತ್ತಾನೆ. ಓಡುವಾಗ ಆತನ ಕಾಲು ರೈಲು ಹಳಿಯಲ್ಲಿ ಸಿಕ್ಕಿಹಾಕಿಕೊಳ್ಳುತ್ತದೆ. ಅದೇ ಸಮಯಕ್ಕೆ ಎದುರಿಗೆ ರೈಲೊಂದು ಬರುತ್ತಿರುವುದನ್ನು ಗಮನಿಸಿ ಗಾಬರಿಯಿಂದ ವ್ಯಾಸರಾಯ ಬಲವಾಗಿ ಬಿಡಿಸಿಕೊಳ್ಳುವ ಪ್ರಯತ್ನ ಮಾಡುತ್ತಿರುತ್ತಾನೆ. ವ್ಯಾಸರಾಯನನ್ನು ಬಿಡಿಸಲು ಬರುವ ಮೂರ್ತಿಯನ್ನು ಇಂದಿರಾ ತಡೆಯುತ್ತಾಳೆ. ರೈಲು ವ್ಯಾಸರಾಯನ ಮೇಲೆ ಹರಿಯುತ್ತದೆ. ಮೂರ್ತಿ, ಇಂದಿರಾ ಇಬ್ಬರೂ ರೈಲ್ವೇ ಹಳಿಯ ಮೇಲೆ ನಡೆಯುತ್ತ ಜೊತೆಯಾಗುತ್ತಾರೆ)

**ಚಲನಚಿತ್ರದ ಮುಕ್ತಾಯ.**

**ನಿರ್ದೇಶಕರ ಟಿಪ್ಪಣಿ**

**ಆಕಸ್ಮಿಕಗಳ ಸರಮಾಲೆಯನ್ನು ಹೊತ್ತುಕೊಳ್ಳುತ್ತ ಜೊತೆಗೆ ನಾಟಕೀಯ ತಿರುವುಗಳನ್ನು ನೀಡುತ್ತ ಕನ್ನಡದ ಪ್ರೇಕ್ಷನನ್ನು ರೈಲಿನ ಪಯಣದ ಉದ್ದಕ್ಕೂ ಹೊಸ ಭಾವ ಸಮಾಧಿಗೆ ಕೊಂಡೊಯ್ಯುತ್ತ "ತ.ರಾ.ಸು"ರವರ ಮೂಲ ಕಥೆ ಆಕಸ್ಮಿಕ, ಅಪರಾಧಿ, ಪರಿಣಾಮದ ಇನ್ನೊಂದು ಅಭಿವ್ಯಕ್ತಿಯನ್ನು ಈ ಚಿತ್ರಕಥೆಯ ಮುಖಾಂತರ ಚಿತ್ರವು ಸಾಧಿಸಿದೆ. ಈ ಚಿತ್ರಕಥೆಯ ಹಿಂದಿರುವ ಹಲವು ಬುದ್ಧಿವಂತ ಮನಸ್ಸುಗಳು ಒಂದು ಸಾಂಘಿಕ ಕ್ರಿಯೆಗೆ ಸಾಕ್ಷಿಯಾಗಿ, ಇತಿಹಾಸವಾಗಿ, ದಾಖಲೆಯಾಗಿ ಉಳಿದಿದೆ.**